FOOD AND FAMINE SITUATION IN THE STATE

(Debate continued)

*ಶ್ರೀ ಎಚ್. ಸಿ ಲಿಂಗಾರೆಡ್ಡಿ (ಮಾಲೂರು).—ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಮತ್ತು ಇವೊತ್ತಿನ ದಿವಸ ನಮ್ಮ ಸಂಸ್ಥಾನದ ಆಹಾರದ ಪರಿಸ್ಥಿತಿ ಮತ್ತು ಕ್ಷಾಮದ ಪರಿಸ್ಥಿತಿಗೆ ಸಂಬಂಧವಾಗಿ ತಾವು ಮತ್ತು ಸರಕಾರದವರು ಈ ಒಂದು ಅವಕಾಶವನ್ನು ಕಲ್ಪಿಸಿ ಕೊಟ್ಟದ್ದಕ್ಕಾಗಿ ಮತ್ತು ಆಹಾರದ ಪರಿಸ್ಥಿತಿ ಹೇಗಿದೆ ಎನ್ನುವ ಬಗ್ಗೆ ಮಾನ್ಯ ರೆವೆನ್ಯೂ ಮಂತ್ರಿಗಳು ನಿನ್ನೆಯ ದಿವಸ ಒಂದು ಹೇಳಿಕೆಯನ್ನು ಕೊಟ್ಟು ಈ ಮಾನ್ಯ ಸಭೆಯ ಮುಂದೆ ಬಹಳ ಸಂಕ್ಷೇಪವಾಗಿ ಆಹಾರದ ಮತ್ತು ಕ್ಷಾಮದ ಪರಿಸ್ಥಿತಿಯನ್ನು ತಿಳಿಸಿದ್ದಕ್ಕಾಗಿ ಅವರನ್ನು ಮೊದಲನೆಯದಾಗಿ ವಂದಿಸುತ್ತೇನೆ. ಆದರೂ ಸರ್ಕಾರದವರು ಈಗ ಸುಮಾರು 1943ನೆಯ ಇಸವಿಯಲಾಗಾಯ್ತು ನಮ್ಮ ಸಂಸ್ಥಾನದಲ್ಲಿ ಆಹಾರವನ್ನು ಹೆಚ್ಚಾಗಿ ಬೆಳೆಯಿರಿ ಎಂಬ ಯೋಜನೆಯಲ್ಲಿ ಕೈಗೊಂಡಿರತಕ್ಕ ಕಾರ್ಯಕ್ರಮಗಳಿಗಾಗಿ ಎಷ್ಟು ಹಣವನ್ನು ಹೆಚ್ಚಿಸಿದ್ದಾರೆ ಎಂಬುದನ್ನೂ ತಿಳಿಸಿದ್ದರೆ ಚೆನ್ನಾಗಿತ್ತು. ಈ ರೀತಿಯಾಗಿ ಹೆಚ್ಚಿನ ಆಹಾರವನ್ನು ಬೆಳೆಯುವುದಕ್ಕಾಗಿ ನಾನಾ ವಿಧವಾದ ಕಾರ್ಯಕ್ರಮಗಳನ್ನೇನೋ ತೆಗೆದುಕೊಂಡಿದ್ದಾರೆ. ಇದಕ್ಕಾಗಿ ಮೊದಲನೇ ಮತ್ತು ಎರಡನೆಯ ಪಾಂಚವಾರ್ಷಿಕ ಯೋಜನೆ ಎಂದು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಹಾಗೆ ಹಾಕಿಕೊಂಡಿದ್ದರೂ ಕೂಡ ಈ ಆಹಾರದ ಅಭಾವ ಇನ್ನೂ ಇದ್ದಲ್ಲಿಯೇ ಇದೆ ಎಂದೆನಿಸುತ್ತಿದೆ. ಈ ಆಹಾರದ ಅಭಾವವು ಮುಂದೆ ಎಂದಿಗೆ ಮುಗಿಯುವುದೋ ಮತ್ತು ಇನ್ನೂ ಎಷ್ಟು ಯೋಜನೆಗಳನ್ನು ಹಾಕಬೇಕೋ ಎನ್ನುವುದರಲ್ಲಿ ನನಗೆ ಕೂಡ ಶಂಕೆಯಾಗಿದೆ. ಇವೊತ್ತಿನ ದಿವಸ ಧಾನ್ಯಗಳ ಬೆಲೆ ವಿಪರೀತವಾಗಿ ಏರಿರುವುದರಿಂದ ಸರಕಾರದವರು ದಿನಸಿ ಮಳಿಗೆಗಳನ್ನು ತೆರೆಯಬೇಕಾದುದು ಆವಶ್ಯಕವಾಗಿದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ನ್ಯಾಯವಾದ ಬೆಲೆಗೆ ಆಹಾರ ದೊರಕಲು ಹೆಚ್ಚು ಹೆಚ್ಚಾಗಿ ದಿನಸಿ ಮಳಿಗೆಗಳನ್ನು ಸರ್ಕಾರ ಪ್ರಾರಂಭ ಮಾಡಿರುವುದಿಲ್ಲ. ಅದಲ್ಲದೆಯೂ ಎರಡು ಮೂರು ತಿಂಗಳಿನಿಂದ ಕ್ಷಾಮ ಪರಿಸ್ಥಿತಿ ಉಂಟಾಗಿ ದವಸ ಧಾನ್ಯಗಳು ನ್ಯಾಯವಾದ ಬೆಲೆಗೆ ಸಿಕ್ಕುತ್ತಿಲ್ಲ. ಅಕ್ಕಿ ಒಂದು ರೂಪಾಯಿಗೆ ಒಂದೂಕಾಲು ಸೇರು ಅಥವಾ ಒಂದೂವರೆ ಸೇರು ಪ್ರಕಾರ ಮಾರಾಟವಾಗುತ್ತಿದೆ. ಬಡ ಜನರಿಗೆ, ಮಧ್ಯಮ ವರ್ಗದವರಿಗೆ ಬಹಳ ಕಷ್ಟವಾಗಿದೆ. ಆದುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ನ್ಯಾಯ ಬೆಲೆಯ ಅಂಗಡಿಗಳನ್ನು ಅಧಿಕವಾಗಿ ತೆರೆಯಬೇಕು. ದವಸ ಧಾನ್ಯಗಳ ಮಳಿಗೆಗೆ ಸರಬರಾಜು ಆಗುತ್ತಿಲ್ಲ. ಆದುದರಿಂದ ಅಂಕಿಅಂಶಗಳನ್ನು ತರಿಸಿಕೊಂಡು ಅಭಾವ ಪರಿಸ್ಥಿತಿ ಇದೆ ಎಂದು ಕೇಂದ್ರ ಸರಕಾರದ ಗಮನಕ್ಕೆ ತರಬೇಕು ಮತ್ತು ಹೆಚ್ಚು ಫೇರ್ ಪ್ರೈಸ್ ಡಿಪೋಗಳನ್ನು ತೆರೆಯಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೋಲಾರ ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ ಹೆಚ್ಚಾಗಿದೆ. ಹೋಬಳಿಗೆ ಒಂದು ಫೇರ್ ಪ್ರೈಸ್ ಡಿಪೋ ಕೊಡುವ ಏರ್ಪಾಡು ಮಾಡಿಲ್ಲ. ಪರಿಹಾರ ಕಾಂಗಾರಿಗಳಿಗೆ ಜನರು ಬರುತ್ತಿಲ್ಲ ಎಂಬುದು ಸುಳ್ಳು. ಕ್ಷಾಮದ ಪರಿಸ್ಥಿತಿಯು ಯಾವ ಸ್ವರೂಪವನ್ನು ತಾಳಿದೆ ಎಂಬುದರ ಬಗ್ಗೆ ಸರಿಯಾದ ವರದಿಯನ್ನು ತರಿಸಿ ತಿಳಿದುಕೊಳ್ಳಬೇಕು. ಈ ಉದ್ದೇಶಕ್ಕಾಗಿ ಪ್ರತಿಯೊಂದು ಜಿಲ್ಲೆಯಲ್ಲಿ, ತಾಲ್ಲೂಕಿನಲ್ಲಿ ಕ್ಷಾಮ ನಿವಾರಣಾ ಸಮಿತಿ ಏರ್ಪಾಡು ಮಾಡಬೇಕು. ಹೆಚ್ಚಿಗೆ ಕ್ಷಾಮ ನಿವಾರಣಾ ಕಾರ್ಯ ಆರಂಭಿಸಿ ಕಷ್ಟ ಪರಿಸ್ಥಿತಿಯನ್ನು ಹೋಗಲಾಡಿಸುವುದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ತಿಳಿಸಲು ಇಚ್ಛಿಸುತ್ತೇನೆ.

ಜಿಲ್ಲಾಧಿಕಾರಿಗಳೂ, ತಾಲ್ಲೂಕು ಅಧಿಕಾರಿಗಳೂ ನಿಷ್ಪಕ್ಷಪಾತ ದೃಷ್ಟಿಯಿಂದ ಜನರ ಕಷ್ಟವನ್ನು ಅರಿತುಕೊಂಡು, ತಾಲ್ಲೂಕಿಗೆ ಒಂದು ಸಮಿತಿಯನ್ನು ಏರ್ಪಾಡುಮಾಡಿ ಅದರ ಮುಖಾಂತರ ಕ್ಷಾಮ ನಿವಾರಣಾ ಕಾಂಗಾರಿಗಳನ್ನು ಮಾಡುವುದಕ್ಕೆ ಇನ್ನೂ ಹೆಚ್ಚಾಗಿ ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬಡ್ಜೆಟ್ಟು ಅನಿವಾರ್ಯವಾಗಿ ಪಾಸು ಆಗುವುದು. ಬಡ್ಜೆಟ್ಟಿನಲ್ಲಿ ಅನೇಕ ಗ್ರ್ಯಾಂಟುಗಳು ಇವೆ. ಕುಡಿಯುವ ನೀರಿನ ಬಾವಿಗಳು, ಸಂಚಾರ ಸೌಕರ್ಯ, ಮನೆಗಳನ್ನು ಕಟ್ಟುವುದು, ರೂರಲ್ ಸಾನಿಟೇಷನ್—ಈ ರೀತಿ ನಾನಾ ವಿಧವಾದ ಬಾಬುಗಳ ಹಣ ಗ್ರಾಮಾಂತರ ಪ್ರದೇಶಗಳಿಗೆ ಮುಟ್ಟುವುದಿಲ್ಲ. ಇವುಗಳ ಜೊತೆಗೆ ಕೆರೆಗಳ ರಿಪೇರಿ, ಜೀರ್ಣೋದ್ಧಾರ ಮುಂತಾದ ಸಾಮಾನ್ಯ ಕೆಲಸಗಳನ್ನು ಪ್ರಾರಂಭಿಸಿದರೆ ಜನರಿಗೆ ಕೆಲಸ ಸಿಕ್ಕಲು ಅವಕಾಶವಾಗುವುದು. ಮಾನ್ಯ ಸದಸ್ಯರುಗಳೂ, ಮಂತ್ರಿಗಳೂ, ಸರಕಾರದ ಎಲ್ಲ ಅಧಿಕಾರಿಗಳೂ ಉತ್ಸಾಹದಿಂದ ಕ್ಷಾಮ ನಿವಾರಣಾ ಪರಿಹಾರ ಕಾಂಗಾರಿಗಳ ಏರ್ಪಾಡು ಮಾಡಬೇಕು. ರೆವೆನ್ಯೂ ಮಂತ್ರಿಗಳು ಕ್ಷಾಮ ಪ್ರದೇಶದಲ್ಲಿ ಖುದ್ದಾಗಿ ಸಂಚಾರಮಾಡಿ, ಪರಿಸ್ಥಿತಿಯನ್ನು ತಿಳಿದುಕೊಂಡು ಕ್ಷಾಮ ನಿವಾರಣಾ ಕಾಂಗಾರಿಗಳನ್ನು ಆದಷ್ಟು ಜಾಗ್ರತೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

*Sri S. D. KOTHAVALE (Chikodi).—Mr. Speaker, Sir, the Hon'ble the Revenue Minister has initiated the debate on the scarcity conditions prevailing in some parts of the State by making a statement as regards the shortage of food and the paucity of rainfall in certain areas. He has indicated in his short statement how due to the paucity of rainfall in certain areas, scarcity conditions have arisen and how food shortage had occurred. I think it is for the Hon'ble House to debate this point—the point of scarcity conditions and the shortage of food and not the overall food situation prevailing in the country. The food problem, Sir, is the problem to be tackled on an All-India basis, with the co-operation of the Central Government and the State Governments. The overall problem of food cannot be tackled by one State alone. This problem can be tackled in two ways. There are long-term remedies as well as short term remedies. We were here concerned not with the long term remedies but we are concerned with the immediate question of providing relief to persons

(SRI S. D. KOTHAVALE)
who are residing in the scarcity areas and we are not concerned here with the overall food problem with which our country is faced. This being the case, some of the Hon'ble Members who participated in the debate have mistaken the scope of the debate and have enlarged upon points which are not strictly relevant, not directly relevant to the problem at issue. I therefore think that the sharp criticisms that are levelled by the Hon'ble Members had very little relevance in this connection. The complaints made by some Hon'ble Members about certain statistics which were very essential regarding food production and regarding various other measures that were taken during the previous year and during the last 10 years, were in my view not at all relevant. The only relevant question is, what is the immediate cause of scarcity conditions and the means the Government have devised to provide relief. Therefore, the suggestion that is made by some of the Hon'ble Members here that statistics are not given here and the various measures taken during the last five or six years by this Government and by the previous Government are not given here, I submit, has no relevance at all. Next, Sir, it was pointed out—by one of the Hon'ble Members, I think it is Mr. Bheemappa Naik—that food statistics given from 1952-53 to 1955-56 were not correct. I do not understand on what basis he has made that assertion. Of course, it is very necessary to justify such a statement by giving certain materials for the decision of this Hon'ble House while making a statement to that effect. The Hon'ble Member has not understood the position correctly. His difficulty, perhaps was about what happened to the increased food production. Of course, there was nearly 45 per cent increase in the food production. What has happened to the increased production ? The answer is not far to seek. The population has arisen and the people are using food substances to a very large extent. Well, it is a happy sign. But whether we are able to supply food and other necessities of life in larger quantities to the people is another matter. That point, Sir, is not very relevant here. There was one more suggestion made by some of the Hon'ble Members that big irrigation schemes had not been completed in good time and therefore they had not yielded the necessary results. It has been found in actual practice that due to certain difficulties our agriculturists have not been able to utilise water facilities afforded by irrigation works. That is another problem. It is the duty of the Government and of the public workers to see that agriculturists got the necessary help in this connection to enable them to utilise the full water supply facilities afforded by the irrigation works. These are matters which are not strictly relevant here. Our problem is to see whether scarcity conditions have arisen and whether adequate measures are taken by the Government and whether the Government proposes to take further steps in order to mete out complete relief to suffers. In this connection it is gratifying to note that the Hon'ble the Revenue Minister has made it clear that to start with Rs. 2 lakhs have been made available for the purpose and he has assured us that the Government was ready to supply further amounts if and when it was found necessary. Fortunately for us, scarcity conditions which were threatened in some parts of the State,—in some parts of Belgaum—have been averted by timely rains. There also, I may bring to the notice of the Hon'ble Members, though the crop for the time being is in good condition, there are not adequate rains or rains sufficient to supply water to the wells and tanks and such like water facilities. Let us hope that by the Grace of God, we shall be having further rains, but if rains are not available to the expected extent, some relief measures will have to be taken there also. May I suggest in this connection that it would be useful for the State to create a fund which can be termed as Famine Fund. In other States, for instance, in Bombay, there was Famine Fund. Formerly, it was Rs. 1 crore; it was raised up to Rs. 2 crores during the year 1956 or so. The

creation of such fund, Sir, will serve a very useful purpose. The purpose is this: in conditions of emergency, when famine and scarcity conditions exist without disturbing the normal working of the Government, it becomes possible for the Government to provide for such emergencies. Therefore, I suggest that a fund called Famine Fund may be immediately created so that it will be a sort of security, it shall be a sort of insurance against such unfortunate occurrences. It is gratifying to note that the Government have opened fair price shops, making grains available to the people at reasonable rates. The Minister has assured us that the number of shops might be increased in course of time and food would be made available to the people. One objection that was raised by some of the Hon'ble Members was that the foodgrain shops supplied only wheat and such other things and not rice and ragi. The complaint was made by people who are accustomed to particular food here as how they should utilise wheat and other things. Our top leaders have told us that it is high time for us to change our food habits It is not possible to import ragi and rice from outside. The difficulty is there. The difficulty of foreign exchange is very commonly known to all of us. It is not easy to provide rice and ragi everywhere. It is high time that we change our food habits. It is pointed out that for the purpose of using wheat, it is necessary to have ghee or oil. I learn from my friends that ghee is also necessary for the use of ragi. Therefore this difficulty is not peculiar to the use of wheat. There are poor people in the North whose staple food is wheat. The poor people there consume wheat without oil or ghee without feeling any difficulty. I fail to understand how that difficulty can arise here. It is a case, therefore, of changing our food habits. I suggest, we, the public workers and Hon'ble Members of this House, should try our level best to pursuade the people to change their food habits.

3-30 P.M.

There are Multi-purpose Societies. My friend Sri D. Devaraj Urs said that supply of necessary things for agricultural production was not being made in time and properly. Things like seeds, manure etc., and takkavi loans were not made available to the agriculturists in time. It is true. Our services have not been able to keep pace with the events with which the agriculturists are faced. Therefore, Government must take this matter quite seriously and see that the governmental agency works more actively. There is one more remedy for this. There are co-operative societies and multi-purpose co-operative societies. Such societies must be located in rural parts so that they may be easily approachable by the agriculturists for loans and advance loans against agricultural produce. If we approach the problem that way, the problem would be easily solved. It is gratifying that the Government is trying to do its level best to meet the situation and it is the duty of Hon'ble Members to help Government in its effort.

*ಶ್ರೀ ಎಂ. ಸಿ. ನರಸಿಂಹನ್ (ಕೋಲಾರ ಚಿನ್ನದಗಣಿ ಪ್ರದೇಶ).—ಮಾನ್ಯ ಅಧ್ಯಕ್ಷರೆ, ಈ ಎರಡು ದಿವಸದ ಚರ್ಚೆ ನೋಡಿದರೆ ಮತ್ತು ಆಹಾರ ಸಚಿವರು ಕೊಟ್ಟಿರತಕ್ಕಂಥ ಹೇಳಿಕೆಯನ್ನೆಲ್ಲಾ ನೋಡಿದರೆ, ಈ ಆಹಾರ ಸಚಿವರುಗಳೆಲ್ಲಾ ಅಲಂಕಾರಶಾಸ್ತ್ರದಲ್ಲಿ ನಿಪುಣರು ಎಂದು ಕಂಡುಬರುತ್ತದೆ. ತಮಗೆಲ್ಲಾ ಗೊತ್ತಿರುವಂತೆ ಅಲಂಕಾರಶಾಸ್ತ್ರ ಎನ್ನುವುದನ್ನು ಹಿಂದೂ ಸಂಸ್ಕೃತಿಯಲ್ಲಿ ಬಹಳ ಉತ್ಪ್ರೇಕ್ಷೆಯ ಮೇಲೆ ಬೆಳೆದಿದೆ. ಯಾವ ಕವಿ ಸ್ವಲ್ಪ ಉತ್ಪ್ರೇಕ್ಷೆಯಲ್ಲಿ ಉತ್ತೀರ್ಣನಾಗಿರುತ್ತಾನೋ, ಅವನನ್ನು ಅಲಂಕಾರಶಾಸ್ತ್ರದಲ್ಲಿ ನಿಪುಣ ಎಂದು ಹೇಳುವುದು ವಾಡಿಕೆ. ಈ ಆಹಾರ ಸಚಿವರುಗಳ ಹೇಳಿಕೆಗಳನ್ನೆಲ್ಲಾ ನೋಡಿದರೆ—ಅಖಿಲ ಭಾರತ ಆಹಾರ ಸಚಿವರನ್ನು ಇದರಲ್ಲಿ ಸೇರಿಸಿಕೊಳ್ಳಬಹುದು—ಯಾರು ಬಹಳ ಜಾಣ್ಮೆಯಿಂದ, ಒಂದು ಉತ್ಪ್ರೇಕ್ಷೆಯಿಂದ ವರದಿ ಮಾಡುವುದರಲ್ಲಿ ನಿಪುಣರಾಗಿರುತ್ತಾರೋ, ಅಂತಹವರನ್ನೇ ಆಹಾರ ಸಚಿವರನ್ನಾಗಿ ಆರಿಸಿಕೊಳ್ಳುತ್ತಾರೆ ಎಂದು ಕಾಣುತ್ತದೆ. ನಮ್ಮ ಆಹಾರ ಸಚಿವರು ಹೇಳಿದರು : "ಸ್ವಲ್ಪ ದುಷ್ಕಾಲ ಪರಿಸ್ಥಿತಿ ಬಂದಿದೆ. ಅಭಾವ ಪರಿಸ್ಥಿತಿಯ ಬಗ್ಗೆ ಯಾವ ಅಧೈರ್ಯಕ್ಕೂ ಕಾರಣವಿಲ್ಲ, ಸರ್ಕಾರದವರನ್ನು ನಂಬಿದರೆ ಎಲ್ಲಾ ಸರಿಹೋಗುತ್ತದೆ" ಎಂದು. ಶ್ರೀ ಎಚ್. ಎಂ. ಚನ್ನಬಸಪ್ಪನವರು ಹೇಳಿದ ಹಾಗೆ, ದುರದೃಷ್ಟವಶಾತ್ ಈ ಸಮಸ್ಯೆಯನ್ನು ಒಂದು ಯುದ್ಧ ಕಾರ್ಯಾಚರಣೆಯ ರೀತ್ಯ ಪರಿಹರಿಸಲು ಸರ್ಕಾರ ಕಾರ್ಯಕ್ರಮ ಕೈಕೊಂಡಿಲ್ಲವಲ್ಲಾ ಎಂದು ವಿಷಾದಿಸಬೇಕಾಗಿದೆ. ಸಾಮಾನ್ಯ ಸಮಸ್ಯೆಗಳನ್ನೂ ಬಗೆಹರಿಸುವಂಥ ಒಂದು ಮನೋಭಾವ ಸರ್ಕಾರದ ಹೇಳಿಕೆಯಲ್ಲಿರುವುದನ್ನು ನೋಡಿ ಬಹಳ ಆಶ್ಚರ್ಯವಾಗುತ್ತದೆ. ಈ ಸಮಸ್ಯೆಯನ್ನು ಪರ್ಮನೆಂಟ್ ತಳಹದಿಯ ಮೇಲೆ ಬಗೆಹರಿಸಬೇಕು ಎನ್ನುವ ಒಂದು ಅಂಶ ಈ ಹೇಳಿಕೆಯಲ್ಲಿ ಕಾಣಲಿಲ್ಲ. ಡಿಸೆಂಬರ್ ತಿಂಗಳವರೆಗೆ ಕೇಂದ್ರ ಸರ್ಕಾರದವರು ಮೈಸೂರು ಸರ್ಕಾರ್

(ಶ್ರೀ ಎಂ. ಸಿ. ನರಸಿಂಹನ್)

ಸರ್ಕಾರಕ್ಕೆ ಅಕ್ಕಿಯನ್ನು ಸಪ್ಲೈ ಮಾಡುವ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆಂದು ಸಚಿವರು ಹೇಳಿದ್ದಾರೆ. ಡಿಸೆಂಬರ್ ನಂತರ ಆಹಾರ ಪರಿಸ್ಥಿತಿಯನ್ನು ಬಗೆಹರಿಸುವುದಕ್ಕೆ ಏನು ಏರ್ಪಾಡು ಮಾಡುತ್ತಾರೆಂದು ಸರ್ಕಾರ ಹೇಳಿಲ್ಲ. ಡಿಸೆಂಬರ್ ನಂತರ ಹೊಸ ಕ್ರಾಪ್ಸ್ ಬರುತ್ತವೆ ಎಂದು ನಾವು ಊಹೆ ಮಾಡಿಕೊಳ್ಳುವುದು ತಪ್ಪಾಗುತ್ತದೆ. ಜೂನ್-ಜುಲೈ ತಿಂಗಳಲ್ಲಿ ನಡೆದ ಆಹಾರ ಸಚಿವರ ಸಮ್ಮೇಳನದಲ್ಲಿ ಸೆಪ್ಟೆಂಬರ್ ಅಕ್ಟೋಬರ್ ತಿಂಗಳವರೆಗೆ ಮೈಸೂರಿಗೆ ಅಕ್ಕಿಯನ್ನು ಕೊಡುವ ನಿರ್ಧಾರವಾಗಿತ್ತು. ಅಕ್ಟೋಬರ್ ತಿಂಗಳವರೆಗೆ ನಮ್ಮ ಸ್ಟಾಕ್ ಸಾಕಾಗುತ್ತದೆ ಎಂದು ನಮ್ಮ ಸರ್ಕಾರದವರು ಕೇಂದ್ರಕ್ಕೆ ತಿಳಿಸಿದ್ದರೆ ಡಿಸೆಂಬರ್, ಜನವರಿ, ಫೆಬ್ರವರಿ ತಿಂಗಳಲ್ಲಿ ಆಹಾರ ಪರಿಸ್ಥಿತಿಯನ್ನು ಸುಧಾರಿಸುವುದು ಹೇಗೆ? ಆವಾಗ ಬಿಕ್ಕಟ್ಟಿನ ಪರಿಸ್ಥಿತಿ ಉಂಟಾಗುವುದಿಲ್ಲವೇ? ದವಸಗಳ ಬೆಲೆ ಜಾಸ್ತಿಯಾಗುವುದಿಲ್ಲವೇ? ಹೀಗೆ ಡಿಸೆಂಬರ್ ತಿಂಗಳವರೆಗೆ ಮಾತ್ರ ನಮ್ಮ ಒಪ್ಪಂದ ಇದ್ದರೆ, ಈ ತಿಂಗಳು ಬಂದ ತಕ್ಷಣ, ಗ್ರೇನ್ ಮರ್ಚೆಂಟ್ಸ್ ಏನು ಮಾಡುತ್ತಾರೆ? ಜನವರಿ, ಫೆಬ್ರವರಿ ತಿಂಗಳಲ್ಲಿ ಬೆಲೆಯನ್ನು ಏರಿಸುತ್ತಾರೆ. ಈ ಕಾಲದಲ್ಲಿ ಹೊರಗಿನಿಂದ ಸಹಾಯ ಬಾರದಿದ್ದರೆ, ಈ ಸಮಸ್ಯೆಯನ್ನು ಬಗೆಹರಿಸುವುದು ಹೇಗೆ? ಡಿಸೆಂಬರ್ ತಿಂಗಳೊಳಗೆ ಈ ಸಮಸ್ಯೆಯನ್ನು ಹೇಗೆ ಬಗೆಹರಿಸುತ್ತೇವೆಂದು ನಮಗೆ ಹೇಳಿಕೆ ಕೊಡದಿರುವುದು ಬಹಳ ವಿಷಾದ.

[MR. DEPUTY SPEAKER in the Chair.]

ಇನ್ನು ಅಂಕಿ ಅಂಶಗಳ ಬಗ್ಗೆ ಒಂದೆರಡು ಮಾತು. ಸುಮ್ಮನೆ ಉತ್ಪ್ರೇಕ್ಷೆಮಾಡಿ ವರದಿ ಮಾಡುವುದರಲ್ಲಿ ಆಗಿಂದಾಗ್ಗೆ ಪ್ರಯತ್ನ ಮಾಡುತ್ತಿದ್ದೀರಿ. ಸರ್ಕಾರ ಎರಡು ಸ್ಟ್ಯಾಟಿಸ್ಟಿಕಲ್ ಪುಸ್ತಕಗಳನ್ನು ಪಬ್ಲಿಷ್ ಮಾಡಿದ್ದಾರೆ. ಒಂದು ಮೈಸೂರು ಅಗ್ರಿಕಲ್ಚರಲ್ ಕ್ಯಾಲೆಂಡರ್ ಎಂದು. ಇದರ ಪ್ರಕಾರ Karnataka is self-sufficient in food grains. ಏಕೆಂದರೆ 1956-57ರಲ್ಲಿ 28·3 ಲಕ್ಷ ಟನ್ ದವಸ ಉತ್ಪತ್ತಿಯಾಗಿದೆ. ಇನ್ನೊಂದು ಪುಸ್ತಕವನ್ನು ಪ್ರಿಂಟ್ ಮಾಡಿದ್ದಾರೆ. ಅದು ಅಷ್ಟು ಚೆನ್ನಾಗಿ ಪ್ರಿಂಟ್ ಆಗಿಲ್ಲ. ಇದರಲ್ಲಿರುವ ಇನ್‌ಫರ್‌ಮೇಷನ್ ಕರೆಕ್ಟ್ ಆಗಿದೆ ಎಂದು ಭಾವಿಸುತ್ತೇನೆ. ಈ ಪ್ರಕಟಣೆ ಪ್ರಕಾರ ಫುಡ್ ಪ್ರೊಡಕ್ಷನ್ 38 ಲಕ್ಷ ಟನ್ ಇದೆ. ಈ ಬುಲೆಟಿನ್‌ಗೂ, ಅಗ್ರಿಕಲ್ಚರಲ್ ಕ್ಯಾಲೆಂಡರ್‌ಗೂ ಹತ್ತು ಲಕ್ಷ ಟನ್ ವ್ಯತ್ಯಾಸವಿದೆ. We should be more than self-sufficient in foodgrains. ಅಂಕಿ ಅಂಶಗಳಲ್ಲಿ ಇಂಥ ಡಿಸ್ಕ್ರೆಪೆನ್ಸಿ ಇರುವುದು ಬಹಳ ಶೋಚನೀಯ. ಇಂತಹ ಅಂಕಿ ಅಂಶಗಳಿಂದ, ಯಾವ ರೀತಿ ಪರಿಸ್ಥಿತಿ ಇದೆ ಎಂದು ನಾವು ತಿಳಿದುಕೊಳ್ಳುವುದು ಹೇಗೆ? ಅವುಗಳ ಆಧಾರದ ಮೇಲೆ ಒಂದು ನಿಲುವನ್ನು ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಪಂಜಾಬ್ ಮತ್ತು ದೆಹಲಿ ಯೂನಿವರ್ಸಿಟಿಯಲ್ಲಿ ಅರ್ಥಶಾಖೆಯ ಮೂಲಕವಾಗಿ food price, price trend ಮತ್ತು production trendಗಳ ವಿಚಾರದಲ್ಲಿ ಆಗಿಂದಾಗ್ಗೆ ವರದಿಯನ್ನು ಪ್ರಕಟಿಸುತ್ತಾರೆ. ಮೈಸೂರು ಯೂನಿವರ್ಸಿಟಿಯವರು ಏಕೆ ಹೀಗೆ ಮಾಡುವುದಿಲ್ಲ? ನಮ್ಮ ಸ್ಟೇಟ್ ಡಿಫಿಸಿಟ್ ಸ್ಟೇಟ್ ಎಂದು ಹೇಳುತ್ತೀರಿ. ಹಾಗಾದರೂ ಏಕೆ ರಿಲೈಬಲ್ ಅಂಶಗಳನ್ನು ಸಂಗ್ರಹಿಸುವುದಿಲ್ಲ? ಚೈನಾಕ್ಕೆ ಒಂದು ಅಗ್ರಿಕಲ್ಚರಲ್ ಡೆಲಿಗೇಷನ್ ಹೋದಾಗ ಹೇಳಿದರು: ಚೈನಾದಲ್ಲಿ ಸ್ಟ್ಯಾಟಿಸ್ಟಿಕಲ್ ಆರ್ಗನೈಸೇಷನ್ ಇಫೆಕ್ಟಿವ್ ಎಂದು. ಚೈನಾದಲ್ಲಿ ಸ್ಟ್ಯಾಟಿಸ್ಟಿಕಲ್ ಆರ್ಗನೈಸೇಷನ್ ಅಷ್ಟು ಮುಂದುವರಿದಿಲ್ಲ ಎಂದು ವರದಿ ಮಾಡಿದ್ದಾರೆ. ಆದರೆ ಇಲ್ಲಿ ನೋಡಿದರೆ, ಒಂದಕ್ಕೊಂದಕ್ಕೆ ಹೊಂದಾಣಿಕೆ ಇಲ್ಲ. ಇಷ್ಟು ಹೇಳಿದ ಅಂಶವನ್ನು ನಾಳೆ ಒಪ್ಪಿಕೊಳ್ಳುವುದಿಲ್ಲ. ಪ್ಲಾನಿಂಗ್ ಯಶಸ್ವಿಯಾಗಬೇಕಾದರೆ, ಸ್ಟ್ಯಾಟಿಸ್ಟಿಕಲ್ ಇನ್‌ಫರ್‌ಮೇಷನ್ ಮುಂದುವರಿಯಬೇಡವೇ? ಇನ್ನೊಂದು ಅಂಶವೇನೆಂದರೆ, 1954-55ನೆಯ ಇಸವಿಯಲ್ಲಿ, ಮಾನ್ಯ ಆಹಾರಸಚಿವರು ಒಂದು ಕಾನ್ಫಿಡೆನ್ಷಿಯಲ್ ನೋಟ್‌ನಲ್ಲಿ, ನಾವು ಆಹಾರ ಸಮಸ್ಯೆಯನ್ನು ಬಗೆಹರಿಸಿಬಿಟ್ಟಿದ್ದೇವೆ, ಪಂಚವಾರ್ಷಿಕ ಯೋಜನೆ ಸಕ್‌ಸೆಸ್‌ಫುಲ್ ಆಗಿದೆ ಎಂದು ಹೇಳಿದ್ದರು. ಈ ಅಭಿಪ್ರಾಯ ಕೊಟ್ಟಿದ್ದು ಎಲೆಕ್ಷನ್ನಿಗೆ ಮುಂಚೆ. ಇವರು ವಾಸ್ತವಾಂಶವನ್ನು ಕೊಟ್ಟಿದ್ದಾರೆಯೇ?

ಇನ್ನು ಎರಡನೆಯ ಅಂಶವೆಂದರೆ ಫೇರ್ ಪ್ರೈಸ್ ಡಿಪೋಗಳು ಸಾಕಷ್ಟು ಇಲ್ಲ. ಇದು ಏಕೆ ಸರ್ಕಾರಕ್ಕೆ ಮನವರಿಕೆಯಾಗಿಲ್ಲ? ಇನ್ನುಮೇಲಾದರೂ ಅವರು ಜಾಸ್ತಿ ಡಿಪೋಗಳನ್ನು ತೆರೆಯಬೇಕು. ಕೇರಳದಲ್ಲಿರ ತಕ್ಕಂಥ ಜನಸಂಖ್ಯೆ, ಇಲ್ಲಿನ ಅರ್ಧದಷ್ಟೂ ಇಲ್ಲ. ಅಲ್ಲಿ 6,200 ಫೇರ್‌ಪ್ರೈಸ್ ಡಿಪೋಗಳನ್ನು ಓಪನ್ ಮಾಡಿದ್ದಾರೆ. ಮೈಸೂರು ರಾಜ್ಯದಲ್ಲಿ 1,600ಕ್ಕಿಂತ ಮೇಲೆ ಇಲ್ಲ. ಆದ್ದರಿಂದ ನಮ್ಮಲ್ಲಿ ಫೇರ್‌ಪ್ರೈಸ್ ಡಿಪೋಗಳನ್ನು ನಮ್ಮಲ್ಲಿಯ ಪ್ರಜಾಸಂಖ್ಯೆಗೆ ಅನುಗುಣವಾಗಿ ತೆರೆಯಲಾಗಿದೆಯೋ ಎಂಬುದನ್ನು ಸರಕಾರ ವಿಚಾರ ಮಾಡಬೇಕು. ಮುಖ್ಯವಾಗಿ ಕೋಲಾರ ಡಿಸ್ಟ್ರಿಕ್ಟಿನಲ್ಲೇ ರಾಗಿ ಬೆಳೆ ಹೋಗಿರುವುದರಿಂದ ರೈತರಿಗೆ ಮತ್ತು ಇತರ ಬಡಜನರಿಗೆ ಬಹಳ ಕಷ್ಟ ಪರಿಸ್ಥಿತಿ ಒದಗಿದೆ. ಆ ಡಿಸ್ಟ್ರಿಕ್ಟಿನಲ್ಲಿ ಕ್ಷಾಮ ಪರಿಸ್ಥಿತಿ ಒದಗಿದೆ. ಅಲ್ಲಿ ಜಾಸ್ತಿ ಫೇರ್‌ಪ್ರೈಸ್ ಡಿಪೋಗಳನ್ನು ಹೆಚ್ಚು ಮಾಡಬೇಕು. ಶಿವಮೊಗ್ಗ ಸರ್‌ಪ್ಲಸ್ ಏರಿಯಾ ಆದರೂ ಕೂಡ ಆ ಏರಿಯಾಕ್ಕೆ ಅಕ್ಕಿ ಒದಗಿಸಿ ಕೊಡುತ್ತಾರೆ. ಕೋಲಾರ ಜಿಲ್ಲೆಗೆ ಕೊಟ್ಟಿರುವ ಫೇರ್ ಪ್ರೈಸ್ ಡಿಪೋಗಳು ಏನೂ ಸಾಲವು. ಅವನ್ನು ಬೇಕುಬೇಕಾದವರಿಗೆ ಕೊಟ್ಟಿದೆ. ಬಂಗಾರಪೇಟೆಯಲ್ಲಿ ಫೇರ್ ಪ್ರೈಸ್ ಡಿಪೋಗಳನ್ನು ಎಲೆಕ್ಷನ್‌ನಲ್ಲಿ ಸಹಾಯ ಮಾಡಿದವರು ಮತ್ತು ಅಂತಹ ಉಪಕಾರ ಮಾಡಿದವರಿಗೆ ಕೊಟ್ಟಿದ್ದಾರೆ. ಇದರಿಂದ ಫೇರ್ ಪ್ರೈಸ್ ಡಿಪೋಗಳಲ್ಲಿ ಬ್ಲಾಕ್ ಮಾರ್ಕೆಟ್ ಆಗುತ್ತಾ ಇದೆ. ಆದ್ದರಿಂದ ಇನ್‌ಸ್ಪೆಕ್ಟರುಗಳನ್ನು ನೇಮಿಸಿ, ದವಸ ಸರಿಯಾಗಿ ವಿಲೇವಾರಿಯಾಗುತ್ತಿದೆಯೋ ಇಲ್ಲವೇ ಎಂಬುದನ್ನು ನೋಡುವ ವ್ಯವಸ್ಥೆ ಮಾಡಬೇಕು. ಸರ್ಕಾರದವರು ಈ ಡಿಪೋಗಳಲ್ಲಿ ನಡೆಯುವ ದುಷ್ಟ ವರ್ತನೆಗಳನ್ನು ಚೆಕ್ ಮಾಡುವುದಕ್ಕೆ ಸಾಕಷ್ಟು ವ್ಯವಸ್ಥೆ ಮಾಡಬೇಕು.

ಕೋಲಾರ ಜಿಲ್ಲೆಯ ವಿಷಯ ಮಾತನಾಡುತ್ತಾ ಶ್ರೀ ಲಿಂಗಾರೆಡ್ಡಿಯವರು ಕಾಂಗಾರಿಗಳನ್ನು ಅಲ್ಲಿ ಇನ್ನೂ ಹೆಚ್ಚಿಸಬೇಕು ಎಂದು ಹೇಳಿದರು. ಬಂಗಾರುಪೇಟೆ ತಾಲ್ಲೂಕನ್ನು ತೆಗೆದುಕೊಂಡರೆ ಅಲ್ಲಿ ಕಾಂಗಾರಿಗಳನ್ನು ನಡೆಸಲು ಯಾರೂ ಬರಲಿಲ್ಲವೆಂದು ಅಧಿಕಾರಿಗಳು ಹೇಳಿದ್ದಾರೆ. ಅವರು ಆ ರೀತಿ ಹೇಳುವುದು ಸರಿಯಲ್ಲ. ಆ ರೀತಿಯ ಧೋರಣೆಯನ್ನು ಸರ್ಕಾರೀ ಅಧಿಕಾರಿಗಳು ತಾಳಬಾರದು. ಅದರಿಂದ ಸ್ವಲ್ಪ ಕೂಲಂಕಷವಾಗಿ ವಿಚಾರಮಾಡಿ ಮತ್ತು ಇವತ್ತು ಕಾಮಗಾರಿಗಳನ್ನು ಅಲ್ಲಿ ಹೆಚ್ಚಿಸುವುದಕ್ಕೆ ಏನೇನು ಏರ್ಪಾಡುಗಳನ್ನು ಮಾಡಬೇಕೋ ಅವುಗಳನ್ನೆಲ್ಲಾ ಮಾಡಿ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Dr. R. NAGAN GOWDA (Hospet).—Sir, I must congratulate the Government on having been able to conitnue the fair price depots till the end of December. After December, it will be time enough for us to find out whether we need the continuance of these depots till end of the year and decide if necessary to continue them for a longer period. In this regard, I wish to mention that they had given some rice to some of the co-operative societies in my own town but later on they ceased to do so and the matter has been brought to the no ice of the Government frequently but with no result. Apart from that, it is necessary for us to think of a long term remedy to solve this problem of shortage of food.

According to statistics that were given recently by the monthly bulletin of statistics, it is seen that we are producing 30 lakhs of tons of food, all kinds of grain inclusive; and if this quantity is divided per head, it comes to about 14½ or 15 ounces per head. We remember that we were thinking that if we could get 16 ounces per head, it would indeed be good. But there seems to be some difficulty about these statistics. I think it is necessary that we should look into the method of gathering the material for our statistics. Do we still depend on our friends, the village officers, to collect these? I think it is time that we revise this method.

Sir, today to one of the questions, there was an answer that for the last 10½ months they had supplied 9,29,000 mds. of rice which comes to 34,000 tons, This is a very small percentage compared to the production in 1955-56 which is 30 lakhs. If we divide the 34,000 tons among the total population, it comes to less than one ounce per head per day. With that little quantity, we have been able to reduce or stop the sky-rocketing of grain. Now Sir, 34,000 tons or 9 lakhs of mds. of rice was supplied to us by the Government of India. I was told this morning that they charge Rs. 14 per md. and this comes to about Rs. 130 lakhs. What the Government of India pays for purchasing and getting it from Europe or America, we do not know. Probably, they pay another Rs. 130 lakhs. Sir, instead of spending this huge sum of money to purchase these articles from outside, if only our Government could spend this amount of money right in India, as the Hon'ble Minister of Andhra Province said the other day, our own country will be able to produce and supply all the grain that we need. He was saying that Andhra itself will be able to produce all the grain that we require. Sir, our Government in consultation with the Government of India or our Government should make a suggestion to the Government of India to go into this question and make some arrangement by which you can induce the cultivator in this country to produce the extra quantity of rice that is needed. There is only one way of doing it and that is by giving him an assured price. They will be able to produce the maximum quantity that can be produced in an acre of wet land. As an example, I will give you one thing. We have assured a decent price for sugarcane and there are cultivators who once were producing 20 or 25 tons per acre are now producing 50 to 75 tons, because there is the inducement of an assured price. For a small quantity of rice that we need to store for the rainy day, if the Government would only assure a fixed price, I think we will be able to induce our cultivators to grow more.

Sir, enough of that. I would now like to touch on another point and that is this. It is only in India that rice forms the major part of our diet. That is not the case in other countries. For instance in the United States, 15 per cent of their daily diet is made up of grain and the balance is made up of many other things, including mutton, egg, fish. I want to suggest. . . .

Sri K. HANUMANTHAIYA (Ramanagaram).—Do you suggest that we should also take to that?

Sri R. NAGAN GOWDA.—It would indeed be very nice if our Hon'ble Minister for Agriculture would join me Sir. Now we have a very huge coastline and we have areas of tanks in this State which we should be a ble to utilise for producing fish. Two years ago, we started a scheme and imported about

(DR. R. NAGAN GOWDA)

2½ lakhs of fingerlings. Last year we imported 5 lakhs of fingerlings and we have that *Kutla* variety of fish introduced into our tanks and lakes. I do not know what the Minister for Agriculture has done with that scheme. I think his love for fish which is an article of food for many others, although not for himself, has not abated, (*laughter*). I would make this suggestion very seriously that fisheries ought to be developed to such an extent that fist should be available to the villager. Ater all, in spite of the people who profess vegetarianism, a great majority of people in this country are still non-vegetarian.

AN HON'BLE MEMBER.—Are you one of them, Sir?

DR. R. NAGAN GOWDA.—Indeed, Sir, I woud like to have you join me.

There is another thing. Poultry is a thing that we should encourage. It forms a very substantial and very nutritious article of food for poor people. Two years ago, we had a scheme under which we distributed 13,000 eggs and the year after that, we distributed about 40,000 eggs; last year, I am afraid only 25,000 hatching eggs have been distributed. I do not know how many eggs have been distributed this year. I would be very glad to be assured by the Hon'ble Minister for Agiculture that the scheme is not only being maintained but it is gradually improved upon.

Sir, there is one more suggestion I wish to make. In a country like ours, where rainfall is scarce, particularly parts like Kolar, Tumkur, Bellary and Bijapur, one of the things that will thrive best is sheep. We should encourage the production of sheep as a food giving industry, because even when there is very scarce rainfall and scarce growth of fodder, the sheep will still get on. Therefore, this is one of the things that should be encouraged by the Department.

These are some of the things I have suggested which should be adopted so that we could once for all set aside this fear of famine or near-famine or scarcity conditions in this country. Thank you.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಭಾಪತಿಗಳೇ, ಇಂದು ನಮ್ಮ ಮುಂದೆ ಇರತಕ್ಕಂಥ ಒಂದು ಬಹು ಮುಖ್ಯವಾದ ಸಮಸ್ಯೆಯಲ್ಲಿ ಎರಡು ಮೂರು ವಿಚಾರಗಳು ಅಡಕವಾಗಿವೆ. ಸದ್ಯದಲ್ಲಿ ದೇಶದಲ್ಲಿರತಕ್ಕ ಆಹಾರ ಪರಿಸ್ಥಿತಿಗೆ ಸಂಬಂಧಪಟ್ಟ ವಿಚಾರ ಒಂದು. ಮತ್ತೊಂದು ದೇಶದಲ್ಲಿ ಉಂಟಾಗಿರತಕ್ಕ ಕ್ಷಾಮ ಪರಿಸ್ಥಿತಿ. ಮೂರನೆಯದಾಗಿ ಈ ಕ್ಷಾಮ ಪರಿಸ್ಥಿತಿಯನ್ನು ಮತ್ತೊಮ್ಮೆ ದೇಶದಲ್ಲಿ ತಲೆಹಾಕದಂತೆ ಈ ಬಗ್ಗೆ ಕೈಗೊಳ್ಳಬೇಕಾಗಿರುವ ಕಾರ್ಯಕ್ರಮಗಳೇನು ಎಂಬುದು. ದೇಶದಲ್ಲಿ ಈ ಹೊತ್ತು ಆಹಾರ ಪರಿಸ್ಥಿತಿಯು ಒಂದು ಉಲ್ಬಣಸ್ಥಿತಿಗೇರಿ ದಿವಸದಿವಸಕ್ಕೆ ಈ ಧಾನ್ಯಗಳ ಧಾರಣೆವಾಸಿ ಏರುತ್ತಿದೆ. ಈ ಧಾರಣೆ ವಾಸಿಗಳು ಈ ದಿವಸ ಸಾಮಾನ್ಯ ಜನರ ಶಕ್ತಿಗೆ ಅನುಗುಣವಾಗಿರುತ್ತವೆಯೇ ಎಂಬುದನ್ನು ಆಲೋಚನೆಮಾಡಿ ನೋಡಿದರೆ ಅದು ತೀರ ಅವರ ಎಲ್ಲೆಯನ್ನು ಮೀರಿ ಹೋಗಿದೆ. ಇದಕ್ಕೆ ಮುಖ್ಯ ಕಾರಣ ಈ ವರ್ಷ ಮಳೆ ಸಕಾಲಕ್ಕೆ ಬಾರದಿರುವುದೇ ಆಗಿದೆ. ನಮ್ಮ ದೇಶಕ್ಕೆ ಅತ್ಯವಶ್ಯಕವಾಗಿರುವಂಥ ರಾಗಿ ಬೆಳೆಯನ್ನು ಬೆಳೆಯಲು ಅನೇಕ ಕಡೆ ನೆಲಕ್ಕೆ ಬೀಜ ಹಾಕಲು ಸಹ ಅವಕಾಶವಾಗಿಲ್ಲ. ಇದರಿಂದ ಈ ದಿವಸ ನಮಗೆ ಕ್ಷಾಮ ಎದ್ದು ಕಾಣುತ್ತಿದೆ. ಹೋದ ವರ್ಷವೂ ಸಹ ಹೀಗೆಯೇ ಆಯಿತು. ಆದರೆ ರಾಗಿ ಬೆಳೆಗೆ ವರ್ಷವೆಲ್ಲಾ ಆಗಿಂದಾಗ್ಗೆ ಸ್ವಲ್ಪ ಸ್ವಲ್ಪವಾದರೂ ಮಳೆ ಬೀಳುತ್ತಲೇ ಇರಬೇಕು. ಇದು ರಾಗಿ ಬೆಳೆಯ ಲಕ್ಷಣ. ಆದರೆ ಭತ್ತದ ಬೆಳೆಯ ವಿಚಾರ ಹಾಗಲ್ಲ. ಎಲ್ಲಿ ಭತ್ತದ ಬೆಳೆಯಾಗುತ್ತದೋ ಆ ಪ್ರದೇಶದಲ್ಲಿ ಒಂದಾವರ್ತಿ ಮಳೆ ಬಂದು ಆ ಪ್ರದೇಶದಲ್ಲಿರತಕ್ಕ ಕೆರೆ-ಕಟ್ಟೆ-ನಾಲೆಗಳು ತುಂಬಿದವೇಳೆ ಅಲ್ಲಿಗೆ ಆ ಭತ್ತದ ಬೆಳೆಗೆ ಮಳೆ ಸಾಕೆಂತಲೇ ಹೇಳಬಹುದು. ಹೀಗೆಯೇ ಆ ಮಲೆನಾಡಿನಲ್ಲೂ ಸಹ ಕೆಲವು ಕಾಲ ಮಳೆ ಬರಲೇಬೇಕು. ಅಂತೂ ನಮ್ಮ ದೇಶದಲ್ಲಿ ವ್ಯವಸಾಯವೇ ಪ್ರಾಧಾನ್ಯವಾದಂಥ ಕಸುಬು. ಇದು ಬಹುಭಾಗ ಮಳೆಯನ್ನೇ ಅನುಸರಿಸಿಕೊಂಡು ಹೋಗುತ್ತಿದೆ. ನಮ್ಮ ದೇಶದಲ್ಲಿ ಅರ್ಧಕ್ಕಿಂತಲೂ ಹೆಚ್ಚಾಗಿ ಜನರು ರಾಗಿಯನ್ನು ತಮ್ಮ ಆಹಾರವಾಗಿ ಉಪಯೋಗಿಸುತ್ತಿದ್ದಾರೆ. ಸುಮಾರು ಇನ್ನುಳಿದ ಜನರ ಪೈಕಿ ಶೇಕಡ 18ರಷ್ಟು ಮಂದಿ ಜೋಳವನ್ನು ಉಪಯೋಗಿಸುತ್ತಾರೆ. ಆದರೆ ನಮ್ಮ ದೇಶದಲ್ಲಿ ಗೋಧಿಯನ್ನು ಆಹಾರವಾಗಿ ಉಪಯೋಗಿಸತಕ್ಕವರ ಸಂಖ್ಯೆ ಶೇಕಡ 8-10ರಷ್ಟಿದ್ದರೆ ಹೆಚ್ಚಾಯಿತು. ಹೀಗಿರುವಾಗ ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆಲ್ಲ ಕೇವಲ ನಾಲ್ಕೈದು ಸಾವಿರ ಟನ್ ಅಕ್ಕಿಯನ್ನು ಕೊಟ್ಟರೆ ಅಲ್ಲಿಗೆ ನಮ್ಮ ದೇಶದ ಕ್ಷಾಮ ಪರಿಸ್ಥಿತಿ ಉತ್ತಮವಾಯಿತು ಎನ್ನುವ ಹಾಗೇನೂ ಇಲ್ಲ. ಈ ವರ್ಷ ನಮ್ಮ ದೇಶಕ್ಕೆ ಹೆಚ್ಚು ಭಾಗದ ಜನರಿಗೆ ಬೇಕಾಗಿರುವಂಥ ರಾಗಿ ಬೆಳೆ ಇದೆಯೇ ಎಂದರೆ ಅದಿಲ್ಲ. ಇದರಿಂದ ರಾಗಿ ಬೆಲೆ ಪ್ರತಿ ವಾರವೂ ಪಲ್ಲಾಕ್ಕೆ ಮೂರು ನಾಲ್ಕು ರೂಪಾಯಿಗಳಂತೆ ಜಾಸ್ತಿಯಾಗುತ್ತಾ ಇದೆ. ಹೋದ ವರ್ಷಕ್ಕಿಂತಲೂ ಈ ವರ್ಷ ರಾಗಿಯ ಬೆಲೆ ಶೇಕಡ 25ರಷ್ಟು ಜಾಸ್ತಿಯಾಗಿದೆ. ಈ ದಿವಸ ನಾವು ಆಲೋಚನೆ ಮಾಡುವುದಾದರೆ ಈಗ ಕೇಂದ್ರ ಸರ್ಕಾರದಿಂದ ಬರುತ್ತಿರುವ ಅಕ್ಕಿಯಾದರೂ ಜನ ಸಾಮಾನ್ಯರಿಗೆ ದೊರೆಯುತ್ತಿದೆಯೇ ಎಂದರೆ ಅದೂ ಸಹ ಇಲ್ಲ. ದೇಶದ ನಿಜಸ್ವರೂಪ ಹೀಗಿರುವಾಗ ಕೇವಲ ನಮಗೆ ಕೇಂದ್ರ ಸರ್ಕಾರ ಸರಬರಾಯಿಮಾಡತಕ್ಕ ನಾಲ್ಕೈದು ಸಾವಿರ ಟನ್ ಅಕ್ಕಿ ಏತಕ್ಕೂ ಸಾಲದು. ಇದೇ ಸಭೆಯಲ್ಲಿ ಪ್ರಶ್ನೋತ್ತರ ಕಾಲದಲ್ಲಿ ನಡೆದ ಚರ್ಚೆಯಲ್ಲಿ

ಮಂತ್ರಿಗಳು ಅಭಾವ ಪ್ರದೇಶದಲ್ಲಿ ಇನ್ನಷ್ಟು ಅಕ್ಕಿ ಡಿಪೋಗಳನ್ನಾದರೂ ಹೆಚ್ಚಾಗಿ ತೆರೆಯಬೇಕೆಂದು ಒತ್ತಾಯ ಮಾಡಿದ್ದಕ್ಕೆ ನಮಗೆ ಕೇಂದ್ರದಿಂದ ಸರಬರಾಯಿ ಆಗುತ್ತಿರುವ ಅಕ್ಕಿಯ ಪ್ರಮಾಣ ಒಂದು ನಿಯಮಿತ ಮಟ್ಟದಲ್ಲಿರುವುದರಿಂದ ಹೆಚ್ಚು ಡಿಪೋಗಳನ್ನು ತೆರೆಯಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಸರ್ಕಾರದವರೇ ಆ ರೀತಿ ಉತ್ತರ ಕೊಟ್ಟಿರುವಾಗ ಈಗತಾನೆ ಮಾತನಾಡಿದ ಶ್ರೀಮಾರ್ ಕೋಥಾವಾಲೆಯವರು "ನಾವು ಆಹಾರದ ಬಗ್ಗೆ ಸುಮ್ಮನೆ ಕಳವಳವನ್ನು ವ್ಯಕ್ತಪಡಿಸುವುದು ಅನವಶ್ಯಕ. ಈ ಭಾಗದಲ್ಲಿ ಮಾನ್ಯ ಮಂತ್ರಿಗಳು ಸಾಕಷ್ಟು ಭರವಸೆ ಕೊಟ್ಟಿರುವುದರಿಂದ ಈ ವಿಚಾರವಾಗಿ ನಾವು ಅಷ್ಟೇನೂ ಚರ್ಚೆ ಮಾಡಬೇಕಾದ್ದಿಲ್ಲ" ಎಂದು ಹೇಳಿದರು. ಹೀಗೆ ಅವರು ಕೊಟ್ಟಂಥ ಉತ್ತರ ಎಲ್ಲರಿಗೂ ಒಂದು ಸಮಾಧಾನ ಮತ್ತು ತೃಪ್ತಿಯನ್ನು ಉಂಟುಮಾಡುವುದಾಗಿದ್ದರೆ ಈ ವಿಚಾರವನ್ನು ಈ ಸಭೆಯಲ್ಲಿ ಎರಡು ದಿವಸ ಗಟ್ಟಲೆ ಚರ್ಚೆ ಮಾಡಬೇಕಾದದ್ದು ಅನವಶ್ಯಕವಾಗಿತ್ತು. ಆದರೆ ನಾವು ಈ ಕ್ಷಾಮ ಪರಿಸ್ಥಿತಿಯನ್ನು ಎಷ್ಟು ತೀವ್ರವಾಗಿ ಎದುರಿಸಬೇಕಾಗಿತ್ತೋ ಅಷ್ಟು ತೀವ್ರವಾಗಿ ಎದುರಿಸುತ್ತಿಲ್ಲ. ಆದರೆ ಕೆಲವು ಕಡೆ ಕೆಲವು ಧಾನ್ಯಗಳನ್ನು ದಾಸ್ತಾನು ಮಾಡಿದ್ದಾರೆ. ಕೆಲವನ್ನು ಸರ್ಕಾರದವರೂ ದಾಸ್ತಾನು ಮಾಡುತ್ತಿದ್ದಾರೆ. ಆದರೆ ನಮ್ಮ ಮೈಸೂರಿನಲ್ಲಿ ಪ್ರಧಾನವಾಗಿ ದಾಸ್ತಾನು ಮಾಡಬೇಕಾದ ಆಹಾರ ಸಾಮಗ್ರಿ ಯಾವುದೆಂದರೆ ಅದು ರಾಗಿ. ಇಂಡಿಯಾ ದೇಶದಲ್ಲಿ ರಾಗಿಯನ್ನು ವಿಶೇಷವಾಗಿ ಬೆಳೆಯುತಕ್ಕ ದೇಶಗಳೆಂದರೆ ಒರಿಸ್ಸಾ ಮತ್ತು ಬೀರಾರು. ಈ ಸ್ಥಳಗಳಿಂದ ರಾಗಿಯನ್ನು ತರಿಸಿ ನಮ್ಮ ಮೈಸೂರು ಸರ್ಕಾರ ದಾಸ್ತಾನು ಮಾಡಬಹುದಾಗಿತ್ತು. ಆದರೆ ಈ ತಹಲ್‌ವರೆಗೂ ಏಕೆ ಮಾಡಲಿಲ್ಲವೋ ಆ ವಿಚಾರ ನನಗೆ ಗೊತ್ತಾಗುತ್ತಿಲ್ಲ. ನಮ್ಮ ದೇಶದಲ್ಲಿ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಶೇಕಡ 70ರಷ್ಟು ಜನಗಳಿರುತ್ತಾರೆ. ಈ ಜನಾಂಗವೆಲ್ಲಾ ಪ್ರಾಧಾನ್ಯವಾಗಿ ರಾಗಿಯನ್ನೇ ಮುಖ್ಯ ಆಹಾರವಸ್ತುವನ್ನಾಗಿ ಬಳಸುತ್ತಾರೆ. ಆದರೆ ಈ ದಿವಸ ಸರ್ಕಾರದವರು ತರಿಸಿ ಹಂಚುತ್ತಿರುವ ಅಕ್ಕಿ ಯಾರಿಗೆ ದೊರೆಯುತ್ತಿದೆ, ಯಾರಿಗೆ ಕೊಂಚ ಅನುಕೂಲವಾಗಿದೆ ಎಂದರೆ ಅದು ಕೇವಲ ನಗರಗಳಲ್ಲಿ ಮತ್ತು ತಾಲ್ಲೂಕು, ಜಿಲ್ಲಾ ಕಸಬೆಗಳಲ್ಲಿರತಕ್ಕ ಜನರಿಗೆ ಮಾತ್ರ ಅನುಕೂಲವಾಗಿದೆ. ಹಾಗೆ ವಿಮರ್ಶಾತ್ಮಕ ದೃಷ್ಟಿಯಿಂದ ನೋಡುವುದಾದರೆ ಈ ಹೊತ್ತು ಸರ್ಕಾರದವರು ಈ ಆಹಾರ ವಸ್ತುಗಳ ಸರಬರಾಯಿಯ ಬಗ್ಗೆ ಗ್ರಾಮಾಂತರ ಜನಗಳಿಗೇನೂ ಸಹಾಯ ಮಾಡುತ್ತಿಲ್ಲ. ಪಟ್ಟಣವಾಸಿಗಳಲ್ಲಿ ಅನುಕೂಲಸ್ಥರಿಗೆ ಮಾತ್ರ ಕೊಂಚ ಉಪಕಾರವಾಗಿದೆ. ಇದಕ್ಕಾದರೂ ಕಾರಣವೇನೆಂದರೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿರತಕ್ಕ ಜನರು ಗಲಾಟೆ ಮಾಡುತ್ತಾರಾದ್ದರಿಂದ ಆ ಒಂದು ಭಯಕ್ಕಾಗಿ ಸರ್ಕಾರ ಈ ದಿವಸ ಅವರಿಗೆ ಜರೂರಾಗಿ ಆಹಾರ ಧಾನ್ಯಗಳನ್ನು ಸರಬರಾಯಿ ಮಾಡುತ್ತಿದೆ. ಹೀಗೆ ನಮ್ಮ ಸರ್ಕಾರದ ಧೋರಣೆ ಯೇನಿದ್ದರೂ ಯಾರು ಗಲಾಟೆ ಮಾಡುತ್ತಾರೋ ಅಂಥವರಿಗೆ ಮಾತ್ರ ಉಪಕಾರ ಮಾಡತಕ್ಕ ನೀತಿ ಎದ್ದುಕಾಣುತ್ತಿದೆ. ಪಟ್ಟಣವಾಸಿಗಳಲ್ಲಿ ಕೂಡ ಅಕ್ಕಿ ಸಿಕ್ಕುವುದಾಗಿದ್ದರೂ ಇದರ ಬೆಲೆ ಸಾಮಾನ್ಯಜನರ ಮಟ್ಟದಲ್ಲಿಲ್ಲ. ರೂಪಾಯಿಗೆ ಒಂದೂವರೆ ಸೇರು ಪ್ರಕಾರ ಮಾರಾಟ ಮಾಡಲಾಗುತ್ತಿದೆ; ರೂಪಾಯಿಗೆ ಎರಡು ಸೇರು ಸಹ ಸಿಕ್ಕುತ್ತಿಲ್ಲ. ಇದರಿಂದ ನಗರದಲ್ಲಿರತಕ್ಕ ಬಡಬಗ್ಗರಿಗಾದರೂ ಏನು ಉಪಕಾರವಾಯಿತು ? ಆದುದರಿಂದ ನಾನೀಗ ಸರ್ಕಾರದವರಿಗೆ ಸಲಹೆ ಮಾಡುವುದೇನೆಂದರೆ: ಈ ದಿವಸ ಕೇಂದ್ರ ಸರ್ಕಾರದವರು ಹೇಗೆ ನಮಗೆ ಅಕ್ಕಿಯನ್ನು ಸರಬರಾಯಿ ಮಾಡುತ್ತಿದ್ದಾರೋ ಹಾಗೆಯೇ ರಾಗಿಯನ್ನೂ ಸಹ ಆ ಒರಿಸ್ಸಾ ಪ್ರಾಂತ್ಯದಿಂದ ಸರಬರಾಯಿ ಮಾಡುವಂತೆ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಒತ್ತಾಯಪಡಿಸಬೇಕೆಂದು ಹೇಳುತ್ತೇನೆ. ನಮ್ಮ ಸರ್ಕಾರ ಈ ಒಂದು ಏರ್ಪಾಡನ್ನು ಕೂಡಲೇ ಮಾಡಬೇಕು. ಇನ್ನು ಮೂರನೆಯದಾಗಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರಿಗೆ ಅನುಕೂಲವಾಗಲು ಆ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಕ್ಕಿ ಮತ್ತು ರಾಗಿ ಡಿಪೋಗಳನ್ನು ನಮ್ಮ ಸರ್ಕಾರದವರು ಕೂಡಲೇ ತೆರೆಯಬೇಕಾದದ್ದು ಅತ್ಯಗತ್ಯ. ಇಷ್ಟೆಲ್ಲವೂ ಕೂಡ ಕೇವಲ ಸದ್ಯದ ಪರಿಸ್ಥಿತಿಯನ್ನು ಸುಧಾರಿಸತಕ್ಕ ಬಗ್ಗೆ ಕೊಟ್ಟಂಥ ಸಲಹೆಗಳಾಗಿವೆ. ಇನ್ನು ನಮ್ಮ ದೇಶದಲ್ಲಿ ಹೀಗೆ ಪದೇ ಪದೇ ಕ್ಷಾಮ ತಲೆ ಹಾಕುತ್ತಿರುವುದಕ್ಕೆ ಕಾರಣಗಳೇನೆಂಬುದನ್ನು ಕಂಡುಹಿಡಿದು ಅದಕ್ಕೆ ತಕ್ಕ ಖಾಯಂ ಪರಿಹಾರೋಪಾಯಗಳನ್ನೂ ಸಹ ಇದರ ಜೊತೆಯಲ್ಲೇ ಕೈಗೊಳ್ಳಬೇಕು. ಈ ದಿವಸ ನಮ್ಮ ದೇಶದಲ್ಲಿ ಮುಕ್ಕಾಲು ಮೂರು ವೀಸೆ ಪಾಲು ಜನರೆಲ್ಲಾ ವ್ಯವಸಾಯವನ್ನೇ ತಮ್ಮ ಜೀವನೋಪಾಯದ ಕಸಬನ್ನಾಗಿಟ್ಟುಕೊಂಡಿದ್ದಾರೆ. ಇವರ ಜೀವನೋಪಾಯದ ಆಗುಹೋಗುಗಳೆಲ್ಲಾ ಕೇವಲ ಮಳೆಯನ್ನೇ ಅವಲಂಬಿಸಿಕೊಂಡಿರುತ್ತವೆ. ಆದರೆ ನಮ್ಮ ದೇಶದಲ್ಲಿ ಮಳೆ ಪರಿಸ್ಥಿತಿ ಹೇಗಿದೆಯೆಂದರೆ—ಕೆಲವು ವರ್ಷ ಮಳೆ ಬೀಳಬಹುದು ಇನ್ನು ಕೆಲವು ವರ್ಷ ಬೀಳದೆ ಹೋಗಬಹುದು. ಈ ಏರುಪೇರುಗಳನ್ನು ಸರಿಪಡಿಸಲು ಸರ್ಕಾರದವರು ಯಾವ ಒಂದು ಕಾರ್ಯಕ್ರಮವನ್ನೂ ಕೈಗೊಳ್ಳದಿರುವುದರಿಂದಲೇ ನಮ್ಮ ದೇಶ ಪದೇ ಪದೇ ಕ್ಷಾಮಕ್ಕೆ ತುತ್ತಾಗುತ್ತಿದೆ. ನಮ್ಮ ಹಳೆಯ ಮೈಸೂರು ಪ್ರಾಂತ್ಯದಲ್ಲಿ ನಾವು ಕೇವಲ ಶೇಕಡ 13-14ರಷ್ಟು ಭಾಗದಲ್ಲಿ ರಿವರ್ ವ್ಯಾಲಿಗಳನ್ನು ಉಪಯೋಗಪಡಿಸಿಕೊಂಡಿರುತ್ತೇವೆ. ಆದರೆ ಈ ಭಾಗದಲ್ಲಿ ನಮ್ಮ ಸರ್ಕಾರ ಇತ್ತೀಚೆಗೆ ಏನು ಕಾರ್ಯಕ್ರಮ ಕೈಗೊಂಡಿದೆ ಎಂಬುದನ್ನು ಲೆಕ್ಕಹಾಕಿದರೆ ಬಹುಶಃ ಈ ಕಾರ್ಯಗಳನ್ನು ಶೇಕಡ ಐದಾರರಷ್ಟು ಹೆಚ್ಚಿಸಿದೆಯೆಂದು ಹೇಳಬಹುದು. ಜನರಿಗೆ ಖುಷ್ಕಿ ವ್ಯವಸಾಯವನ್ನು ನಂಬಿ ಕೆಲಸಮಾಡಲು ಅಷ್ಟಾಗಿ ಉತ್ಸಾಹವಿಲ್ಲ. ಕಾರಣ ಅಂಥ ಖಾತ್ರಿಯಾಗಿ ಅವರಿಗೆ ಬೆಳೆ ಸಿಕ್ಕುತ್ತೆಂಬ ನಂಬಿಕೆ ಇಲ್ಲ. ನಮ್ಮ ದೇಶದ ವ್ಯವಸಾಯಗಾರರಿಗೆ ಇಂಥ ಒಂದು ಭರವಸೆ ಉಂಟಾಗಬೇಕಾಗಿದ್ದರೆ ನಮ್ಮ ಸರ್ಕಾರದವರು ಕೊನೆಯ ಪಕ್ಷ ಈಗ ಹರಿದುಹೋಗುತ್ತಿರುವ ನೀರಿನಲ್ಲಿ ಶೇಕಡ 50 ಪಾಲನ್ನಾದರೂ ತಡೆದು ಹಾಕಲು ಯೋಜನೆಯನ್ನು ಕೈಗೊಳ್ಳಬೇಕು. ಈ ವಿಚಾರದಲ್ಲಿ ನಮ್ಮ ಸರ್ಕಾರದವರು ಕಳೆದ ಹತ್ತು ವರ್ಷಗಳಿಂದಲೂ ತುಂಬ ಅಸಡ್ಡೆಯನ್ನು ತೋರಿಸಿದ್ದಾರೆಂದು ತಿಳಿಸಲು ನನಗೆ ವ್ಯಸನವಾಗುತ್ತದೆ. ಕಳೆದ ಹತ್ತು ವರ್ಷಗಳಿಂದಲೂ ನಮ್ಮ ಪ್ರಾಂತ್ಯದಲ್ಲಿ ರಿಪೇರಿಯಾಗಬೇಕಾಗಿದ್ದ ಕೆರೆಗಳು ಇನ್ನೂ ಹಾಗೆಯೇ ಬಿದ್ದಿವೆ. ಈ ಹಿಂದೆ ಮರಾಮತ್ ಇಲಾಖೆಯವರು ಇಂಥಿಂಥ ಪ್ರದೇಶದಲ್ಲಿ ಇಷ್ಟಿಷ್ಟು ಕೆರೆಗಳನ್ನು ರಿಪೇರಿ ಮಾಡಲೇಬೇಕೆಂಬ ಒಂದು ಪ್ರೋಗ್ರಾಂ ಹಾಕಿಕೊಂಡು ಅದರಂತೆ ಕೆಲಸ ನಡೆಸುತ್ತಿದ್ದರು. ಆದರೆ ಇತ್ತೀಚೆಗೆ ಅಂಥ ಒಂದು ನೀತಿ ಇದ್ದಂತೆ ಕಂಡುಬರುತ್ತಿಲ್ಲ. ಆದರೆ ಹೀಗೆ ಕೆರೆಗಳ ರಿಪೇರಿ ನಡೆಸದಿರುವುದು ಒಂದಾದರೆ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಮತ್ತೊಂದು ವಿಚಿತ್ರವಾದಂಥ ಕೆಲಸವೆಂದರೆ ಕೆಲ ಕೆಲವು ಕೆರೆಗಳ ಕೋಡಿಗಳನ್ನೂ ಮತ್ತು ಕೆಲವು ಭಾಗದ ಏರಿಯನ್ನೂ ಒಡಿಸಿಹಾಕಿದ್ದಾರೆ. ಕಾರಣ ವೇನೆಂದರೆ ಕೆಲವು ವೇಳೆ ಅಲ್ಲಲ್ಲೇ ವಿಶೇಷವಾಗಿ ಮಳೆ ಯಾಗಿ ಕೆರೆಗಳು ತುಂಬಿ ಹರಿಯುತ್ತಿದ್ದಾಗ ಅವುಗಳಿಗೆ ಅಪಾಯ ಒದಗಬಹುದೆಂಬ ಅನುಮಾನದಿಂದ ಕೆಲ ಕೆಲವು ಕೆರೆಗಳ ಕೋಡಿಗಳನ್ನು ಆ ವೇಳೆಯಲ್ಲಿ ಹೊಡಸಿ ಹಾಕಿದರು. ಈ ಹೊತ್ತು ಕೂಡ ಹಾಗೆ ಒಡೆಯಲ್ಪಟ್ಟ ಕೆರೆಗಳು ರಿಪೇರಿಯಾಗದೆ ಇನ್ನೂ ಹಾಗೆಯೇ ಬಿದ್ದಿರು ತ್ತವೆ. ಇಂಥ ಕೆರೆಗಳ ವಿಚಾರದಲ್ಲಿ ಇಲಾಖೆಯವರು ಸರ್ಕಾರಕ್ಕೆ ಏನಾದರೂ ಒಂದು ವರದಿಯನ್ನು ಕಳುಹಿಸಿದ್ದಾರೋ ಇಲ್ಲವೋ ಆ ವಿಚಾರ ನನಗಂತೂ ತಿಳಿದಿಲ್ಲ. ಒಂದು ವೇಳೆ ಅವರು ಸರ್ಕಾರಕ್ಕೆ ರಿಪೋರ್ಟ್ ಕಳುಹಿಸಿದ್ದರೂ ಸಹ ಆ ಕೆರೆಗಳ ಕೆಲಸ ವಂತೂ ಇನ್ನೂ ಆಗಿಲ್ಲ. ಹೀಗಾಗಿ ಈ ದಿವಸ ಆ ಕೆರೆಗಳ ಹಿಂದೆ ಇಟ್ಟಿದ್ದ ಭತ್ತದ ಬೆಳೆ ಪೂರ್ಣವಾಗದೆ ಅಲ್ಲಿ ಪೀಕ್‌ನುಕಿ ಬೆಳೆಯಾಗುತ್ತಿದೆ. ನಮ್ಮ ಹಳೆಯ ಮೈಸೂರು ಪ್ರದೇಶದಲ್ಲಿ ಸುಮಾರು 27,000 ಮೇಜರ್ ಮತ್ತು ಮೈನರ್ ಕೆರೆಗಳಿರುತ್ತವೆ. ಆದರೆ ಇವುಗಳ ಅಭಿವೃದ್ಧಿಯ ವಿಚಾರದಲ್ಲಿ ಸರ್ಕಾರ ಅಷ್ಟಾಗಿ ಆಸಕ್ತಿ ವಹಿಸುತ್ತಿಲ್ಲ. ನಮ್ಮ ಹಿಂದಿನವರೇನೋ ಒಂದಾನೊಂದು ಕಾಲದಲ್ಲಿ ಈ ಕೆರೆಗಳನ್ನೆಲ್ಲಾ ಕಟ್ಟಿಸಿ ದರು. ಆದರೆ ಈ ದಿವಸ ನಮಗೆ ಅವುಗಳ ದುರಸ್ತಿ ಕೆಲಸ ಸಹ ನಡೆಸಲು ಶಕ್ತಿ ಇಲ್ಲದಂತಾಗಿದೆ! ಹೀಗೆಂದು ಹೇಳುತ್ತಿರುವಾಗ ನಮ್ಮ ಇಂದಿನ ಸರ್ಕಾರ ದವರು ನಾಲ್ಕಾರು ದೊಡ್ಡ ಕೆರೆಗಳ ವಿಚಾರವನ್ನು ಹೇಳಿ ಅವರ ಕರ್ತವ್ಯಲೋಪವನ್ನು ಮುಚ್ಚಿಕೊಳ್ಳಲು ವಾದಿಸಬಹುದು. ಒಂದುವೇಳೆ ಅವರ ವಾದ ವನ್ನೇ ನಾವು ಒಪ್ಪಿಕೊಂಡರೂ ಸಹ ಈ ಹೊಸ ಪ್ರಾಜೆಕ್ಟ್‌ಗಳ ಕೆಳಗೆ ಜಮಿನು ಆಬಾದಾಗಿ ವ್ಯವ ಸಾಯಕ್ಕೆ ಯೋಗ್ಯವಾಗಿ ಅಲ್ಲಿ ಬೆಳೆ ತೆಗೆಯಲು ಆ ಪ್ರದೇಶಗಳು ನಮಗೆ ಸದ್ಯದಲ್ಲಿ ಅಷ್ಟು ಫಲಕಾರಿ ಯೆಂದು ಹೇಳುವುದಕ್ಕಾಗುವುದಿಲ್ಲ. ಈ ಕಾರಣದಿಂದ ನಮ್ಮ ಸರ್ಕಾರದವರು 27 ಸಾವಿರ ಮೈನರ್ ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ತಾತ್ಸಾರ ಮಾಡ ಬಾರದು. ಇಲ್ಲಿಯ ತನಕ ತೋರಿಸಿರುವ ಅಶ್ರದ್ಧೆಯೇ ಸಾಕು. ಈಗಲಾದರೂ ಸರ್ಕಾರ ಸೂಕ್ತ ಕಾರ್ಯಕ್ರಮ ಗಳನ್ನು ಬೇಗ ಕೈಗೊಂಡರೆ ಸುಮಾರು 54 ಲಕ್ಷ ಎಕರೆಗಳಲ್ಲಿ ಬೆಳೆಯನ್ನು ತೆಗೆಯಬಹುದು.

4 P.M.

ಸರ್ಕಾರ ಸಾಗುವಳಿಗೆ ಲಾಯಕ್ಕಾದ ವಿಸ್ತಾರ ವಾದ ಸರ್ಕಾರಿ ಜಮೀನುಗಳಲ್ಲಿ Co-operative Farmsನ್ನು ಮಾಡಬೇಕು; ಮತ್ತು ಈ ಆಹಾರದ ವಿಷಯದಲ್ಲಿ ಮತ್ತು ಕ್ಷಾಮದ ಪರಿಸ್ಥಿತಿ ನಮಗೆ ಯಾವಾಗಲೂ ಒದಗದೆ ಇರುವ ಹಾಗೆ ಸರ್ಕಾರ ಒಂದು ಸಾವಿರ ಎಕರೆಯೋ ಎರಡು ಸಾವಿರ ಎಕರೆಯೋ ಎನ್ನುವ ಒಂದು ಯೂನಿಟ್ಟಿನ ರೀತಿಯಲ್ಲಿ ಇರುವಂತೆ ಭೂಮಿಯನ್ನು ಮಾಡಿಕೊಳ್ಳಬೇಕು. ಈಗ ಲಕ್ಷಾಂ ತರ ಎಕರೆ ಭೂಮಿಯಿರುವಾಗ ಹೀಗೆ ಒಂದು ಐದು ಸಾವಿರ ಎಕರೆಗೆ ಒಂದು unitನಂತೆ ಮಾಡಿ ಆಹಾರದ ಬೆಳೆಗಳನ್ನು ಬೆಳೆಯುವುದಕ್ಕೆ ಏರ್ಪಾಡು ಮಾಡಬೇಕು. ಸುಮ್ಮನೆ ಈಗ ವರ್ಷವೊಂದಕ್ಕೆ ಏಳು ಕೋಟಿ ಮತ್ತು ಎಂಟು ಕೋಟಿ ರೂಪಾಯಿಗಳಷ್ಟು ಹಣವನ್ನು ಆಹಾರ ಅಭಾವವಿರುವ ಪ್ರದೇಶಗಳಿಗೆ ಖರ್ಚು ಮಾಡುತ್ತಿ ದ್ದಾರೆ. ಹಾಗೆ ಮಾಡಿದ್ದರೂ ಕೂಡ ಹೆಚ್ಚಿನ ಆಹಾರ ಉತ್ಪತ್ತಿಯಾಗುತ್ತಿಲ್ಲ. ಹೀಗೆ ಆಹಾರವನ್ನು ಬೆಳೆ ಯಲು 54 ಲಕ್ಷ ಎಕರೆ ಭೂಮಿಯಿದ್ದರೂ ಕೂಡ ಹೆಚ್ಚಿನ ಭಾಗ ಸಾಗುವಳಿಯಾಗದೆ ನಿಂತಿದೆ. ಆದರಿಂದ ಆಹಾರದ ಉತ್ಪನ್ನವನ್ನು ಹೆಚ್ಚು ಮಾಡುವ ಪ್ರಯತ್ನ ಮಾಡಬೇಕಾದದ್ದು ಅಗತ್ಯ.

ಇನ್ನು intensive cultivation ವಿಚಾರವಾಗಿ ಹೇಳಬೇಕಾಗಿದೆ. ಈಗ Japan System ಮಾದರಿ ಯಲ್ಲಿ ಸಾಮಾನ್ಯವಾಗಿ ಐದಾರು ವರ್ಷಗಳಿಂದಲೂ ಆಹಾರವನ್ನು ಜಾಸ್ತಿಯಾಗಿ ಬೆಳೆಯಬೇಕೆಂದು ಪ್ರಚಾರ ಮಾಡುತ್ತಿದ್ದಾರೆ. ಆದರೂ ಕೂಡ 14-15 ಲಕ್ಷ ಎಕರೆ ಇರುವ ತರೀ ಜಮೀನುಗಳಲ್ಲಿ ಕೇವಲ ಒಂದೆರಡು ಲಕ್ಷ ಎಕರೆ ಜಮೀನಿನಲ್ಲಿ ಕೂಡ ಈ ರೀತಿಯ ಜಮೀನು ಮಾದರಿಯಲ್ಲಿ ಬತ್ತದ ಬೆಳೆಯನ್ನು ಬೆಳೆಯು ತ್ತಿಲ್ಲ. ಹೀಗೆ ಜಪಾನು ಮಾದರಿಯಲ್ಲಿ ಬೆಳೆಯನ್ನು ಬೆಳೆದಿದ್ದರೆ ಶೇಕಡ 26ರಷ್ಟು ಅಥವಾ 50ರಷ್ಟು ಬೆಳೆಯಾದರೂ ಬರುತ್ತಿತ್ತು. ಆದುದರಿಂದ ಈಗ ಲಾದರೂ ಒಂದು ಹದಿನೈದು ಲಕ್ಷ ಎಕರೆಗಳಷ್ಟು ಜಮೀನಿನಲ್ಲಿ ಈ ರೀತಿಯ ಜಪಾನೀ ಮಾದರಿಯ ರೀತಿ ಯಲ್ಲಿ ಬೆಳೆಯನ್ನು ಬೆಳೆಯಲು ಒತ್ತಾಯದಿಂದ ಜನಗಳಿಗೆ ಪ್ರೇರೇಪಣೆ ರೂಪವಾಗಿ ಮಾಡಿದರೆ ಈ ರೀತಿಯಾಗಿ ಸ್ವಲ್ಪ ಹೆಚ್ಚಿನ ಬೆಳೆಯಾಗಬಹುದು. ಹೀಗೆ ಈ ಜಪಾನು ಮಾದರಿಯಲ್ಲಿ 15 ಲಕ್ಷ ಎಕರೆಗಳಲ್ಲಿ ಬೆಳೆಯನ್ನು ಬೆಳೆದರೆ ಅಕ್ಕಿಯ ಅಭಾವವಿಷ್ಟಿರುವುದಿಲ್ಲ. ಎಂದು ನಾವು ಖಂಡಿತವಾಗಿ ಹೇಳಬಹುದು. ಆದರೆ ಈ ರೀತಿಯಾದ ಬೆಳೆಯನ್ನು ಬೆಳೆಯಲು ವ್ಯವಸಾಯ ಗಾರರಿಗೆ ಸರಿಯಾದ ವ್ಯವಸ್ಥೆಯನ್ನು ಮಾಡಿರುವುದಿಲ್ಲ. ಇದಕ್ಕೆ ಒಂದು Scientific Research ಅಥವಾ ಒಂದು Technological Researchನ್ನು ಮಾಡು ವುದಕ್ಕೆ ಸರ್ಕಾರ ತಕ್ಕಷ್ಟು ಕಾರ್ಯಕ್ರಮವನ್ನು ಕೈಗೊಂಡು ಜನಗಳಿಗೆ ಸಹಾಯ ಮಾಡಬೇಕು. ಈಗ ಎಂಟು ಹತ್ತು ವರ್ಷಗಳಿಂದಲೂ ಸರ್ಕಾರದವರು ಹೆಚ್ಚಿನ ಆಹಾರ ಬೆಳೆಯನ್ನು ಬೆಳೆಯಬೇಕು, ಒಂದಕ್ಕೆರಡರಷ್ಟು ಬೆಳೆಯನ್ನು ಜಾಸ್ತಿ ಮಾಡ ಬೇಕೆಂದು ಹೇಳಿದರೂ ಕೂಡ ಕೇವಲ ಐದು ಪರ್ಸೆಂಟು, ಹತ್ತು ಪರ್ಸೆಂಟು ಕೂಡ ಬೆಳೆಯಾಗಲಿಲ್ಲ. ಜಪಾನ್ ಮಾದರಿಯಲ್ಲಿ ವ್ಯವಸಾಯವನ್ನು ಮಾಡದೆ ಇರುವುದರಿಂದ ಮತ್ತು ಸರ್ಕಾರ ಇದರಲ್ಲಿ ಸಾಕಷ್ಟು ಆಸಕ್ತಿಯನ್ನು ವಹಿಸದೆ ಇರುವುದರಿಂದ ಸರಿಯಾದ ಬೆಳೆಯಾಗಲಿಲ್ಲ. ಹದಿನೈದು ಲಕ್ಷ ಎಕರೆಗಳಲ್ಲಿ ಹೀಗೆ ಮಾಡಿದ್ದರೆ ಬೆಳೆ ಒಂದಕ್ಕೆರಡರಷ್ಟು ಸಿಕ್ಕುತ್ತಿತ್ತು. ಹಾಗೆ ಮಾಡದಿರುವುದರಿಂದ ಈ ರೀತಿ ಯಾದ ಆಹಾರದ ಅಭಾವದಸ್ಥಿತಿ ಬಂದಿದೆ. ಅದಕ್ಕಾಗಿ "Intensive cultivation"ನ್ನು ಮಾಡಿ ಜನಗಳಿಗೆ ಪೂರ್ಣ ಪ್ರಯೋಜನ ದೊರಕುವಂತೆ ಸರ್ಕಾರದವರು ತಕ್ಕ ಕ್ರಮಗಳನ್ನು ಕೈಗೊಳ್ಳ ಬೇಕಾಗಿದೆ.

*ಶ್ರೀ ಎಸ್. ವೈ. ಪಾಟೀಲ್ (ಸಿಂಧಗಿ).—ಮಾನ್ಯ ಸಭಾಪತಿಗಳೇ, ಈ ದಿನದ ವಿಷಯ ಈ ಮಾನ್ಯ ಸಭೆ ಯಲ್ಲಿ ಚರ್ಚೆಯಾಗುತ್ತಿರುವುದು ಬಹಳ ಮಹತ್ವದ್ದು. ಏಕೆಂದರೆ ಇದು ಮನುಷ್ಯನ ಜೀವನಕ್ಕೆ ಸಂಬಂಧ ಪಟ್ಟಂತಹುದು. ಸಾಧಾರಣವಾಗಿ ಇಡೀ ಈ ನೂತನ ರಾಷ್ಟ್ರದ ಆಹಾರ ಪರಿಸ್ಥಿತಿಯ ಬಗ್ಗೆ ಇಲ್ಲಿ ಹೇಳಲು ನನಗೆ ವೇಳೆ ಇರುವುದಿಲ್ಲ. ಆದರಿಂದಾಗಿ ನಾನು ನನ್ನ ಜಿಲ್ಲೆಯ ಬಗ್ಗೆ ಮಾತ್ರ ನನ್ನ ವಿಚಾರಗಳನ್ನು ಹೇಳುತ್ತೇನೆ. ಸಾಧಾರಣವಾಗಿ ಈ ಮೊದಲೇ ಎಷ್ಟೋ ಸಾರಿ ಈ ವಿಚಾರವಾಗಿ ನಾನು ಹೇಳುತ್ತಿರು ವುದು ಇಲ್ಲಿರುವ ಮಾನ್ಯ ಸದಸ್ಯರಿಗೂ ಮತ್ತು ಸರ

ಕಾರಕ್ಕೂ ಗೊತ್ತಿರಬಹುದು. ಇಡೀ ನೂತನ ಮೈಸೂರು ರಾಜ್ಯದಲ್ಲಿ ದುಷ್ಕಾಲ ಇರತಕ್ಕ ಪ್ರದೇಶಗಳಲ್ಲಿ ಬಿಜಾಪುರ ಜಿಲ್ಲೆಯು ಬರಕ್ಕೆ ಪ್ರಸಿದ್ಧಿಯಾದುದು. ಯಾವಾಗಲೂ ದುಷ್ಕಾಲಕ್ಕೆ ಬೀಳುತ್ತಿದೆ. ಅದರಿಂದಾಗಿ ಈ ಅನ್ನದ ಸಮಸ್ಯೆ ಬಹಳ ಭೀಕರವಾದ ಸಮಸ್ಯೆಯಾಗಿದೆ. ಅನ್ನದ ಸಮಸ್ಯೆ ಬಿಜಾಪುರ ಜಿಲ್ಲೆಯೊಂದರಲ್ಲೇ ಅಲ್ಲದೆ ಇತರ ಕಡೆಗಳಲ್ಲಿಯೂ ಕೂಡ ಇದೆ. ಇದೊಂದು ಬಹು ಮುಖ್ಯವಾದ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಸರಕಾರದವರು ಕೂಲಂಕಷವಾಗಿ ವಿಚಾರಮಾಡಿ ಒಂದು ಸರ್ವೇಮಾಡಿ ಸಂಸ್ಥಾನದಾದ್ಯಂತ ಇರುವ ಪರಿಸ್ಥಿತಿಯನ್ನು ನೋಡಿ ಎಷ್ಟೆಷ್ಟು ಕೊರತೆ ಬೀಳುತ್ತಿದೆ ಎನ್ನುವುದನ್ನು ನೋಡಬೇಕು. ಸರಕಾರ ಆ ರೀತಿಯಾದ ಸರ್ವೆ ಕೆಲಸವನ್ನು ಇಲ್ಲಿಯವರೆಗೂ ಮಾಡಿಲ್ಲ. ಈಗಲಾದರೂ ನಮ್ಮ ಸರಕಾರಕ್ಕೆ ಎಷ್ಟು ದುಡ್ಡು ಖರ್ಚಾದರೂ ಚಿಂತೆಯಿಲ್ಲ, ಈ ರೀತಿಯಾದ ಕೆಲಸವನ್ನು ಮಾಡಿ ನಮ್ಮ ಈ ಮಾನ್ಯ ಸಭೆಯ ಮುಂದಿಟ್ಟು ಅದಕ್ಕೆ ಬೇಕಾದ ಕ್ರಮಗಳನ್ನು ಕೈಗೊಳ್ಳಬಹುದು ಮತ್ತು ನಮ್ಮ ಕಡೆಗೆ ಅನುಕೂಲವಾಗುವ ಸಲುವಾಗಿ ಇದಕ್ಕೆ ಟ್ಯಾಕ್ಸ್ ಬೇಕಾದರೂ ಹಾಕಬಹುದು, ನಮ್ಮ ಕಡೆಯವರು ಕೊಡಲು ತಯಾರಾಗಿದ್ದಾರೆ. ಹೇಗಾದರೂ ಮಾಡಿ ಈ ಅನ್ನದ ಸಮಸ್ಯೆಯನ್ನು ಬಗೆಹರಿಸಲು ತಕ್ಕ ಕಾರ್ಯಕ್ರಮಗಳನ್ನು ಈ ಕೂಡಲೇ ತೆಗೆದುಕೊಳ್ಳಬೇಕಾದುದು ಅಗತ್ಯ. ಈ ದೃಷ್ಟಿಯಿಂದ ನಮ್ಮ ಕೊರತೆ ಪ್ರದೇಶಗಳಲ್ಲಿ ಹೆಚ್ಚಿನ ಬೆಳೆಯನ್ನು ಬೆಳೆಯುವ ಸಲುವಾಗಿ ತಕ್ಕಷ್ಟು irrigation facilitiesಗಳನ್ನು ಮಾಡಿಕೊಟ್ಟರೆ ನಮ್ಮ ಭಾಗದ ಜನಗಳಿಗೆ ಬಹಳ ಅನುಕೂಲವಾಗುತ್ತದೆ. ಈಗ ರಾಜ್ಯದಲ್ಲಿ ನೀರಾವರಿ ಯೋಜನೆಗಳಿಗಾಗಿ ಎಷ್ಟೋ ಹಣವನ್ನು ಸರಕಾರ ಖರ್ಚು ಮಾಡುತ್ತಿದೆ. ನಮ್ಮ ಜಿಲ್ಲೆಯಲ್ಲಿ ಐದು ಹೊಳೆಗಳು ಹರಿಯುತ್ತಿವೆ. ಈಗ ಮೊದಲನೇ ಪಾಂಚವಾರ್ಷಿಕ ಯೋಜನೆ ಮುಗಿದು ಎರಡನೇ ಪಾಂಚವಾಷಿಕ ಯೋಜನೆ ಕೂಡ ಬಂದಿದೆ. ಮೊದಲನೆ ಪಾಂಚವಾರ್ಷಿಕ ಯೋಜನೆಯಲ್ಲಿ ಆಗಿನ ಮುಂಬೈ ಸರಕಾರವನ್ನು ಕೇಳಿದ್ದರೂ ಕೂಡ ತಕ್ಕಷ್ಟು ಪರಿಹಾರ ಸಿಕ್ಕಲಿಲ್ಲ, ಅದನ್ನು ಇಲ್ಲಿ ಹೇಳುವ ವಿಷಯವಲ್ಲ. ಅದಕ್ಕಾಗಿ ಆ ವಿಷಯವನ್ನು ಈಗ ನಾನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಈಗ ದೇಶದಲ್ಲಿ ಎರಡನೆಯ ಪಾಂಚವಾರ್ಷಿಕ ಯೋಜನೆಗಾಗಿ 48 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡುತ್ತಿದ್ದರೂ ನಮ್ಮ ಬಿಜಾಪುರ ಜಿಲ್ಲೆಗೆ ತಕ್ಕಷ್ಟು ಸಹಾಯವು ದೊರಕುತ್ತಿಲ್ಲ. ಇದು ಹೇಗಿದೆ ಎಂದರೆ ಒಂದು ದೊಡ್ಡದಾದ ದವಾಖಾನದಲ್ಲಿ ಲಕ್ಷಾಂತರ ರೂಪಾಯಿಗಳ ಔಷಧಿಗಳೇನೋ ಇರುತ್ತವೆ. ಆದರೆ ಅಲ್ಲಿ ರೋಗಿಯಾದವನು ಈ ಔಷಧಿಗಳನ್ನು ಸುಮ್ಮನೆ ನೋಡಿಕೊಂಡು ಇರಬೇಕೇ ಹೊರತು ಅದರಿಂದ ಅವನಿಗೆ ಸಾಕಷ್ಟು ಪ್ರಯೋಜನವು ಸಿಕ್ಕುತ್ತಿಲ್ಲ. ಹಾಗೆ ಈಗ ಎರಡನೇ ಪಾಂಚವಾರ್ಷಿಕ ಯೋಜನೆಯಿಂದ ಯಾವ ರೀತಿಯಾದ ಪ್ರಯೋಜನವೂ ಸಿಕ್ಕುತ್ತಿಲ್ಲ. ನಮ್ಮ ಕಡೆಗಳಲ್ಲಿ Upper Krishna Scheme ಇತ್ತು. ಘಟಪ್ರಭಾ, ಮಲಪ್ರಭಾ ಯೋಜನೆಗಳಿವೆ ಮತ್ತು ಇನ್ನಿತರ ಯೋಜನೆಗಳಿವೆ. ಇವುಗಳಲ್ಲಿ ಸುಮಾರು ಎರಡು ಕೋಟಿ ರೂಪಾಯಿಗಳಷ್ಟನ್ನು ನಮ್ಮ ಬಿಜಾಪುರ ಜಿಲ್ಲೆಯ ದುಷ್ಕಾಲ ಪರಿಸ್ಥಿತಿಯ ಸಲುವಾಗಿ ಖರ್ಚುಮಾಡಿದರೆ ನಮ್ಮ ಭಾಗದ ಜನಗಳಿಗೆ ಕಿಂಚಿತ್ತಾದರೂ ಪ್ರಯೋಜನ ದೊರಕುವಂತಾದೀತು. ಈ ರೀತಿಯಾದ ಯಾವ ಕೆಲಸಗಳನ್ನು ಮಾಡಿದರೂ ನಮ್ಮ ಭಾಗದ ಆಹಾರ ಪರಿಸ್ಥಿತಿ ಸುಧಾರಿಸುತ್ತದೆ. ನಮ್ಮಲ್ಲಿ ಐದು ಹೊಳೆಗಳು ಹರಿಯುತ್ತಿವೆ. ಅವುಗಳ ನೀರನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವ ಕಾರ್ಯವನ್ನು ಕೈಗೊಂಡರೆ ನಮ್ಮ ಭಾಗದ ಜನಗಳಿಗೆ ಎಷ್ಟೋ ಉಪಯೋಗವಾಗುತ್ತದೆ. ಹೀಗೆ ಏನೂ ನೀರಾವರಿಯ ಕಾರ್ಯ ನಮ್ಮ ಕಡೆ ಇಲ್ಲಿಯುವರೆಗೆ ನಡೆದಿಲ್ಲ. ಇದರಿಂದ ನಮ್ಮ ಭಾಗದ ಜನಗಳು ಬಹಳ ಸಂಕಟದಿಂದ ಕಣ್ಣೀರು ಸುರಿಸುತ್ತಿದ್ದಾರೆ.

ನಾನು ಮೊನ್ನೆ ಮೈಸೂರಿಗೆ ಹೋಗುವಾಗ ಮಂಡ್ಯದಲ್ಲಿ ನೋಡಿದೆ. ಆ ಮಂಡ್ಯ ಜಿಲ್ಲೆಯಲ್ಲಿದ್ದ ನೀರಾವರಿ ಸೌಕರ್ಯಗಳನ್ನು ನೋಡಿ ನನಗೆ ಬಹಳ ಆನಂದವಾಯಿತು ; ಮತ್ತು ಬಹಳ ಸಂತೋಷವಾಯಿತು. ಅಲ್ಲಿರುವ ಜನಗಳಿಗೆ ಭೂಮಿಯ ಸುತ್ತಲೂ ನೀರಿನ ಸೌಕರ್ಯ ದೊರೆಯಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅದರಿಂದ ಅಲ್ಲಿ ನೀರಾವರಿ ಯೋಜನೆಯ ಸಮಸ್ಯೆಯಿಂದ ಬಹಳ ಲಾಭವೂ ಆಗಿದೆ. ಮತ್ತೆ ಕೆಲವು ಸದಸ್ಯರು ಇಲ್ಲಿ ಅಕ್ಕಿಯ ಸಮಸ್ಯೆಯ ವಿಚಾರವಾಗಿ ಮಾತನಾಡಿದರು. ನಮ್ಮ ಬೆಳಗಾಂ, ಬಾಗೇವಾಡಿ ಈ ಕಡೆಗಳಲ್ಲಿ ಜೋಳ ಹೆಚ್ಚಾಗಿ ದೊರೆಯುತ್ತದೆಯೇ ವಿನಾ ಅಕ್ಕಿ ಹೆಚ್ಚಿಗೆ ಇಲ್ಲ. ಹೀಗೆ ಜೋಳ ಬಾಕಿ ಕಡೆಗಳಲ್ಲಿ ಎಂದರೆ ಗುಜರಾತಿನಿಂದಲೂ ಸ್ವಲ್ಪ ಬರುತ್ತದೆ. ಮತ್ತೆಲ್ಲಿಯೂ ಈ ರೀತಿಯಾಗಿ ಜೋಳವನ್ನು ಬೆಳೆಯುವುದಕ್ಕಾಗುವುದಿಲ್ಲ. ಹೀಗೆ ಜೋಳವನ್ನು ಬೆಳೆಯಲು ಸರಿಯಾದ ಪ್ರೋತ್ಸಾಹವಿಲ್ಲ ಮತ್ತು ನೀರಿನ ಸೌಕರ್ಯ ಸಾಲದು. ಮುಖ್ಯವಾಗಿ ಇಲ್ಲಿ ಐದು ನದಿಗಳು ಹರಿಯುತ್ತಿದ್ದರೂ ಅದರಿಂದೇನೂ ಸರಿಯಾದ ಉಪಯೋಗವನ್ನು ಮಾಡಿಕೊಂಡಿಲ್ಲ. ಎಷ್ಟೋ ಭಾಂಡಗಳಿವೆ ಮತ್ತು ಎಷ್ಟೋ ಕಾಲುವೆಗಳನ್ನು ತೆಗೆಯಬಹದು. ಹಾಗೇನೂ ಮಾಡಿಲ್ಲ. ಈ ಕಡೆಗಳಲ್ಲಿ ತರಿ ಎಷ್ಟಿದೆ ಎಂದು ಹೇಳುತ್ತಾರೆ. ನಮ್ಮ ಕಡೆ ತರಿ ಎನ್ನುವುದೇ ಇಲ್ಲ. ಹಾಗಿಲ್ಲದಿರುವುದರಿಂದ ಈ ಕಂಟ್ರೋಲು ಸಮಸ್ಯೆ, ಅಕ್ಕಿಯ ಸಮಸ್ಯೆ ಇವೆಲ್ಲ ಬಂದಿತ್ತು. ಆಗ ಗೋದಾವರಿ, ತುಂಗಾ ಮೊದಲಾದ ಅಣೆಕಟ್ಟೆಗಳನ್ನು ಕಟ್ಟಿ ಪ್ರೋತ್ಸಾಹಿಸಿದರು. ಅದರ ಸಲುವಾಗಿ ನಮ್ಮ ಬಿಜಾಪುರ ಜಿಲ್ಲೆಯ ಮಟ್ಟಿಗೆ ಅಷ್ಟು ನೀರಾವರಿ ಕೆಲಸಗಳನ್ನು ಮಾಡಿಸಿದರೆ ರಾಜ್ಯದಲ್ಲಿ ಅಷ್ಟು ಅನ್ನ ಉತ್ಪತ್ತಿ ಮಾಡಲಿಕ್ಕೆ ಸಹಾಯವಾಗುತ್ತದೆ. ಆದುದರಿಂದ ಈ ನೀರಿನ ಯೋಜನೆಗಳನ್ನು ಮಾಡಲು ಒಂದು ಸರ್ವೆ ನಡೆಸುವ ವ್ಯವಸ್ಥೆ ಮಾಡಿದರೆ ನಮ್ಮ ಅನ್ನದ ಸಮಸ್ಯೆ ಪರಿಹಾರವಾಗುತ್ತದೆ ಮತ್ತು ಜನಗಳ ತೊಂದರೆಯು ಕಡಮೆಯಾಗುತ್ತದೆ. ಮಾನ್ಯ ರೆವೆನ್ಯೂ ಮಂತ್ರಿಗಳು ಲೆಕ್ಕವಿಲ್ಲದಷ್ಟು ಅಪರಿಮಿತವಾಗಿ ಸಹಾಯ ಮಾಡಿದ್ದಾರೆ. ನಮ್ಮ ರೆವೆನ್ಯೂ ಮಂತ್ರಿಗಳು ಹೇಳಿರುವಂತೆ ನಮ್ಮ ಕಡೆಯಲ್ಲಿ ಈ ಕ್ಷಾಮದ ಪರಿಸ್ಥಿತಿಯ ಕೆಲಸಮಾಡುವ ನೌಕರರು ಕೂಡ ದಿನಕ್ಕೆ 24 ತಾಸು ಕೆಲಸಮಾಡುತ್ತಿದ್ದರೂ ಈ ಕೆಲಸ ಪೂರೈಸಿಲ್ಲ. ಹಿಂದೆ ಈ ವಿಷಯವಾಗಿ ಒಂದು ಪ್ರಶ್ನೆ ಕಳಿಸಿದ್ದೆ. ಸೆಪ್ಟೆಂಬರ್ ಎಂಟನೆಯ ತಾರೀಖಿಂದ ಈ ದುಷ್ಕಾಲದ ಕೆಲಸ ಮಾಡುತ್ತಿರುವ ನೌಕರರೆಲ್ಲರನ್ನೂ ಬಂದು ಮಾಡುತ್ತೀರೆಂದು ಕೇಳಿದೆ, ಆ ವಿಷಯದಲ್ಲಿ ಅವತ್ತೇ ಒಂದು ರಿಪೋರ್ಟನ್ನು ಕೂಡ ಇವರನ್ನಿರಿಸಿಕೊಳ್ಳಲು ಕಳಿಸಿತ್ತು. ಅದಲ್ಲದೆ P.W.D.ಯಲ್ಲಿ ಕೆಲಸ ಮಾಡುವ ಸಾವಿರಾರು ನೌಕರರು ಇದ್ದಾರೆ. ಅವರಿಗಾಗಿ ಕೆಲಸಗಳನ್ನು ಒದಗಿಸಬೇಕಾಗುತ್ತದೆ. ಇದು unemployment ಎಂದು ಹೇಳಬಹುದು, ಆದರೆ ದುಷ್ಕಾಲವಿರುವುದರಿಂದ ಈ ರೀತಿಯಾದ unemployment ಎಂದು ಹೇಳಲಿಕ್ಕೆ ಬರುವುದಿಲ್ಲ. ಇದು ಭಾರತದಲ್ಲಿರುವ unemployment ವಿಷಯ

(ಶ್ರೀ ಎಸ್. ವೈ. ಪಾಟೀಲ್)

ವಾಗುವುದಿಲ್ಲ. ಅದರ ಸಲುವಾಗಿ, ನಾನು ಸಮ್ರತೆಯಿಂದ ಪ್ರಾರ್ಥಿಸಕ್ಕದ್ದು, ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಇರಿಗೇಷನ್ನು ಆಗತಕ್ಕದ್ದು, ಎನ್ನುವುದನ್ನು ನೋಡಿ ಒಂದು ಖಾಯಂ ಯೋಜನೆ ಮಾಡಬೇಕು. ಹಾಗೆ ಮಾಡಬೇಕಾಗಿದ್ದರೆ ಹೆಚ್ಚಿನ ಖರ್ಚು ಆಗುವ ಹಾಗಿದ್ದರೆ ನಮ್ಮ ಜನಗಳ ಮೇಲೆ ಟ್ಯಾಕ್ಸನ್ನು ಬೇಕಾದರೂ ಹಾಕಬಹುದು. ಅದನ್ನು ಕೊಡಲು ನಮ್ಮ ಜನ ಸಿದ್ಧವಾಗಿದ್ದಾರೆ. ನಮ್ಮಲ್ಲಿ ಅನ್ಯಾಯವಾಗಿ ಸಮುದ್ರಕ್ಕೆ ಹೋಗುತ್ತಿರುವ ನೀರನ್ನು ಉಪಯೋಗ ಮಾಡಬೇಕಾದದ್ದು ಅಗತ್ಯ. ಅದಕ್ಕಾಗಿ ಕೂಡಲೇ ತಕ್ಕ ಇರಿಗೇಷನ್ನಿನ ಕಾರ್ಯಕ್ರಮಗಳನ್ನು ತೆಗೆದುಕೊಂಡು ಒಂದು ಸ್ಕೀಮನ್ನು ತಯಾರುಮಾಡಬೇಕಾದುದು ಅಗತ್ಯ. ಹಾಗೆ ಮಾಡಿಕೊಟ್ಟರೆ ನಮ್ಮ ಜನಗಳಿಗೆ ಇರುವ ತೊಂದರೆ ತಪ್ಪುತ್ತದೆ. ನಮ್ಮ ಬಿಜಾಪುರ ಜಿಲ್ಲೆಗೆ ಬರುವಷ್ಟು ಬರ ರಾಜ್ಯದ ಮತ್ತಾವ ಕಡೆಯೂ ಇಲ್ಲ. ದೋಗಿಬರ, ಹಸಿಬರ ಮುಂತಾದ ಬರಗಳು ಬೇಕಾದಷ್ಟು ಇಲ್ಲಿಗೇ ಬರುತ್ತದೆ, ಈ ಬರಗಾಲವನ್ನು ತಪ್ಪಿಸುವುದಕ್ಕೆ ಸಾಧ್ಯವಾಗಿಲ್ಲ. ನಮ್ಮಲ್ಲಿ ಫಲವತ್ತಾದ ಭೂಮಿಯಿದೆ. ಅದರಲ್ಲಿ ಬಾಗೇವಾಡಿ ತಾಲ್ಲೂಕದಲ್ಲಿರುವ ಭೂಮಿಯಂತಹ ಭೂಮಿ ಎಲ್ಲಿಯೂ ಸಿಕ್ಕುವುದಿಲ್ಲ. ಹಾಗೆ ಈವೊತ್ತಿಗೂ ಸಾವಿರಾರು ಎಕರೆ ಭೂಮಿಗಳು ಸಿಕ್ಕುತ್ತವೆ. ಧಾರವಾಡದಲ್ಲಿರುವ ರೋಣ ತಾಲ್ಲೂಕದಲ್ಲಿರುವ ಭೂಮಿಯನ್ನು ನೋಡಿ, ಬೆಳಗಾಂನಲ್ಲಿರುವ ಭೂಮಿಯನ್ನು ನೋಡಿದರೆ ಒಂದು ಎಕರೆಗೆ ಬೆಳೆಯು ಒಂದಕ್ಕೆರಡರಷ್ಟು ಉತ್ಪತ್ತಿ ಆಗುವ ಪರಿಸ್ಥಿತಿ ಇದೆ. ವಿಜಾಪುರ, ಬಾಗೇವಾಡಿ ತಾಲ್ಲೂಕುಗಳಲ್ಲಿ ಒಳ್ಳೆಯ ಫಲವತ್ತಾದ ಭೂಮಿ ಇದೆ. ನೀರಾವರಿ ಇಲ್ಲದ ಮೂಲಕ ಏನೂ ಉಪಯೋಗವಾಗುತ್ತಿಲ್ಲ. ವಿಜಾಪುರ ಜಿಲ್ಲೆಯ ಪ್ರದೇಶವನ್ನು ಸರ್ವೆಮಾಡಿ ಒಂದು ಖಾಯಂ ಸ್ವರೂಪದ ಯೋಜನೆಯನ್ನು ಕೈಗೊಂಡು ಈ ಸಮಸ್ಯೆಯನ್ನು ಬಿಡಿಸಬೇಕೆಂದು ಸರ್ಕಾರಕ್ಕೆ ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಇಂಥ ಬರಗಾಲದ ದುಃಖದ ದಿನಗಳು ಇನ್ನು ಮುಂದೆ ಬರದಂತೆ ಮಾಡಬೇಕೆಂದು, ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಡೋಣಿ ಪ್ರಾಜೆಕ್ಟು ಮಲಪ್ರಭಾ ಪ್ರಾಜೆಕ್ಟು ಮಾಡಿದರೆ 150 ಹಳ್ಳಿಗಳಿಗೆ ಪರಿಹಾರ ದೊರೆಯುತ್ತದೆ. ವಿಜಾಪುರ ಜಿಲ್ಲೆಯಲ್ಲಿ ಭೀಮಾ, ಕೃಷ್ಣಾ, ಮಲಪ್ರಭಾ ನದಿಗಳಿಗೆ ಅಣೆಕಟ್ಟು ಕಟ್ಟಿ, ನೀರು ಸಂಗ್ರಹಿಸಿ, ನೀರಾವರಿ ಉಪಯೋಗಿಸಬಹುದು. ಕಾವೇರಿ ನದಿಯ ಕನ್ನಂಬಾಡಿಕಟ್ಟೆಯಿಂದ ನೀರಾವರಿಗೆ ನೀರು ದೊರೆಯುತ್ತಿರುವದನ್ನು ನೋಡಿ ನನಗೆ ಬಹಳ ಆನಂದವಾಯಿತು. ವಿಜಾಪುರ ಜಿಲ್ಲೆಯಲ್ಲಿ ಐದು ನದಿಗಳು ಹರಿಯುತ್ತಿರುವುದರಿಂದ ಅಂಥದು ಒಂದು ನೀರಾವರಿ ಯೋಜನೆ ಮಾಡಬಹುದು. ಇಂಥ ಯೋಜನೆಗೆ ಬೇಕಾಗುವ ಹಣದ ಸಲುವಾಗಿ ಜನರಮೇಲೆ ಟ್ಯಾಕ್ಸ್ ಹಾಕಿದರೂ ಅಡ್ಡಿ ಇಲ್ಲ. ವಿಜಾಪುರ ಜಿಲ್ಲೆಯ ಬರಗಾಲ ಪರಿಸ್ಥಿತಿಯನ್ನು ನಿವಾರಣೆ ಮಾಡಲು ಒಂದು ಖಾಯಂ ಸ್ವರೂಪದ ಯೋಜನೆಯನ್ನು ಮಾಡಬೇಕೆಂದು ಸರ್ಕಾರಕ್ಕೆ ಮತ್ತೊಮ್ಮೆ ಪ್ರಾರ್ಥನೆಮಾಡಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ (ತಿಪಟೂರು).—ಸ್ವಾಮಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಹತ್ತು ವರ್ಷಗಳಾದರೂ ರಾಜ್ಯದಲ್ಲಿ ಕ್ಷಾಮ ಪರಿಸ್ಥಿತಿಯನ್ನು ಹೋಗಲಾಡಿಸಲು ಖಾಯಂ ಕಾರ್ಯಕ್ರಮಗಳನ್ನು ಕೈಕೊಂಡಿಲ್ಲವಲ್ಲಾ ಎಂದು ವಿಷಾದದಿಂದ ಹೇಳಬೇಕಾಗಿದೆ. ಕ್ಷಾಮ ಬಂದಾಗ ಪರಿಹಾರ ಕಾಮಗಾರಿಗಳನ್ನು ಪ್ರಾರಂಭಿಸುತ್ತಾರೆ. ಹಳ್ಳಿಗಳಲ್ಲಿ ರೈತರು ವ್ಯವಸಾಯಕ್ಕೆ ಗುಳ ಬೇಡಿದರೆ ಕಬ್ಬಿಣದ ಅಭಾವ ಇದೆ ಎಂದು ಹೇಳುತ್ತಾರೆ. ವ್ಯವಸಾಯಕ್ಕೆ ಬೇಕಾಗುವ ಸಾಮಾನುಗಳು ಸಿಕ್ಕುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲಿ ಮಳೆ ಎಷ್ಟೆಷ್ಟು ಆಗುತ್ತದೆ, ಏನೇನು ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು ಎಂಬುದಕ್ಕೆ ಸರ್ವೇ ಮಾಡಿ, ಭಾವಿಗಳನ್ನು, ಬೋರ್‌ವೆಲ್ ಮಾಡಿಸಿಕೊಡುವ ಸರಿಯಾದ ಪರಿಹಾರ ಕಂಡುಹಿಡಿಯಬೇಕೆಂಬುದನ್ನು ಯಾರೂ ಇದೂವರೆಗೂ ಮಾಡಿಲ್ಲ. ಸರ್ಕಾರದ ಕೆಲಸ ದೇವರ ಕೆಲಸವಾಗಿದೆ. ಪೈರು ಮಳೆ ಎಷ್ಟಾಗಿದೆ ಎಂದು ತಾಲ್ಲೂಕಿನಲ್ಲಿ ಮಂತ್ರಿಗಳು ಸಂಚರಿಸಿ ಪರಿಸ್ಥಿತಿಯನ್ನು ಪರಿಶೀಲಿಸಿದ್ದಾರೆಯೇ? ವಿಧಾನಸಭಾ ಸದಸ್ಯರು ಸರ್ಕಾರಕ್ಕೆ ಪತ್ರ ಬರೆದರೆ ಅದಕ್ಕೆ ಗಮನ ಕೊಟ್ಟಿಲ್ಲ. ಬರಗಾಲ ಪರಿಸ್ಥಿತಿಯನ್ನು ಚರ್ಚೆ ಮಾಡುವುದಕ್ಕೆ ಅಸೆಂಬ್ಲಿಯಲ್ಲಿ ಒಂದು ದಿವಸ ಕೊಡಲಾಗಿದೆ. ಒಂದು ದಿವಸ ಚರ್ಚೆಮಾಡುವುದು ಎಂದರೆ ಸರ್ಕಾರದ ಹಣ ಎಷ್ಟು ಖರ್ಚಾಗುತ್ತದೆ ನೋಡಬೇಕು. ಈಗಾಗಲೇ ಮಂತ್ರಿಮಂಡಲ ವಿಸ್ತರಣೆಯಾಗಿದೆ. ಬರಗಾಲ ಪರಿಸ್ಥಿತಿ ವಿಷಯವನ್ನು ನೋಡಿಕೊಳ್ಳುವುದಕ್ಕೆ ಒಬ್ಬ ಉಪ-ಮಂತ್ರಿಯನ್ನು ನೇಮಕಮಾಡುತ್ತಾರೆಂದು ಕೇಳಿದ್ದೇವೆ. ಈ ರೀತಿ ಮಂತ್ರಿಗಳನ್ನು ನೇಮಕಮಾಡುವುದನ್ನು ಬಿಟ್ಟು, ಈಗಿರುವ ಮಂತ್ರಿಗಳೇ ಪ್ರತಿಯೊಂದು ತಾಲ್ಲೂಕಿನಲ್ಲಿ ಸಂಚಾರಮಾಡಿ ಪರಿಸ್ಥಿತಿಯನ್ನು ಅರಿತುಕೊಂಡು ಜಾಗ್ರತೆ ಪರಿಹಾರವನ್ನು ಕೊಡುತ್ತಾರೆಂದು ನಾನು ನಂಬಿದ್ದೇನೆ. ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಪ್ರದೇಶದಲ್ಲಿ ಮಳೆ ಬಾರದೆ ಕ್ಷಾಮ ಪರಿಸ್ಥಿತಿ ಒದಗಿ ರೈತರಿಗೆ ಕೆಲಸವಿಲ್ಲದೆ ಬಹಳ ಕಷ್ಟದ ಪರಿಸ್ಥಿತಿ ಉಂಟಾಗಿದೆ. ಹನ್ನೆರಡು ವರ್ಷಗಳಾದರೂ ಒಂದು ಕೆರೆಯ ತೂಬು ರಿಪೇರಿ ಮಾಡುವುದು ಆಗಿಲ್ಲ. ಈ ರೀತಿ ನಡೆದಿರುವದರಿಂದ ನಮ್ಮದು ಪ್ರಜಾಪ್ರಭುತ್ವ ಸರ್ಕಾರವೇ? ಎಂದು ಅನುಮಾನ ಬರುತ್ತದೆ.

ದೊಡ್ಡದೊಡ್ಡ ಜಲಾಶಯಗಳನ್ನು ಎಲ್ಲಿ ಕೊಟ್ಟಿದ್ದೀರಿ ಎಂಬುದನ್ನು ಸಿನಿಮಾದಲ್ಲಿ ತೋರಿಸುತ್ತೀರಿ; ಮತ್ತು ಅವುಗಳ ವಿಷಯವಾಗಿ ದೊಡ್ಡದೊಡ್ಡ ಪುಸ್ತಕಗಳನ್ನು ಪ್ರಿಂಟ್‌ಮಾಡಿ ನಮಗೆ ತೋರಿಸುತ್ತೀರಿ. ಸಾಮಾನ್ಯ ಸಣ್ಣಪುಟ್ಟ ರೈತರಿಗೆ ಇದರಿಂದ ಏನೂ ಪ್ರಯೋಜನವಾಗಿಲ್ಲ. ಸ್ವಲ್ಪ ರಾಗಿ, ಬತ್ತ ಬೆಳೆಯುವುದಕ್ಕೆ ಸಣ್ಣಪುಟ್ಟ ಕೆರೆಗಳಿಗೆ ನಿಗಾ ಕೊಡಿ ಎಂದು ಹೇಳಿದರೆ ಆಗಲಿ ನೋಡೋಣ ಮಾಡೋಣ ಪರಿಶೀಲಿಸುತ್ತೇವೆ ಎಂದು ಹೇಳುತ್ತೀರಿ. ಪರಿಶೀಲಿಸುವುದರಲ್ಲೇ ನಿಮ್ಮ ಕಾಲವನ್ನು ಕಳೆಯುತ್ತೀರಿ. ಇದು ಹೇಗಿದೆ ಎಂದರೆ ಒಂದು ಕಟ್ಟಡಕ್ಕೆ ಬೆಂಕಿಬಿದ್ದಾಗ ಬಾವಿಗೆ ನೀರು ತರುವುದಕ್ಕೆ ಹೋದ ಸ್ಥಿತಿ ಆಗಿದೆ. ಕಟ್ಟಡ ಉರಿಯುತ್ತಿರುತ್ತದೆ, ನೀರು ಎಂದು ಹೋಗುತ್ತಾರೆ, ಎನ್ನುವ ಸ್ಥಿತಿ ಇದೆ. ಇದು ಲಘುವಾದ ಟೀಕೆಯಲ್ಲ. ನ್ಯಾಯವಾದ ಅಂಶ. ಇದನ್ನು ಗಮನದಲ್ಲಿಟ್ಟು ಕೊಂಡು P.W.D. ಮತ್ತು ಪಂಚಾಯಿತಿ ಕೆಲಸಗಳು ಎಷ್ಟು ಮಾಡಬೇಕೋ ಅವುಗಳನ್ನೆಲ್ಲಾ ಮುತವರ್ಜಿಯಿಂದ ಬೇಗ ಮಾಡಿಸಬೇಕು. ಸೊಸೈಟಿಗಳಲ್ಲಿ ದುಡ್ಡು ದುರುಪಯೋಗವಾಗುತ್ತಿದೆಯೆಂದು ಕಳೆದ ಹತ್ತಿಪ್ಪತ್ತು ವರ್ಷಗಳಿಂದ ಅವುಗಳ ಲೆಕ್ಕ ಆಡಿಟ್ ಆಗಿಲ್ಲ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರೆಂದು ತಿಳಿದು

ಕೊಂಡಿದ್ದೇನೆ. ಇಷ್ಟು ವಿಷಯಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ಕೆಂಪಮ್ಮ (ಕೊಳ್ಳೇಗಾಲ).—ಮಾನ್ಯ ಅಧ್ಯಕ್ಷರೇ, ಕೊಳ್ಳೇಗಾಲದ ತಾಲ್ಲೂಕಿನಲ್ಲಿ ಮಳೆಯಿಲ್ಲದ ಪ್ರಯುಕ್ತ ಆ ತಾಲ್ಲೂಕಿನಲ್ಲಿ ಮದುನಳ್ಳಿಕೆರೆ, ಸಿದ್ದಯ್ಯನಪುರದ ಕೆರೆ, ಕೊಳ್ಳೇಗಾಲದ ಕೆರೆ, ಮುಡಿಗುಂಡದ ಕೆರೆ, ಕುಂತೂರು ಕೆರೆ—ಈ ಐದು ಕೆರೆಗಳಲ್ಲಿ ನೀರಿಲ್ಲದೆ ಆ ಕೆರೆಯ ಬೈಲಿನಲ್ಲಿ ಇರತಕ್ಕಂಥ ಸಾವಿರಾರು ಎಕರೆ ಬತ್ತದ ಫಸಲು ಒಣಗಿಹೋಗುವ ಸ್ಥಿತಿಯಲ್ಲಿದ್ದದ್ದು ಸರಿಯಷ್ಟೆ; ಮತ್ತು ಈ ಕೆರೆಗಳ ಬೈಲಿನ ಕಂದಾಯಗಳನ್ನು ವಜಾಮಾಡಿಸಿ ಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸಿಕೊಂಡಿದ್ದೂ ಸರಿಯಷ್ಟೆ. ಆದರೆ ಸಕಾಲದಲ್ಲಿ ಮಳೆಯಾಗದೆ ಹಿಂಗಾರುಮಳೆ ಸಲೀಸಾಗಿ ಬಿದ್ದ ಕಾರಣ ಈ ತಾಲ್ಲೂಕಿನ ನೀರಾವರಿ ಫಸಲು ಹತ್ತು-ಹನ್ನೆರಡು ಆಣೆಯಷ್ಟು ಆಗಿರುವುದರಿಂದ ಈ ತಾಲ್ಲೂಕಿನ ಕಂದಾಯವನ್ನು ವಜಾಮಾಡಿಸುವುದು ಸರಿಯಿಲ್ಲವಾಗಿರುತ್ತದೆ; ಮತ್ತು ಈ ತಾಲ್ಲೂಕಿನ ಕೆಲವು ಹಳ್ಳಿಗಳು ಎಂದರೆ ಕುಂತೂರು, ಚಿಲಕವಾಡಿ, ಟಗರಪುರ, ಆಲಳ್ಳಿ, ಕಜ್ಜಿಉಂಡಿ, ಮಾಲಂಗಿ ಇನ್ನೂ ಸ್ವಲ್ಪ ಗ್ರಾಮಗಳಲ್ಲಿ ಮಳೆಯಾಗದ ಪ್ರಯುಕ್ತ ಈ ಹಳ್ಳಿಗಳಲ್ಲಿ ಜೋಳದ ಫಸಲು ಮತ್ತು ರಾಗಿಯ ಫಸಲು ಆಗಲಿಲ್ಲ. ಈ ಸ್ಥಳಗಳು ಕ್ಷಾಮ ಪ್ರದೇಶಗಳೆಂದು ಪರಿಗಣಿಸಬಹುದು. ಈ ಗ್ರಾಮಗಳ ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಬೆಳೆಯ ಹಾನಿಗೀಡಾಗಿರುವ ಹಳ್ಳಿಗಳ ಜನರುಗಳಿಗೆ ತೊಂದರೆಗಳನ್ನು ಪರಿಹರಿಸಲು ಕೊಳ್ಳೇಗಾಲದ ತಾಲ್ಲೂಕಿನ ಕೆರೆಗಳನ್ನು ಕಾಮಗಾರಿಕೆ ಮಾಡಿಸುವುದು ಮತ್ತು ಈ ತಾಲ್ಲೂಕಿನ ಹಳ್ಳಿಗಳ ರಸ್ತೆಗಳನ್ನು ರಿಪೇರಿ ಮಾಡಿಸುವುದರಿಂದ ಅಲ್ಲಿಯ ಜನರುಗಳ ಕಷ್ಟಗಳನ್ನು ನೀಗಬಹುದಾಗಿರುವುದರಿಂದ ಈ ತಾಲ್ಲೂಕುಗಳ ಸಣ್ಣ ಕಾಮಗಾರಿಕೆಗಳನ್ನು ನಡೆಯಿಸಿ ಅಲ್ಲಿಯ ಜನರುಗಳ ತೊಂದರೆಗಳನ್ನು ಪರಿಹರಿಸಬಹುದಾಗಿ ನಾನು ಮತ್ತೊಮ್ಮೆ ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ, ಸ್ವಾಮಿ.

ಶ್ರೀ ಎಚ್. ಸಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕ ಆಹಾರದ ಪರಿಸ್ಥಿತಿ ಮತ್ತು ಫ್ಯಾಮಿನ್ ವಿಷಯದಲ್ಲಿ ಮಾತನಾಡಲು ಒಂದು ದಿವಸದ ಕಾಲವನ್ನು ಉಪಯೋಗಿಸಿದ್ದೇವೆ. ನನಗೆ ಅನ್ನಿಸುತ್ತದೆ, ಈ ಒಂದು ದಿವಸದಲ್ಲಿ ಆಹಾರದ ಪರಿಸ್ಥಿತಿಯನ್ನು ಚರ್ಚೆ ಮಾಡುವಾಗ ಬಹು ಮುಖ್ಯವಾಗಿ ಸಂಬಂಧಪಟ್ಟ ಮಂತ್ರಿಗಳು ಇದ್ದು ಮಾನ್ಯ ಸದಸ್ಯರು ಹೇಳತಕ್ಕ ವಿಷಯಗಳನ್ನು ನೋಟುಹಾಕಿಕೊಂಡು ಸಂಬಂಧಪಟ್ಟ ಇಲಾಖೆಯವರು ಕ್ರಮ ತೆಗೆದುಕೊಳ್ಳುವಂತೆ ಮಾಡಬೇಕಾಗಿತ್ತು. ಈಗ ಏನಾಗಿದೆ ಎಂದರೆ ಮಾನ್ಯ ಸದಸ್ಯರು ಮಾಡುವ ಸಲಹೆಗಳು ಗಾಳಿಯಲ್ಲಿ ತೂರಿಹೋಗುತ್ತವೆ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಎಂದರೆ, ಮುಖ್ಯಮಂತ್ರಿಗಳು ಮೊದಲನೆಯವರು; ಎರಡನೆಯವರು ಆಹಾರದ ಮಂತ್ರಿಗಳು ಮತ್ತು ಮೂರನೆಯವರು P.W.D. ಮಂತ್ರಿಗಳು. ಇಷ್ಟು ಜನ ಈ ಸಭೆಯಲ್ಲಿದ್ದು ನಾವು ಏನು ಕಾರ್ಯಕ್ರಮ ತಕ್ಷಣ ತೆಗೆದುಕೊಳ್ಳಬೇಕು ಎಂಬುದನ್ನು ಮೊದಲು ಗಮನಿಸಬೇಕು. ಆದರೆ ಈಗ ಇರತಕ್ಕ ಮಂತ್ರಿಮಂಡಲ ರೈತರ ವಿಷಯದಲ್ಲಿ ಬಹಳ ಉದಾಸೀನಭಾವದಿಂದ ಇದ್ದಾರೆಂದು ಸಂಕಟದಿಂದ ಹೇಳಬೇಕಾಗಿದೆ. ಪ್ರತಿವರ್ಷ ಈ ಸಭೆ ಸೇರತಕ್ಕ ಕಾಲದಲ್ಲಿ ಮಳೆ ಹೋದಾಗ ಆಹಾರದ ಪರಿಸ್ಥಿತಿ ವಿಷಯವನ್ನು ಚರ್ಚೆಮಾಡತಕ್ಕ ಪದ್ಧತಿ ಮೊದಲಿನಿಂದಲೂ ಬಂದಿದೆ. ಆದರೆ ಮಂತ್ರಿಗಳು ಮಳೆ ಹೋದ ತಕ್ಷಣ ನಾವು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದೆವೋ ಅವುಗಳನ್ನು ಇಲ್ಲಿಯವರೆಗೂ ಇರತಕ್ಕ ಮಂತ್ರಿಗಳು ಯೋಚನೆ ಮಾಡಿಲ್ಲ. ಮಾನ್ಯ ಸದಸ್ಯರು ಸಹ ಸಲಹೆಕೊಡಬೇಕು. ಈ ಸಭೆಯಲ್ಲಿ ಚರ್ಚೆ ಆದರೆ ಜನಗಳಿಗೆ ನೇರವಾಗಿ ಆಹಾರ ಒದಗಿತು ಎಂದು ತಿಳಿದುಕೊಂಡುಬಿಡುತ್ತೇವೆ. ಸದಸ್ಯರು ಹೇಳುವುದಕ್ಕಿಂತ ಮುಂಚೆ ತಮ್ಮ ಕರ್ತವ್ಯವೇನು ಎಂಬುದನ್ನು ಮಂತ್ರಿಗಳು ತಿಳಿದುಕೊಳ್ಳಬೇಕು. ಹಾಗೆ ತಿಳಿದುಕೊಳ್ಳದೆ ಹೋದರೆ ಅವರು ನಿಜವಾಗಿ ಕರ್ತವ್ಯ ದೃಷ್ಟಿಯಿಂದ ಕೆಲಸಮಾಡಿದಹಾಗೆ ಆಗುವುದಿಲ್ಲ. ಮಂತ್ರಿಗಳೂ ಕೂಡ ಸತ್ಯ ಧರ್ಮಕ್ಕೋಸ್ಕರ ಹೋರಾಡಬೇಕು. ಇವೊತ್ತಿನ ದಿವಸ ನೌಕರರು 30 ದಿವಸ ಲೆಕ್ಕ ಮಾಡಿ ಸಂಬಳ ತೆಗೆದುಕೊಳ್ಳುವಹಾಗೆ ಮಂತ್ರಿಗಳೂ 30 ದಿವಸ ಲೆಕ್ಕ ಮಾಡುವ ಪರಿಸ್ಥಿತಿ ಒದಗಿದರೆ ನಮ್ಮ ದೇಶ ಅವರ ಕೈಸೇರಿ ಹಾಳಾಗಿ ಹೋಗುವ ಪರಿಸ್ಥಿತಿ ಒದಗುತ್ತದೆ. ಆಹಾರದ ವಿಷಯದಲ್ಲಿ ಎಷ್ಟು ಗಮನ ಕೊಡಬೇಕು ಎನ್ನುವುದನ್ನು ಈಗಾಗಲೇ ಮರೆತಿರುತ್ತಾರೆ. ಉದಾಹರಣೆಗೆ ಕಾರ್ಮಿಕರು ಗುಂಪುಕಟ್ಟಿಕೊಂಡು ಹೊರಟರೆ ತಕ್ಷಣ ಅವರಿಗೆ ಏನು ಮಾಡಬೇಕೋ ಅದನ್ನು ಆ ಕ್ಷಣವೇ ಮಾಡುತ್ತಾರೆ. ಹಾಗೆಯೇ ನೌಕರರು ಒಂದು ಗುಂಪುಕಟ್ಟಿಕೊಂಡು ಹೊರಟರೆ, ಅವರಿಗೆ ಏನೇನು ಮಾಡಬೇಕೋ ಅವರಿಗೆ ಎಷ್ಟು ಸಂಬಳ ಹೆಚ್ಚು ಮಾಡಬೇಕೋ ಅದನ್ನೆಲ್ಲಾ ಜಾಗ್ರತೆ ಫೈಸಲ್ ಮಾಡಬೇಕು. ರೈತರ ವಿಷಯ ಹಾಗಲ್ಲ. ರೈತರ ಏಳಿಗೆಗೋಸ್ಕರ ಮತ್ತು ಪುರೋಭಿವೃದ್ಧಿಗೋಸ್ಕರ ಕಳೆದ ಹತ್ತು ವರ್ಷಗಳಿಂದ ಏನೇನು ಕಾನೂನುಗಳನ್ನು ತಂದಿದ್ದೀರಿ ಎನ್ನುವುದನ್ನು ಯೋಚನೆ ಮಾಡಿಕೊಂಡು ಹೇಳುವುದಾದರೆ, ನಿಜವಾಗಿ ಒಂದು ಗುಂಡಾಕಾರವಾಗಿರುವ ಸೊನ್ನೆ ಎಂದು ಹೇಳಬೇಕಾಗಿದೆ. ಇವತ್ತಿನ ದಿವಸ ಸರ್ಕಾರ ಇರುವುದು ಹಳ್ಳಿಗಾಡಿನ ರೈತರಿಂದ. 100ಕ್ಕೆ 80 ಭಾಗ ಓಟುಗಳನ್ನು ಹಳ್ಳಿಗಳ ರೈತರಿಂದ ತೆಗೆದುಕೊಂಡು ಬಂದು ಮಂತ್ರಿಗಳಾಗಿರತಕ್ಕದ್ದು ಮತ್ತು ಮೆಂಬರುಗಳಾಗಿರತಕ್ಕದ್ದು. ಆದರೆ ನಮ್ಮ ಮನಸ್ಸು ಅವರ ಕಡೆ ಹೋಗುವುದಿಲ್ಲ. ಇವತ್ತಿನ ದಿವಸ ನಾಲ್ಕು ಆಣೆ, ಎಂಟು ಆಣೆ ಕೂಲಿ ಮಾಡುವ ಕಾರ್ಮಿಕರು ಮಂತ್ರಿಗಳನ್ನು ನೋಡಿದ ತಕ್ಷಣ ಅವರಿಗೆ ಅನುಕೂಲ ಉಂಟು ಮಾಡುವ ಮನೋಭಾವ ಮಂತ್ರಿಗಳಲ್ಲಿ ಅಡಕವಾಗಿದೆ. ಹಳ್ಳಿಯ ರೈತರ ಮೇಲೂ ಸೂಕ್ತಗಮನ ಕೊಡಬೇಕು ಎಂದು ಹೇಳುತ್ತೇನೆ. ಸ್ವಾಮಿ, ನಮ್ಮ ಆಹಾರದ ಪರಿಸ್ಥಿತಿ ಏತಕ್ಕೋಸ್ಕರ ಹೀಗಾಗುತ್ತಿದೆ ಎನ್ನುವುದನ್ನು ನೋಡಬೇಕು. 150 ವರ್ಷಗಳ ಹಿಂದಿನಿಂದಲೂ ನಮ್ಮಲ್ಲಿ ಶೇಕಡ 85 ಭಾಗ ವ್ಯವಸಾಯಗಾರರು ಇದ್ದಾರೆ. ಮೈಸೂರು ಸಂಸ್ಥಾನದ ವಿಷಯ ಮಾತನಾಡೋಣ. ಇವತ್ತಿನ ದಿವಸ ಶೇಕಡ 85 ಭಾಗ ವ್ಯವಸಾಯಗಾರರು ಇರುವಾಗ ನಮಗೆ ಆಹಾರದ ಕೊರತೆ ಏತಕ್ಕೆ ಆಗುತ್ತದೆ, ಎಂಬುದನ್ನು ಯೋಚನೆ ಮಾಡಬೇಕು. ರೈತರಿಗೆ ನ್ಯಾಯವಾದ ಧಾರಣೆ ವಾಸಿಗಳು ಸಿಕ್ಕದೆ ಅವರಿಗೆ ಹುಮ್ಮಸ್ಸು ಕಡಮೆಯಾಗಿದೆ. ಅವರಿಗೆ ಸರ್ಕಾರದಿಂದ ಏನೂ ಸೌಲಭ್ಯಗಳು ಸಿಕ್ಕುವುದಿಲ್ಲ ಎನ್ನುವ ಮನೋಭಾವನೆ ಬಂದಿದೆ. ಇವತ್ತಿನ ದಿವಸ ಆಹಾರದ ಪರಿಸ್ಥಿತಿ ಉತ್ತಮಗೊಳ್ಳಬೇಕಾದರೆ ನಿಜವಾಗಿ ರಾಗಿ, ಜೋಳ, ನವಣೆ ಮತ್ತು ಗೋಧಿ—ಈ ನಾಲ್ಕು ಪದಾರ್ಥಗಳಿಗೆ ನಾವು ಒಂದು ಬೆಲೆಯನ್ನು ನಿಗದಿಮಾಡಬೇಕು. ಓಪನ್ ಮಾರ್ಕೆಟ್ಟಿನಲ್ಲಿ ಇರುವುದಕ್ಕಿಂತ ಎರಡು ಮೂರು ರೂಪಾಯಿ ಬೆಲೆ ಜಾಸ್ತಿ ಆದರೂ ಪರವಾಗಿಲ್ಲ. ಆಗ ಎಷ್ಟು ಲಕ್ಷ

(ಶ್ರೀ ಎಚ್. ಜಿ. ನರಸಿಂಹೇಗೌಡ)

ಬೇಕಾದರೂ ದೊರೆಯುತ್ತದೆ. ನೀವು ವರ್ಷಕ್ಕೆ ಎರಡು ಕೋಟಿ ರೂಪಾಯಿಗಳ ಆಹಾರವನ್ನು ತರಿಸುತ್ತೀರಿ. ಅದಕ್ಕೆ ಬದಲಾಗಿ ಹೆಚ್ಚಿಗೆ ಧಾರಣೆವಾಸಿ ನಿಗದಿ ಮಾಡಿದರೆ ಮುಂದಿನ ವರ್ಷ ಬೇಕಾದಷ್ಟು ಆಹಾರ ಸಿಕ್ಕುತ್ತದೆ. ಅವನು ತನ್ನಷ್ಟಕ್ಕೆ ತಾನೇ ಗೊಬ್ಬರ ಹಾಕುತ್ತಾನೆ. ಅನೇಕ ಉಪಕರಣಗಳನ್ನು ತೆಗೆದುಕೊಳ್ಳುತ್ತಾನೆ. ಜಪಾನ್ ಮೆಥೆಡ್‌ನಿಂದ ಭತ್ತ ಬೆಳೆಯುವುದಕ್ಕೆ ಅವಕಾಶವಾಗುತ್ತದೆ.

4-30 P.M.

ಈ ದಿವಸ ಬೆಳೆಗಳ ಉಬ್ಬರವಿಳಿತ ಯಾವ ರೀತಿ ಇದೆ. ರೈತರವಿನಾ ಬಾಕಿಯುವರೆಲ್ಲಾ ಉತ್ತಮಸ್ಥಿ ಯಲ್ಲಿದ್ದಾರೆ. ವ್ಯಾಪಾರಸ್ಥರು ಲೆಕ್ಕಾಚಾರ ಹಾಕಿಕೊಂಡು ಪ್ರಾಫಿಟ್ ಹಾಕುತ್ತಾರೆ. ನೌಕರುಗಳಿಗೆ ಸಂಬಳಸಾರಿಗೆ ಜಾಸ್ತಿಯಾಗುತ್ತಿರುತ್ತದೆ. ಕಾರ್ಮಿಕರಿಗೆ ಎಜುಕೇಷನ್, ಮೆಡಿಕಲ್ ಏಡ್, ಮನೆಗಳನ್ನು ಕಟ್ಟಿಸಿಕೊಡುವುದು, ಬೋನಸ್ ಮುಂತಾದ ಸೌಲಭ್ಯಗಳು ಇರುತ್ತವೆ. ಬೆಲೆಗಳ ಉಬ್ಬರವಿಳಿತದಿಂದ ಇವತ್ತು ರೈತನ ಪರಿಸ್ಥಿತಿಯೇನು? 60-70 ರೂಪಾಯಿಯಾದರೂ ಪರವಾಗಿಲ್ಲ, ಕೊಂಡುಕೊಳ್ಳಿ, ರೈತನಿಗೆ ಹತ್ತು ರೂಪಾಯಿ ಫಾಯಿದೆ ಸಿಕ್ಕಲಿ. ನಮ್ಮ ಮೈಸೂರಿನಲ್ಲಿ ನಿಜವಾಗಿಯೂ ಎರಡೂವರೆ ಕೋಟಿ ರೂಪಾಯಿ ಡಿಫಿಸಿಟ್ ತೋರಿಸಿದರೂ ಚಿಂತೆ ಇಲ್ಲ. ಮುಂದಿನ ಸಾರಿಗಾದರೂ, ಅವನಿಗೆ ನೇರವಾಗಿ, ಹೆಚ್ಚಿಗೆ ರೇಟ್‌ನಲ್ಲಿ ದವಸ ಪರ್ಚೇಸ್ ಮಾಡುವ ಹಾಗೆ ಮಾಡಿ. ಹಾಗೆ ಮಾಡದೆ ಇದ್ದರೆ, ರೈತನ ಪರಿಸ್ಥಿತಿ ಬಹಳ ಕೆಟ್ಟುಹೋಗುತ್ತದೆ. ನಮಗೆ ಬರಬೇಕಾದ ಆಹಾರದ ಬೆಳೆ ಬರುವುದಿಲ್ಲ. ಆವರೇಜ್ ಲೆಕ್ಕ ಕಂಡುಹಿಡಿಯಿರಿ. ಆಹಾರದ ಮಂತ್ರಿಗಳು ಆಡಳಿತದಲ್ಲಿ ಪರಿಶ್ರಮ ಹೊಂದಿರುವರು. 20 ವರ್ಷಗಳ ಹಿಂದೆ, ಒಂದು ಎಕರೆಗೆ ರಾಗಿ ಹತ್ತು ಹನ್ನೆರಡು ಪಲ್ಲದವರೆಗೆ ಬೆಳೆಯುತ್ತ ಇತ್ತು, ಭತ್ತ 20-25 ಪಲ್ಲ ಬೆಳೆಯುತ್ತಾ ಇತ್ತು. ಇವತ್ತಿನ ದಿವಸ ಆವರೇಜ್ ಎರಡು ಪಲ್ಲ ಬೆಳೆಯುವುದಿಲ್ಲ. ಅವನ ಹೃದಯ ಹೊಕ್ಕು ನೋಡಬೇಕು! ಅವನು ಬೆಳೆದ ಬೆಳೆಗೆ ಏನು ರೇಟ್ ಸಿಕ್ಕುತ್ತದೆ? ಹಾಗೆ ಸಿಕ್ಕ ಹಣದಿಂದ, ಅವನು ಬಟ್ಟೆ, ಕಬ್ಬಿಣ, ಸ್ಟೇಶನರಿ ಮತ್ತಿತರ ಸಾಮಾನುಗಳನ್ನು ಕೊಂಡುಕೊಳ್ಳಬೇಕು. ರೈತನು ಸಂಪಾದಿಸುವ ಹಣ ಅವನ ಅವಶ್ಯಕತೆಗಳಿಗೆ ಕಾಲುಭಾಗ ಸಾಕಾಗುವುದಿಲ್ಲ; 75 ಭಾಗ ಸಾಲ ಮಾಡಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಅವನು ಮಾರುವ ಆಹಾರ ಪದಾರ್ಥಗಳ ಧಾರಣೆ ಜಾಸ್ತಿಯಾಗಬೇಕು, ಧಾರಣೆ ಜಾಸ್ತಿಯಾಗದಿದ್ದ ಪಕ್ಷದಲ್ಲಿ ನೀವು ಹೆಚ್ಚು ಆಹಾರ ಬೆಳೆಯುವುದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಇನ್ನು ಅವನ ಸಾಲದ ಅಂಕಿ ಅಂಶಗಳನ್ನು ನೋಡಿ. ಪ್ರತಿವರ್ಷ ರೈತನ ಸಾಲ, ವ್ಯವಸಾಯಕ್ಕಾಗಿ ಮಾಡುವ ಸಾಲ, ಎಷ್ಟಿದೆ ಎಂಬುದನ್ನು ಸರ್ವೆಮಾಡಿಲ್ಲ. ಅವನಿಗೆ ಬರುವ ಆದಾಯಕ್ಕಿಂತ ಪ್ರತಿವರ್ಷ ಶೇಕಡ 25 ರಿಂದ 50 ರವರೆಗೆ ಹೆಚ್ಚಿಗೆ ಸಾಲಮಾಡಿ ಜೀವನ ಸಾಗಿಸುತ್ತಾನೆ. ರೈತನ ಸ್ಥಿತಿ ಈ ರೀತಿ ಆಗುತ್ತಾ ಹೋದರೆ, ಆಹಾರ ಪರಿಸ್ಥಿತಿ ಇನ್ನೂ ನಾಲ್ಕರಷ್ಟು ಉಲ್ಬಣವಾಗುತ್ತದೆ. ಆಹಾರದ ವಿಷಯದಲ್ಲಿ ಯೋಜನೆಗಳನ್ನು ತಯೂರು ಮಾಡುವಾಗ ನಮ್ಮ ಮಂತ್ರಿಗಳು ಇಂಡಿಯಾ ಸರ್ಕಾರವನ್ನು ಹೆದರಿಸತಕ್ಕಂಥ ಶಕ್ತಿ ಇಟ್ಟುಕೊಳ್ಳಬೇಕು. ಈ ಶಕ್ತಿ ನಮ್ಮ ಸರ್ಕಾರಕ್ಕೆ ಈದಿವಸ ಇದೆಯೇ? ಇಂಡಿಯಾ ಸರ್ಕಾರದವರು ಹೇಳಿದಹಾಗೆ ನಮ್ಮ ಮಂತ್ರಿಮಂಡಲ ತಲೆ ಬಗ್ಗಿಸಿಕೊಂಡು ಕೇಳಿಕೊಂಡು ಇದ್ದರೆ, ನಮ್ಮ ಪರಿಸ್ಥಿತಿ ಉತ್ತಮವಾಗುವುದಿಲ್ಲ. ಮೈಸೂರು ಸರ್ಕಾರಕ್ಕೆ ಎಷ್ಟು ಆಹಾರಧಾನ್ಯ ಬೇಕು ಎನ್ನುವುದನ್ನು ಇಂಡಿಯಾ ಸರ್ಕಾರಕ್ಕೆ ಧೈರ್ಯವಾಗಿ ಹೇಳಿ, ಹೆಚ್ಚಿಗೆ ಆಹಾರ ಶೇಖರಿಸಿ. ನೆಹ್ರು ಅವರು ಬ್ರಹ್ಮನೇನೂ ಅಲ್ಲ, ಇಂಡಿಯ ಸರ್ಕಾರದ ಆಹಾರದ ಮತ್ತಿತರ ಮಂತ್ರಿಗಳು ವಿಷ್ಣುಗಳಲ್ಲ. ನಿಮ್ಮ ಹಾಗೆಯೇ ಅವರೂ ಮಂತ್ರಿಗಳು. ನಮ್ಮ ಅವಶ್ಯಕತೆಗಳನ್ನು ಅವರ ಮುಂದೆ ನಿರ್ದಾಕ್ಷಿಣ್ಯವಾಗಿಟ್ಟು, ಆಹಾರ ಧಾನ್ಯವನ್ನು ಸಂಗ್ರಹಿಸಿ. ನಾವು ಹೇಳುವುದನ್ನು ಲಘುವಾಗಿ ತೆಗೆದುಕೊಳ್ಳಬೇಡಿ, ನಮ್ಮಲ್ಲಿ ಉದ್ಭವಿಸಿರುವ ಸ್ಥಿತಿಯನ್ನು ಸರಿದೂಗಿಸುವುದಕ್ಕಾಗಿಲ್ಲವೆಂದು ಇಂಡಿಯಾ ಸರ್ಕಾರದವರಿಗೆ ಹೇಳಿ. ನಾವು, ಸ್ಟೇಟ್‌ನವರು, ಅವರಿಗೆ ಟ್ಯಾಕ್ಸ್ ರೂಪದಲ್ಲಿ ಎಷ್ಟು ಹಣ ಕೊಡುತ್ತಿದ್ದೇವೋ ಅದನ್ನೆಲ್ಲಾ ಅವರಿಗೆ ಹೇಳಿ. ಬಡಬೋರೆಗೌಡ ಹಾಳಾಗಿ ಹೋಗುತ್ತಿದ್ದಾನೆ ಎಂದು ಹೇಳಿ. ನಮ್ಮ ಸರ್ಕಾರಕ್ಕೆ ಇಂಡಿಯಾ ಸರ್ಕಾರವನ್ನು ಪ್ರತಿಭಟಿಸುವ ಶಕ್ತಿ ಬರಬೇಕು. ನೀವು ಅವರಿಗೆ ನಮ್ಮ ಅವಶ್ಯಕತೆಗಳನ್ನು ಮೋಟಕು ಮಾಡಬೇಡಿ ಎಂದು ಹೆದರಿಕೆ ಇಲ್ಲದೆ ಹೇಳಿ, ಅವರು ಐದು ಲಕ್ಷ ಟನ್ ಆಹಾರ ಕೊಡಲಿ. ಹಾಗೆ ಹೆಚ್ಚು ಆಹಾರ ನಮ್ಮ ಸ್ಟೇಟಿನಲ್ಲಿ ಬರುವಂತೆ ಮಾಡುವ ಶಕ್ತಿ ನಮ್ಮ ಸರ್ಕಾರಕ್ಕೆ ಬರಬೇಕು. ನಾನು ಮಾನ್ಯ ಮರಾಮತ್ ಇಲಾಖೆ ಮಂತ್ರಿಗಳನ್ನು 'ಪಿ.ಡಬ್ಲ್ಯು.ಡಿ. ಇಲಾಖೆ ಚೀಫ್ ಇಂಜಿನಿಯರ್ ಅವರು ಹಣವಿಲ್ಲದಿರುವುದರಿಂದ ಜೀರ್ಣೋದ್ಧಾರ ಕೆಲಸಗಳನ್ನು ಮುಂದುವರಿಸದೆ ನಿಲ್ಲಿಸಬೇಕು ಎಂದು ಒಂದು ಜನರಲ್ ಸರ್‌ಕ್ಯುಲರ್ ಹೊರಡಿಸಿದ್ದಾರೆಯೇ' ಎಂದು ಕೇಳಿದಾಗ, ನೇರವಾದ ಉತ್ತರವನ್ನು ಕೊಡಲಿಲ್ಲ. ನಮ್ಮ ಹಾಸನ ಡಿಸ್ಟ್ರಿಕ್ಟಿನಲ್ಲಿ ಸುಮಾರು ಹತ್ತು ಲಕ್ಷರೂಪಾಯಿ ಕೆಲಸಮಾಡುತ್ತಾ ಇರತಕ್ಕಂಥದ್ದು, ಅರ್ಧಂಭರ್ಧ ಮಾಡಿ ನಿಲ್ಲಿಸಿದ್ದಾರೆ. ಚೀಫ್ ಇಂಜಿನಿಯರ್ ಹೇಳುವ ವಾದಕ್ಕೆ ಮಂತ್ರಿಮಂಡಲ ತಲೆ ಬಾಗುವುದಾದರೆ, ರೈತರಿಗೆ ಹೇಗೆ ಬೆನಿಫಿಟ್ ಆಗುತ್ತದೆ? ಫ್ಯಾಮಿನ್ ವಿಷಯದಲ್ಲಿ ಏನು ರಿಲೀಫ್ ಕೊಟ್ಟ ಹಾಗಾಗುತ್ತದೆ? ಇವತ್ತಿನ ದಿವಸ, ಕಾಮಗಾರಿಗಳು ನಡೆಯುವುದನ್ನು ನೋಡಿದರೆ, ಜನಗಳಿಗೆ ಏನು ತೊಂದರೆ ಇದೆ ಎಂದು ನಿಜವಾಗಿಯೂ ಗೊತ್ತಾಗುತ್ತದೆ—ಕಾಮಗಾರಿಗಳು ತಾಟಸ್ಥ್ಯ ನೀತಿಯಿಂದ, ಅಂದರೆ, ಗೋ-ಸ್ಲೋ ಟ್ಯಾಕ್‌ಟಿಕ್ಸ್‌ನಿಂದ ನಡೆಯುತ್ತಿವೆ. ಬಡ್ಜೆಟ್ ಇಡುವಾಗ ಒಂದು ಹೇಳುತ್ತೀರಿ, ಆಮೇಲೆ ಏನೇನೋ ಸೀಕ್ರೆಟ್ ಸರ್ಕ್ಯುಲರ್ ಕಳುಹಿಸುತ್ತೀರಿ; ಯಾರಿಗೂ ಇದು ಕಾಣುತ್ತಾ ಇಲ್ಲ ಎಂದುಕೊಂಡಿದ್ದೀರೇನೋ? ಈ ಪಾಲಿಸಿ ಬೇಕಾಗಿಲ್ಲ. ಇನ್ನು ನಾಲ್ಕು ತಿಂಗಳು ಹೋದರೆ ಹೊಸ ಬಡ್ಜೆಟ್ ಬರುತ್ತದೆ. ಈ ಬಡ್ಜೆಟ್ಟನ್ನು ಸರಿದೂಗಿಸುವುದಕ್ಕೆ ಏನೇನೋ ಅಡ್‌ಜಸ್ಟ್‌ಮೆಂಟ್ ಮಾಡಿಕೊಳ್ಳುತ್ತೀರಿ, ಬಡ್ಜೆಟ್ಟನ್ನು ನ್ಯಾಯವಾಗಿ ತೋರಿಸಿ. ಬಡ್ಜೆಟ್‌ನಲ್ಲಿ ಕಾಮಗಾರಿಗಳಿಗೆ ಹಣವನ್ನು ಪ್ರೊವೈಡ್‌ಮಾಡಿದ ತಕ್ಷಣ ಫೈನಾನ್ಸ್ ಮಿನಿಸ್ಟರು ಅಕೌಂಟ್‌ಂಟ್ ಜನರಲ್‌ಗೆ ತಕ್ಷಣ ಹಣ ಪಾವತಿ ಮಾಡುವ ಸ್ಲಿಪ್ಪನ್ನು ಇಷ್ಯೂ ಮಾಡಬೇಕೆಂದು ಸೂಚನೆ ಕೊಟ್ಟು, ಕೆಲಸ ನಡೆಯುವ ಹಾಗೆ ಮಾಡುವ ಶಕ್ತಿ ಇಲ್ಲವೇ? ಕಾಮಗಾರಿಗಳಿಗಾಗಿ ಬಡ್ಜೆಟ್‌ನಲ್ಲಿ ಪಾಸ್ ಮಾಡಿದ ಹಣ ಲ್ಯಾಪ್ಸ್ ಆಗುತ್ತಾ ಇರುವುದನ್ನು ನೋಡಿದರೆ, ನಮ್ಮ ಜನಗಳ ಮುಂದೆ ನಮಗೆ ನಾಚಿಕೆಯುಂಟಾಗುತ್ತದೆ. ಈ ಕಾಮಗಾರಿಗಳನ್ನು

ಮಾಡಿಸುವುದಕ್ಕೆ ನಮ್ಮಲ್ಲಿಯೇ ಶಕ್ತಿ ಇಲ್ಲವೋ; ಅಥವಾ ಸರ್ಕಾರದಲ್ಲಿ ಶಕ್ತಿ ಇಲ್ಲವೋ ಗೊತ್ತಾಗುವುದಿಲ್ಲ. ಅಧಿಕಾರಿಗಳು ಈ ಬಡ್ಜೆಟನ್ನು ಯಾವರೀತಿ ಪರಿಗಣಿಸಿದ್ದಾರೆ ಎನ್ನುವುದನ್ನು ಯೋಚನೆ ಮಾಡಬೇಕು. ಮಳೆ ಹುಯ್ಯದೆ ತುಂಬ ಕಳವಳಕ್ಕೆ ಕಾರಣವಾಗಿದೆಯೆಂದು ನಾವು ತಿಳಿದುಕೊಳ್ಳಬೇಕು. ಇದು ಹತ್ತನೆ ತಿಂಗಳು. ಜೋಳ, ರಾಗಿಕಾಳು ಆಗತಕ್ಕಂಥ ಕಾಲ ಮುಗಿದಿದೆ. ನಮಗೆ ಇನ್ನು ಭತ್ತ ಬರತಕ್ಕಂಥದ್ದು ಜೂನ್ ತಿಂಗಳಿಗೆ. ಇನ್ನು ಮೇಲೆ 100 ಇಂಚ್ ಮಳೆಯಾದರೂ, ಖಂಡಿತವಾಗಿ ಜೋಳ, ರಾಗಿ, ರೈತರಿಗೆ ಸೇರುವುದಿಲ್ಲ. ಆದ್ದರಿಂದ ಸರ್ಕಾರ ಆಹಾರ ಪರಿಸ್ಥಿತಿ ವಿಚಾರವಾಗಿ ಮುಂಜಾಗ್ರತೆಯಿಂದ ಯೋಚನೆಮಾಡಬೇಕು. ಉತ್ತಮ ಆಹಾರ ಬೆಳೆಯಾದಾಗ, ಅದು ಹೊರಗಡೆ ಹೋಗದಂತೆ, ಬಂದೋಬಸ್ತು ಮಾಡಬೇಕು. ಇದಕ್ಕೋಸ್ಕರ ಒಂದು ಆಕ್ಟನ್ನು ತಯಾರುಮಾಡಬೇಕು. ಹೊರಗಡೆ ಹೋಗತಕ್ಕಂಥ ಆಹಾರಧಾನ್ಯವನ್ನು ತಡೆಗಟ್ಟುವುದಕ್ಕೆ ಒಂದು ನಿಂಬಂಧನೆ (Act) ಪಾಸ್‌ಮಾಡಿ, ಹೊರಗಡೆಗೆ ಆಹಾರವನ್ನು ಸಾಗಿಸುವವರನ್ನು ಶಿಕ್ಷೆಗೆ ಗುರಿಮಾಡಿ. ನಮ್ಮ ದಾಸ್ತಾನು ನಮ್ಮಲ್ಲಿಯೇ ಇರಲಿ. ದೊಡ್ಡ ರೈತರು ಹೊರಗಡೆ ಆಹಾರಧಾನ್ಯವನ್ನು ಕಳುಹಿಸುವುದು ಉಳಿದು, ನಿಮಗೆ ಆಹಾರ ದವಸ ಇಲ್ಲಿಯೇ ಸಿಕ್ಕುತ್ತದೆ. ಹೊರಗಿನವರೆಗೆ ಸೆಲ್ಯೂಟ್ ಹೊಡೆಯುವ ಪರಿಸ್ಥಿತಿ ಒದಗಬಾರದು. ಆಹಾರಧಾನ್ಯವನ್ನು ಪರ್‌ಚೇಸ್ ಮಾಡಿಕೊಂಡು, ಫುಡ್ ಕಂಟ್ರೋಲ್‌ಮಾಡಿ, ಫ್ಯಾಮಿನ್ ವಿಷಯದಲ್ಲಿ ಕೂಡಲೆ ರಿಲೀಫ್ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಫ್ಯಾಮಿನ್ ರಿಲೀಫ್‌ಗೆ ಸುಮಾರು ಎರಡು ಕೋಟಿ ರೂಪಾಯಿಗಳನ್ನು ತಕ್ಷಣ ಸ್ಯಾಂಕ್ಷನ್ ಮಾಡಬೇಕು. ನಮ್ಮ ಮಂತ್ರಿಮಂಡಲ ಈ ವಿಚಾರದಲ್ಲಿ ಒಂದು ಜಾಯಿಂಟ್ ಸ್ಟೇಟ್‌ಮೆಂಟ್ ಕೊಡಬೇಕು. ನೀವು ಹೀಗೆ ಬಹಳ ಲಘುವಾಗಿ ಈ ಪ್ರಶ್ನೆಯನ್ನು ನೋಡುವುದಾದರೆ, ಮೈಸೂರು ಸ್ಟೇಟ್‌ನಲ್ಲಿ ತಿರುಗಾಡಿ, ರೈತರಿಗೆ ಮುಂದಿನ ಸಾರಿ ಯಾವ ತರಹ ಟ್ಯಾಕ್ಸನ್ನೂ ಕೊಡಬೇಡಿ ಎಂದು ಗುರ್ತಾಗಿ ಹೇಳಬೇಕಾಗುತ್ತದೆ.

*ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿವಸಗಳಿಂದಲೂ, ಸಂಸ್ಥಾನದ ಆಹಾರ ಅಭಾವ ಪರಿಸ್ಥಿತಿ ವಿಷಯದಲ್ಲಿ ಬಹಳ ಮಟ್ಟಿಗೆ ವಿಪುಲವಾದ ಚರ್ಚೆ ನಡೆದಿದೆ. ಈ ಚರ್ಚೆಗೆ ಅವಕಾಶವನ್ನು ಕೊಟ್ಟಿದಕ್ಕಾಗಿ ಮೊಟ್ಟಮೊದಲು ಈ ಸರ್ಕಾರಕ್ಕೆ ಮತ್ತು ಬಿಸಿನೆಸ್ ಅಡ್ವೈಸರಿ ಕಮಿಟಿಯವರಿಗೆ ನಾನು ತುಂಬ ಋಣಿಯಾಗಿದ್ದೇನೆ. ಈ ಆಹಾರ ಆಭಾವ ಪರಿಸ್ಥಿತಿ ನಮ್ಮ ಸಂಸ್ಥಾನದಲ್ಲಿಯೇ ಅಲ್ಲದೆ ಇಂಡಿಯಾ ದೇಶದಲ್ಲಿ ಸುಮಾರು 1942ನೆಯ ಇಸವಿಯಿಂದಲೂ ಕೂಡ ಇರುವುದನ್ನು ನಾವು ನೋಡಿದ್ದೇವೆ. ಇಂಡಿಯಾ ದೇಶ ಮೊದಲಿನಿಂದಲೂ ವ್ಯವಸಾಯ ದೇಶ. ನಾವು ಆಹಾರವನ್ನು ಬೆಳೆಯುವುದರಲ್ಲಿ ಹೆಚ್ಚಿಗೆ ಪ್ರಯತ್ನಗಳನ್ನು ಪಟ್ಟಾಗ್ಯೂ ಕೂಡ ನಿರೀಕ್ಷಿಸಿದ ಮಟ್ಟದಲ್ಲಿ ಹೆಚ್ಚಿನ ಆಹಾರೋತ್ಪತ್ತಿಯಾಗಲಿಲ್ಲವೆಂದು ನಮ್ಮೆಲ್ಲರಿಗೂ ಭಾಸವಾಗಿದೆ. ಹೆಚ್ಚಿಗೆ ಆಹಾರವನ್ನು ಬೆಳೆಯಲು ಏನು ಯೋಜನೆಯನ್ನಿಟ್ಟುಕೊಂಡಿದ್ದೇವೋ, ಆ ಯೋಜನೆಯಿಂದ ಆಹಾರವನ್ನು ಹೆಚ್ಚಿಗೆ ಬೆಳೆಯಲಿಲ್ಲವೆನ್ನುವುದದ್ದು ನಾನು ಹೇಳುವುದಿಲ್ಲ. ಆಹಾರಕ್ಕಾಗಿ ನಾವು ಮಾಡಿದ ಖರ್ಚಿಗೆ ಸರಿಯಾಗಿ ಉತ್ಪತ್ತಿಯಾಗಲಿಲ್ಲವೆಂದು ಮಾತ್ರ ಹೇಳುತ್ತೇನೆ. ಇದಕ್ಕೆ ಒಂದು ನಿದರ್ಶನವನ್ನು ಕೊಡುತ್ತೇನೆ. ಇಂಡಿಯಾ ದೇಶದಲ್ಲಿ ಮತ್ತು ಮೈಸೂರು ಸಂಸ್ಥಾನದಲ್ಲಿ ಆಹಾರವನ್ನು ಬೆಳೆಯುವುದಕ್ಕೋಸ್ಕರ ಎಕ್ಸ್‌ಟೆನ್ಸಿವ್ ಕಲ್ಟಿವೇಷನ್ ಎಂದು ಏನು ಇಟ್ಟುಕೊಂಡಿದ್ದಾರೋ ಅದರ ಪರಿಣಾಮವಾಗಿ ನಾವು ಏನೊಂದು ಲಾಭವನ್ನೂ ಪಡೆಯಲಿಲ್ಲ. ದೊಡ್ಡ ದೊಡ್ಡ ಜಮೀನ್‌ದಾರರು ಪಾಳು ಬಿಟ್ಟಿರುವ ಜಮೀನುಗಳನ್ನು ಸಾಗುವಳಿ ಮಾಡುವ ಕ್ರಮವನ್ನು ಸರ್ಕಾರ ಕೈಗೊಳ್ಳಲಿಲ್ಲವೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಲ್ಯಾಂಡ್ ರಿಫಾರಮ್ಸ್ ಆದಷ್ಟು ಜಾಗ್ರತೆ ನಡೆಯಬೇಕು. ಬೆಳೆಯುವುದನ್ನು ಹೆಚ್ಚಿಗೆ ಕಲಿತುಕೊಳ್ಳಬೇಕೆಂಬ ಮನುಷ್ಯನಿಗೆ ಭೂಮಿ ತನ್ನ ಸ್ವಾಧೀನದಲ್ಲಿಯೇ ಇರುವಹಾಗೆ ಮಾಡಿ ಅವನಲ್ಲಿ ಹೆಚ್ಚಿಗೆ ಆಸಕ್ತಿ ಹುಟ್ಟಿಸಿದರೆ, ಅವನು ಹೆಚ್ಚಿಗೆ ಆಹಾರವನ್ನು ಬೆಳೆಯುತ್ತಾನೆ. ಸರ್ಕಾರದ ವಶದಲ್ಲಿರತಕ್ಕ ಸುಮಾರು 50 ಲಕ್ಷ ಎಕರೆ ಭೂಮಿಯನ್ನು ಸಾಗುವಳಿ ಮಾಡಲು ಸಾಕಷ್ಟು ಮಟ್ಟಿಗೆ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಲಿಲ್ಲ. ಕೂಡಲೆ ಆರೀತಿ ಮಾಡದೇ ಇದ್ದರೆ ನಮ್ಮ ಆಹಾರ ಪರಿಸ್ಥಿತಿ ಉತ್ತಮಗೊಳ್ಳುವುದಿಲ್ಲವೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಎರಡನೆಯದಾಗಿ ದೇಶದಲ್ಲಿ ಆಹಾರಪರಿಸ್ಥಿತಿ ಉತ್ತಮವಾಗಬೇಕಾಗಿದ್ದರೆ ಸಾಮಾನ್ಯ ರೈತವರ್ಗಕ್ಕೆ ಸಾಕಷ್ಟುಮಟ್ಟಿಗೆ ಅನುಕೂಲ ದೊರೆಯಬೇಕು. ದೊಡ್ಡ ದೊಡ್ಡ ಜಮೀನ್‌ದಾರರು ಬುಲ್‌ಡೋಜರ್ಸ್ ಮತ್ತು ಟ್ರಾಕ್ಟರುಗಳನ್ನು ತೆಗೆದುಕೊಳ್ಳುವ ಪ್ರಯತ್ನದಲ್ಲಿ ಮುಂದುವರಿದಿದ್ದಾರೆ. ಆರೀತಿ ಕೊಂಡುಕೊಳ್ಳುವಂತೆ ಮಾಡಿರುವ ಚಿಹ್ನೆ ಒಳ್ಳೆಯದೆಂದು ಕಾಣುತ್ತದೆ. ಅಂತೂ ಆಹಾರ ಪರಿಸ್ಥಿತಿ ಉತ್ತಮವಾಗಬೇಕಾದರೆ ದೇಶದಲ್ಲಿ ರೈತನಿಗೆ ಸಾಕಾದಷ್ಟು ಸೌಲಭ್ಯವನ್ನು ಒದಗಿಸಿಕೊಡಬೇಕು; ಮತ್ತು ಸಾಕಷ್ಟು ಜನಗಳಿಗೆ ಅತಿಜಾಗ್ರತೆ ಜಮೀನು ಸಿಕ್ಕುವ ಹಾಗೆ ಮಾಡಬೇಕು. ಆ ರೀತಿ ಆಹಾರ ಪರಿಸ್ಥಿತಿ ಉತ್ತಮಗೊಳ್ಳಬೇಕಾದರೆ ಸಕಾಲದಲ್ಲಿ ಮಳೆಯಾಗಬೇಕು. ಮಳೆ ಬಂದನಂತರ ಹೊಳೆಯಲ್ಲಿ ಹರಿಯುವ ನೀರನ್ನು ಸರಿಯಾಗಿ ಉಪಯೋಗಿಸಬೇಕು. ಇಲ್ಲದಿದ್ದರೆ ತಾತ್ಕಾಲಿಕವಾಗಿ ಆಹಾರ ಅಭಾವ ಪರಿಸ್ಥಿತಿಯುಂಟಾಗತ್ತದೆ. ಸಾಮಾನ್ಯವಾಗಿ ಕೆಲವುಕಡೆ ಮಳೆಯಿಲ್ಲದೆಯೇ ಅಭಾವವುಂಟಾಗುತ್ತದೆ. ರೈತವರ್ಗದವರು ಯಾವ ಕಾಲದಲ್ಲಿ ಹೊಲವನ್ನು ಉಳಬೇಕೋ ಆಗ ಸಾಕಾದಷ್ಟು ಮಳೆಯಾಗದೆ ತೊಂದರೆಯಾಗಿದೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಕಳೆದ ಹತ್ತಾರು ವರ್ಷಗಳಿಂದ ಕೆಲವು ಜಿಲ್ಲೆಗಳಲ್ಲಿ ಪ್ರತಿವರ್ಷವೂ ಮಳೆ ಇಲ್ಲದೆ ತುಂಬ ಆಹಾರ ಅಭಾವ ಪರಿಸ್ಥಿತಿ ಉಂಟಾಗಿದೆ. ಕೋಲಾರ, ತುಮಕೂರು, ಬೆಂಗಳೂರು ಮತ್ತು ಮೈಸೂರು ಇವು ಹೆಚ್ಚಿಗೆ ಆಹಾರ ಅಭಾವದ ಪ್ರದೇಶಗಳು. ಮಂಡ್ಯ, ಶಿವಮೊಗ್ಗಾದಲ್ಲಿ ಹೆಚ್ಚಿಗೆ ಬೆಳೆಯಾಗಿದೆ. ಈವರ್ಷ ಮಲೆನಾಡು ಜಿಲ್ಲೆಯಲ್ಲಿ ಸಕಾಲದಲ್ಲಿ ಮಳೆಯಾಗಿಲ್ಲ. ಮೈದಾನ ಪ್ರದೇಶಗಳಾದ ಮೈಸೂರು, ತುಮಕೂರು, ಬೆಂಗಳೂರು ಮತ್ತು ಕೋಲಾರಗಳಲ್ಲಿ ಹೆಚ್ಚು ಆಹಾರ ಅಭಾವ ಪರಿಸ್ಥಿತಿ ತಲೆದೋರಿದೆ. ಆಹಾರ ಅಭಾವ ಪರಿಸ್ಥಿತಿ ಸಾಮಾನ್ಯವಾಗಿ ಮಳೆ ಬಾರದೇ ಇದ್ದರೆ ಉಂಟಾಗುತ್ತದೆ. ಅಂತಹ ಸಂದರ್ಭದಲ್ಲಿ ಸರ್ಕಾರ ಏನು ಮಾಡುವುದಕ್ಕೆ ಸಾಧ್ಯವೆಂದು ಉತ್ತರ ಹೇಳುವುದಕ್ಕೆ ಪ್ರಯತ್ನಪಡಬಹುದು. ಯಾವ ಸರ್ಕಾರವೇ ಆಗಿರಲಿ ಪಕ್ಷ ಪ್ರತಿಪಕ್ಷದ ಗೊಂದಲಕ್ಕೆ ಹೋಗದೆ, ದೇಶದಲ್ಲಿರುವ ಕಷ್ಟ ಪರಿಸ್ಥಿತಿಯನ್ನು ಎದುರಿಸಬೇಕು. ಸರ್ಕಾರದಲ್ಲಿ ಯಾರಾರು ಇದ್ದಾರೆಂಬುದನ್ನು ಜನ ನೋಡುತ್ತಾ ಇಲ್ಲ. ಈ ಕಷ್ಟ ಪರಿಸ್ಥಿತಿಯನ್ನು

(ಶ್ರೀ ಬಿ. ರಾಚಯ್ಯ)

ಸರ್ಕಾರ ತನ್ನ ಕೈಲಾದಮಟ್ಟಿಗೆ ಎದುರಿಸಿದೆಯೇ ಎನ್ನುವುದನ್ನು ಜನ ನೋಡುತ್ತಾರೆ. 1952-53ನೆಯ ಸಾಲಿನಲ್ಲಿ ಮೈಸೂರು, ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಆಹಾರದ ಅಭಾವ ಪರಿಸ್ಥಿತಿ ಉಂಟಾಗಿದ್ದಾಗ, ಆಗ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಕೆ. ಹನುಮಂತಯ್ಯನವರು ತಕ್ಷಣವೇ ಹತ್ತು ಲಕ್ಷ ರೂಪಾಯಿಗಳನ್ನು ಮೈಸೂರು ಜಿಲ್ಲೆಗೆ ಕ್ಷಾಮ ಪರಿಹಾರದ ನಿಮಿತ್ತವಾಗಿ ಕೊಟ್ಟು ಬಹು ಬೇಗ ಅಲ್ಲಿನ ಜನಗಳ ಕಷ್ಟವನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನಪಟ್ಟರು. ನಾಲ್ಕು ಜಿಲ್ಲೆಗಳಲ್ಲಿ ಇಷ್ಟು ಉಲ್ಬಣಸ್ಥಿತಿ ಬಂದರೂ ಒಂದೇ ಸಮನೆ ಕಳೆದ ಮೂರು ವರ್ಷಗಳಿಂದ ಮಳೆ ಇಲ್ಲದೆ ರಾಗಿ, ಜೋಳದ ಬೆಳೆ ಒಣಗಿಹೋದರೂ ಈ ನಾಲ್ಕು ಜಿಲ್ಲೆಗಳಿಗೂ ಒಂದೊಂದು ಜಿಲ್ಲೆಗೆ ಎರಡೂವರೆ ಲಕ್ಷ ರೂಪಾಯಿಗಳನ್ನು ಕ್ಷಾಮ ಪರಿಹಾರಕ್ಕೋಸ್ಕರ ಒದಗಿಸಿ ಕೊಟ್ಟಿದ್ದಾರೆ. ಇನ್ನು ಹೆಚ್ಚಿನ ರೀತಿಯಲ್ಲಿ ಪರಿಹಾರಕೊಡಲು ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. 60 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಈ ಸಂಸ್ಥಾನದ ಸರ್ಕಾರಕ್ಕೆ ನಾಲ್ಕೈದು ಜಿಲ್ಲೆಗಳಲ್ಲಿ ಉಂಟಾಗತಕ್ಕ ತಾತ್ಕಾಲಿಕ ಆಹಾರ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸುವ ಸಾಮರ್ಥ್ಯ ಇನ್ನೂ ಏಕೆ ಬರಲಿಲ್ಲವೋ ಎಂದು ನನಗೆ ಖೇದವಾಗುತ್ತದೆ. ಕೊನೆಯ ಪಕ್ಷಅಭಾವ ಇರುವ ಪ್ರದೇಶಗಳಲ್ಲಿ ಉಂಟಾಗಿರತಕ್ಕ ನಿರುದ್ಯೋಗ ಸಮಸ್ಯೆಯನ್ನು ಎದುರಿಸಿ ಕೂಲಿ ಸಿಕ್ಕದೆ ಇರುವ ಕೂಲಿಗಾರರಿಗೆ ಕೂಲಿಯನ್ನು ಕಲ್ಪಿಸಿಕೊಟ್ಟು ಅವರಿಗೆ ಬೇಕಾದ ಆಹಾರ ಮತ್ತು ದನಕರುಗಳಿಗೆ ಬೇಕಾದ ಹುಲ್ಲನ್ನು ಹೊರಗಿನಿಂದ ತರಿಸಿ ಅನುಕೂಲ ಮಾಡಿಕೊಡಬೇಕು. ನಮ್ಮ ಸಂಸ್ಥಾನದಲ್ಲಿ ಆಹಾರ ಸಾಕಷ್ಟಿಲ್ಲ. ಕೆಲವರು ದೇಶ ಪ್ರೇಮದ ದೃಷ್ಟಿಯಿಂದ ತಮ್ಮಲ್ಲಿ ಪಡೆದಿರತಕ್ಕ ಆಹಾರ ಪದಾರ್ಥಗಳನ್ನು ಈಗಲಾದರೂ ಹೊರಗಡೆ ಇಟ್ಟರೆ ತಾತ್ಕಾಲಿಕವಾಗಿ ಉಂಟಾಗಿರತಕ್ಕ ಪರಿಸ್ಥಿತಿ ಸ್ವಲ್ಪಮಟ್ಟಿಗೆ ನಿವಾರಣೆಯಾಗುತ್ತದೆ. ಜನರ ಹತ್ತಿರ ಬೇಕಾದಷ್ಟು ದವಸಧಾನ್ಯಗಳಿದ್ದರೂ ದುಡ್ಡನ್ನು ಸಂಪಾದನೆ ಮಾಡುವ ದೃಷ್ಟಿಯಿಂದ ಅವರು ಅದನ್ನು ಹೊರಗಡೆ ಬಿಡುತ್ತಾ ಇಲ್ಲ. ಆದ್ದರಿಂದ ಸರ್ಕಾರದವರು ಸಾಕಷ್ಟು ಮಟ್ಟಿಗೆ ಕ್ರಮ ತೆಗೆದುಕೊಂಡು ದವಸಧಾನ್ಯಗಳು ಹೊರಗೆ ಬರುವುದಕ್ಕೆ ಪ್ರಯತ್ನ ಮಾಡಬೇಕು. ಅಲ್ಲದೆ ಇಂಡಿಯಾ ಸರ್ಕಾರದವರು ಅಕ್ಕಿಯನ್ನು ಮತ್ತು ಗೋಧಿಯನ್ನು ಒದಗಿಸಿ ಕೊಡುವಾಗ ಎಲ್ಲಾ ಸಂಸ್ಥಾನಗಳ ಪರಿಸ್ಥಿತಿಯನ್ನೂ ಗಮನದಲ್ಲಿಟ್ಟುಕೊಂಡು ಸಪ್ಲೈಮಾಡಬೇಕಾಗಿದೆ. ನಾವು ಇಂಡಿಯಾ ಸರ್ಕಾರದ ಒಂದು ಯೂನಿಟ್ಟು ಆಗಿರುವುದರಿಂದ ಅದು ಬೇರೆ ಸರ್ಕಾರವೆಂದು ಭಾವಿಸದೆ ಅವರು ಏನು ಕೊಡುತ್ತಾರೋ ಅದನ್ನು ತೆಗೆದುಕೊಳ್ಳಬೇಕು. ಅವರು ಕೊಡುವ ಜೊತೆಗೆ ನಮ್ಮ ಸಂಸ್ಥಾನದಲ್ಲಿರತಕ್ಕ ಕೆಲವು ಆಹಾರ ಪದಾರ್ಥಗಳನ್ನು ಶೇಖರಿಸಿಡುವ ಹಾಗೆ ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲ ಸೂಚನೆ ಮಾಡುತ್ತೇನೆ. ಕಳೆದ ಸಾಲಿನಲ್ಲಿ ಅರ್ಧಂಬರ್ಧವಾಗಿ ನಿಂತಿರತಕ್ಕ ಕೆಲವು ರಿಲೀಫ್ ಕಾಮಗಾರಿಗಳನ್ನು ಮುಂದುವರಿಸುವುದಕ್ಕೆ ಮೈಸೂರು ಜಿಲ್ಲೆಯ ಡೆಪ್ಯುಟಿ ಕಮಿಷನರ್ ನಮ್ಮ ಸರ್ಕಾರಕ್ಕೆ ಒಂದು ಯೋಜನೆಯನ್ನು ಕಳುಹಿಸಿಕೊಟ್ಟಿದಾರೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಹಣವನ್ನು ಸಹ ತೆಗೆದಿಡಲಾಗಿದೆ. ಅಂದಾಜುಗಳೂ ಕೂಡ ಮಂಜೂರಾಗಿವೆ. ಆದಾಗ್ಯೂ ಅಲ್ಲಿ ಕೆಲಸಗಳನ್ನು ಇಲಾಖೆಯವರಿನ್ನೂ ಪ್ರಾರಂಭಿಸಿಲ್ಲ. ನಮ್ಮ ಜಿಲ್ಲೆಯಲ್ಲಿ ಕಳೆದೆರಡು ವರ್ಷಗಳಿಂದಲೂ ಮಳೆಯೇ ಬಂದಿಲ್ಲ. ಆದಕಾರಣ ಅಲ್ಲಿಯ ರೈತರಿಗೆ ಈ ಎರಡು ವರ್ಷಗಳ ಕಂದಾಯದಲ್ಲಿ ರೆಮಿಷನ್ ಕೊಡಬೇಕಾಗಿದೆ. ಈ ದಿವಸ ನಮ್ಮಲ್ಲಿರತಕ್ಕ ಜಮೀನ್ದಾರರೂ ಕೂಲಿ ಕೆಲಸಕ್ಕೆ ಎಂದೂ ಬರುವುದಿಲ್ಲ. ಅವರಿಗೆ ಸರ್ಕಾರದವರು ಸೂಕ್ತ ಪರಿಹಾರ ಮಾರ್ಗವನ್ನು ನೀಡಲೇಬೇಕು. ರೈತರಿಗೆ ತಕಾವಿ ಮತ್ತು ದನಕರುಗಳ ಮೇವಿಗಾಗಿ ಧನ ಸಹಾಯವನ್ನು ಅತಿಜಾಗ್ರತೆ ಮಂಜೂರುಮಾಡಬೇಕೆಂದು ಹೇಳುತ್ತೇನೆ. ಈವರೆಗೂ ನಮ್ಮ ಜಿಲ್ಲೆಯಲ್ಲಿ ಸುಮಾರು ಎರಡು ಲಕ್ಷ ಎಕರೆಗಳಲ್ಲಿ ರೇಷ್ಮೆ ವ್ಯವಸಾಯ ನಡೆಯುತ್ತಿತ್ತು. ಆದರೆ ಕಳೆದ ಮೂರು ವರ್ಷಗಳಿಂದಲೂ ಅಲ್ಲಿ ಮಳೆ ಬಾರದೆ ಪರಿಸ್ಥಿತಿ ಬಹಳ ಉಲ್ಬಣಸ್ಥಿತಿಗೇರಿದ್ದರಿಂದ ಈ ರೇಷ್ಮೆ ವ್ಯವಸಾಯ ಎಷ್ಟರ ಮಟ್ಟದಲ್ಲಿ ನಡೆಯಬೇಕಾಗಿತ್ತೋ ಅಷ್ಟರ ಮಟ್ಟದಲ್ಲಿ ನಡೆಯದೆ ಹೋದುದರಿಂದ ಅಲ್ಲಿ ಸುಮಾರು ಎರಡು ಲಕ್ಷ ಸಂಸಾರಗಳು, ಈ ವ್ಯವಸಾಯವನ್ನೇ ನಂಬಿಕೊಂಡಿದ್ದಂಥ,ಜನರು ಈ ದಿವಸ ಬಹಳ ದುಷ್ಕಾಲ ಪರಿಸ್ಥಿತಿಗೀಡಾಗಿದ್ದಾರೆ. ಆದರೆ ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ ಈ ರೇಷ್ಮೆ ವ್ಯವಸಾಯಗಾರರಿಗೆ—ಎಂದರೆ ಮಲ್ಬರಿ—ಹಿಪ್ಪ ನೇರಳೆ ಸೊಪ್ಪನ್ನು ಬೆಳೆಯತಕ್ಕ ರೈತರುಗಳಿಗೆ ಬಾವಿಗಳನ್ನು ತೆಗೆಸಲು ಮತ್ತು ಅದಕ್ಕೆ ಇರಿಗೇಷನ್ ಪಂಪ್ ಸೆಟ್ಟನ್ನು ಹಾಕಿಕೊಳ್ಳಲು ಹಣವನ್ನೊದಗಿಸಬೇಕೆಂದು ಸಲಹೆ ಮಾಡುತ್ತೇನೆ. ಕೇಂದ್ರದವರು ರೇಷ್ಮೆ ವ್ಯವಸಾಯದ ಬಗ್ಗೆ ಸಾಕಷ್ಟು ಹಣವನ್ನೊದಗಿಸಿದ್ದಾಗ್ಯೂ ನಮ್ಮ ಸರ್ಕಾರದವರು ಅದನ್ನು ಕಳೆದ ಎರಡು ವರ್ಷಗಳಿಂದಲೂ ಸದುಪಯೋಗಪಡಿಸಿಕೊಳ್ಳುತ್ತಿಲ್ಲ. ಸರ್ಕಾರದವರು ಈ ವಿಚಾರಕ್ಕೆ ಕೂಡಲೆ ಗಮನಕೊಡಬೇಕೆಂದು ಹೇಳುತ್ತೇನೆ. ಹೀಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳದಿದ್ದರೆ ಈ ವ್ಯವಸಾಯಗಾರರ ಸ್ಥಿತಿ ಮತ್ತಷ್ಟು ಬಿಗಡಾಯಿಸುವುದರಲ್ಲಿ ಸಂದೇಹವೇ ಇಲ್ಲ. ಆದರೆ ಸರ್ಕಾರದವರು ತಾತ್ಕಾಲಿಕವಾಗಿ ಅಷ್ಟಿಷ್ಟು ಪರಿಹಾರ ನೀಡಬಹುದು. ಆದರೆ ಅದರಿಂದ ಖಂಡಿತ ಪ್ರಯೋಜನವಿಲ್ಲ. ಈ ಸಂಬಂಧವಾಗಿ ಜನರನ್ನು ಕ್ಷಾಮದಿಂದ ಬಿಡುಗಡೆ ಮಾಡಬೇಕಾಗಿದ್ದರೆ ಖಾಯಂ ಆಗಿರುವಂಥ ನೀರಾವರಿ ಯೋಜನೆಗಳನ್ನು ಕೂಡಲೇ ಕೈಗೊಳ್ಳಬೇಕು. ಈಗಾಗಲೇ ಮಂಜೂರಾಗಿರತಕ್ಕಂಥ ಆ ಕೆಲಸಗಳನ್ನು ಕೂಡಲೇ ಕೈಗೊಳ್ಳಬೇಕು. ನಿನ್ನೆಮೊನ್ನೆ ತಾನೆ ಅಲ್ಲಲ್ಲೆ ಕೊಂಚ ಮಳೆ ಬಿದ್ದಿರಬಹುದು. ಆದರೆ ಅದರಿಂದ ವ್ಯವಸಾಯಗಾರರಿಗೇನೂ ಅನುಕೂಲವಿಲ್ಲ. ಈ ವಿಚಾರವನ್ನು ಬರಿ ಚರ್ಚೆಯಲ್ಲಿ ಮುಕ್ತಾಯಗೊಳಿಸದೆ ಈಗ ಎಷ್ಟು ಹಣವನ್ನು ಈ ಬಗ್ಗೆ ತೆಗೆದಿಡಲಾಗಿದೆಯೋ ಅದರ ಜೊತೆಗೆ ಸದ್ಯಕ್ಕೆ ಮತ್ತೆ 50 ಲಕ್ಷ ರೂಪಾಯಿಗಳನ್ನಾದರೂ ಕೊನೆಯಪಕ್ಷ ಮೀಸಲಾಗಿಡುತ್ತೇವೆಂದು ಹೇಳಿ ಸರ್ಕಾರದವರಿಂದ ಒಂದು ಭರವಸೆ ನಮಗೆ ಬೇಕಾಗಿದೆಯೆಂದು ತಿಳಿಸಿ ನಾನು ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇವೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ, ಈಗಾಗಲೇ ಸಭೆಯಲ್ಲಿ ಹೊರಪಟ್ಟಿರುವಂತೆ ನಾಲ್ಕಾರು ಜಿಲ್ಲೆಗಳಲ್ಲಿ ಈ ಕ್ಷಾಮ ಪರಿಸ್ಥಿತಿ ಬಹಳ ಭೀಕರವಾಗಿದೆ. ಆದಕಾರಣ ತಾವು ನಮಗೆ ಈ ವಿಚಾರದಲ್ಲಿ ಸೂಕ್ತ ಸಲಹೆಗಳನ್ನು ಸರ್ಕಾರಕ್ಕೆ ನೀಡಲ ಸಾಕಷ್ಟು ಅವಕಾಶ ಕೊಡಲೇಬೇಕು. ಹಾಗೆ ಸಾಕಷ್ಟು ಅವಕಾಶ ಕೊಡಲು ಸಾಧ್ಯವಿಲ್ಲದ ಪಕ್ಷಕ್ಕೆ

ಕನಿಷ್ಠ ಪಕ್ಷ ಪ್ರತಿಯೊಬ್ಬ ಸದಸ್ಯರಿಗೂ ಹತ್ತು ನಿಮಿಷಕ್ಕೆ ಕಡಮೆ ಇಲ್ಲದಂತೆ ಅವಕಾಶ ಕೊಡಬೇಕೆಂದು ಸೂಚಿಸುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—ಸ್ವಾಮಿ, ಶ್ರೀ ಪುಟ್ಟರಾಮಯ್ಯನವರು ಸೂಚಿಸಿದಂಥ ಸಲಹೆಯನ್ನು ನಾನೂ ಕೂಡ ಒಪ್ಪುತ್ತೇನೆ. ಬೇಕಾಗಿದ್ದರೆ ನಾವು ಇನ್ನೂ ಒಂದು ಘಂಟೆ ಕಾಲ ಹೆಚ್ಚಾಗಿ ಕುಳಿತುಕೊಳ್ಳೋಣ. ಆದರೆ ಕನಿಷ್ಠ ಪಕ್ಷ ಹತ್ತು ನಿಮಿಷಗಳಿಗೆ ಕಡಮೆ ಇಲ್ಲದಂತೆ ಈಗ ಮಾತನಾಡಲಿರುವ ಸದಸ್ಯರಿಗೆ ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದೆ ಬಂದಿರತಕ್ಕ ವಿಷಯದಲ್ಲಿ ಈವರೆಗಾಗಲೇ ಈ ಮಾನ್ಯ ಸಭೆಯಲ್ಲಿ ದೇಶದಲ್ಲಿರತಕ್ಕ ಕ್ಷಾಮ ಮತ್ತು ದೇಶದಲ್ಲಿ ಆಹಾರ ಧಾನ್ಯಗಳ ಬಗ್ಗೆ ಉಂಟಾಗಿರುವ ಕಳವಳ ಪರಿಸ್ಥಿತಿಯ ವಿಚಾರವಾಗಿ ಬಹಳ ಬಿಸಿಬಿಸಿಯಾದಂಥ ಚರ್ಚೆಗಳಾಗಿರುತ್ತವೆ. ಕಾರಣವೇನೆಂದರೆ ಇದು ಕೂಳಿನ ಸಮಸ್ಯೆಗೆ ಸಂಬಂಧಪಟ್ಟ ವಿಚಾರ. ಈ ಪ್ರಪಂಚ ಇಷ್ಟೊಂದು ಆಟವನ್ನೆಲ್ಲಾ ಏತಕ್ಕಾಗಿ ಆಡುತ್ತಿದೆ ಎಂದರೆ ಹಿಡಿ ಕೂಳಿಗಾಗಿ, ಗೇಣು ಬಟ್ಟೆಗಾಗಿ, ಅಂಗೈ ಅಗಲ ನೆರಳಿಗಾಗಿ ಆದುದರಿಂದಲೇ ಸರ್ವಜ್ಞ ಮೂರ್ತಿ ಏನು ಹೇಳಿದ್ದಾನೆಂದರೆ—

"ಕೂಳುಕುತ್ತವೆ ಕುತ್ತ । ಕೂಳು ಮೇಳವೆ ಮೇಳ।
ಕೂಳೊಂದುಗಳಿಗೆ ತಡೆದಿಹರೆ ಪಾತರದ ।
ಮೇಳಮುರಿದಂತೆ । ಸರ್ವಜ್ಞ ॥"

ಇದಾದನಂತರ ಮತ್ತೇನು ಹೇಳಿದ್ದಾನೆಂದರೆ—

"ಅನ್ನದೇವರ ಮುಂದೆ । ಇನ್ನು ದೇವರು ಉಂಟೇ ?
ಅನ್ನವಿರುವನಕ ಪ್ರಾಣವೀಜಗದೊಳಗೆ ।
ಅನ್ನವೇ ದೈವ ಸರ್ವಜ್ಞ ॥"

ಆದುದರಿಂದ ಈದಿವಸ ನಿಜವಾಗಿಯೂ ಈ "ಕೂಳು—ಕೂಳು" ಎನ್ನತಕ್ಕದ್ದು ನಮ್ಮೆಲ್ಲರನ್ನೂ ಆವರಿಸಿಕೊಂಡಿದೆ. ಪ್ರಕೃತಿಯ ವಿಕೋಪಕ್ಕೆ ಸಿಕ್ಕಿ ದೇಶದಲ್ಲಿರತಕ್ಕ ಜನ "ಅನ್ನಾ—ಅನ್ನಾ" ಎಂದು ಆಹಾರಕ್ಕಾಗಿ ಬೊಬ್ಬೆಯಿಡುತ್ತಿದೆ. ಈ ಹೊತ್ತು ದೇಶದಲ್ಲಿ ಇಂಥ ಒಂದು ಪರಿಸ್ಥಿತಿಯುಂಟಾಗುವುದಕ್ಕೆ ಯಾರು ಮೂಲ ಕಾರಣರು—ಈ ದಿವಸ ಆಡಳಿತ ನಡೆಸುತ್ತಿರುವ ಸರ್ಕಾರವೇ ಅಥವಾ ದೇಶದ ಆಡಳಿತ ಸೂತ್ರವನ್ನು ಕೈಲಿ ಹಿಡಿದಿರುವಂಥ ಮಂತ್ರಿಮಂಡಲವೇ ಅಥವಾ ಆಡಳಿತ ಪಕ್ಷದವರೇ—ಎಂಬುದನ್ನು ತೀವ್ರವಾಗಿ ಪರಿಶೀಲನೆಮಾಡಬೇಕೆಂಬುದಾಗಿ ನಾನೀಸಂದರ್ಭದಲ್ಲಿ ತಮ್ಮ ಮೂಲಕ ಈ ಮಾನ್ಯ ಸಭೆಯನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಸ್ವಾಮಿ, ಈ ಉಲ್ಬಣಸ್ಥಿತಿಯಲ್ಲಿರುವಂಥ ಆಹಾರ ಪರಿಸ್ಥಿತಿ ಮತ್ತು ಕ್ಷಾಮದ ವಾರ್ತೆಯನ್ನು ನಾವೇನು ಈ ದಿವಸ ಕೇಳುತ್ತಿದ್ದೇವೆಯೋ ಎಂದರೆ—ಇಲ್ಲ ಈ ಹಿಂದೆಯೂ ಕೇಳಿದ್ದೇವೆ. ಇಡೀ ಹಿಂದೂಸ್ಥಾನದಲ್ಲೇ ಅನೇಕಾವರ್ತಿ ಅನೇಕ ಭಾಗಗಳು ಘೋರಕ್ಷಾಮಕ್ಕೆ ಈಡಾಗಿದ್ದವು. ಹಾಗೆಯೇ ನಮ್ಮ ಮೈಸೂರು ಸಹ ಅನೇಕಾವರ್ತಿ ಕ್ಷಾಮಕ್ಕೆ ತುತ್ತಾಗಿತ್ತು. ಆದ್ದರಿಂದ ನಮಗೆ ಈ ಕ್ಷಾಮವೆಂಬುದು ಕೇವಲ ನಿನ್ನೆಮೊನ್ನೆಯ ವಿಚಾರವೇನೂ ಅಲ್ಲ. ಅನೇಕ ವರ್ಷಗಳಿಂದಲೂ ಈ ವಿಚಾರ ಅನೇಕ ಜನರನ್ನು ಬಾಧಿಸುತ್ತಲೇ ಬಂದಿದೆ. ಈ ಹಿಂದೆ ಜನತೆ ಈ ಕ್ಷಾಮ ಮಾರಿಯ ದವಡೆಯಿಂದ ತಪ್ಪಿಸಿಕೊಳ್ಳಲು ಎಷ್ಟೆಷ್ಟು ವ್ಯಥೆಪಡಬೇಕಾಯಿತೆಂಬ ಅಂಶ ಸರ್ವರಿಗೂ ತಿಳಿದಿರತಕ್ಕದ್ದೇ ಆಗಿದೆ. ಈಗ ದೇಶದ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ಈ ದೇಶದ ಸ್ವಾತಂತ್ರ್ಯಕ್ಕಾಗಿ ಹಿಂದೆ ಕೂಗಾಟ ಹೋರಾಟ ನಡೆಸುತ್ತಿದ್ದಾಗ ಈ ಜನರು ಹೇಳುತ್ತಿದ್ದಂಥ ಆ ದೇಶಪ್ರೇಮ ಆ ಒಗ್ಗಟ್ಟು ಈಗ ಎಲ್ಲ ಮಾಯವಾದವು ? ದೇಶವನ್ನು ರಾಮರಾಜ್ಯವನ್ನಾಗಿ ಮಾಡುತ್ತೇವೆ, ಸುಖೀ ರಾಜ್ಯವನ್ನಾಗಿ ಮಾಡುತ್ತೇವೆಂದು ಕೂಗುತ್ತಿದ್ದರಲ್ಲ ಆ ರಾಜ್ಯವೆಲ್ಲಿದೆ ಈಗ ? ಇವರು ಅದಿವಸ ಹಾಗೆಲ್ಲಾ ಹೇಳಿದ್ದಾಗ್ಯೂ ಈಹೊತ್ತು ದೇಶದಲ್ಲಿ ಇಂಥ ಒಂದು ತದ್ವಿರುದ್ಧ ಪರಿಸ್ಥಿತಿ ಇರಲು ಕಾರಣವೇನು ಎಂಬುದನ್ನು ನಾನೀಗ ಪರಿಶೀಲನೆ ಮಾಡಬೇಕಾಗಿದೆ. ಇಲ್ಲಿಗೆ ನಮಗೆ ಸ್ವರಾಜ್ಯ ಬಂದು ಹತ್ತು ವರ್ಷಗಳ ಮೇಲಾಯಿತು. 1945-46ರಿಂದೀಚೆಗೆ ಮೈಸೂರು ದೇಶದಲ್ಲಿ ಕುಡಿಯುವನೀರು, ಉಣ್ಣುವ ಅನ್ನ, ಉಡುವ ಬಟ್ಟೆ—ಇವುಗಳ ಬಗ್ಗೆ ಜನರು ಪಟ್ಟ ಅಗಚಾಟಲು ಎಷ್ಟೆಂಬುವನ್ನು ಹೇಳತೀರದಾಗಿದೆ. ಉಣ್ಣುವ ತುತ್ತುಗಳನ್ನೂ ತೂಕಮಾಡಿ ಕೊಟ್ಟರು; ಮೈಮುಚ್ಚಲು ಕೊಡುತ್ತಿದ್ದಂಥ ಮೊಳ ಬಟ್ಟೆಯನ್ನು ಗೇಣಿಗಿಳಿಸಿದರು. ಅಷ್ಟನ್ನೇ ಹರಿದು ಕೊಟ್ಟರು. ದೇಶದಲ್ಲಿ ಆಹಾರ ಪರಿಸ್ಥಿತಿ ಇಷ್ಟೊಂದು ಕೆದಗೆಟ್ಟ ಮೇಲಾದರೂ ಈ ಕ್ಷಾಮನಿವಾರಣೆ ಬಗ್ಗೆ ಸರ್ಕಾರದವರು ಏನಾದರೂ ಒಂದು ಶಾಶ್ವತವಾದಂಥ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆಯೇ ಎಂದರೆ ಆ ಕೇಂದ್ರ ಸರ್ಕಾರದವರೂ ಕೈಗೊಂಡಿಲ್ಲ; ಈ ರಾಜ್ಯ ಸರ್ಕಾರದವರೂ ಕೈಗೊಂಡಿಲ್ಲ. ಸರ್ಕಾರದವರು ಇಂಥ ಒಂದು ಪ್ರಾಮುಖ್ಯವಾದ ವಿಚಾರದಲ್ಲಿ ಏಕಿಷ್ಟು ಅಶ್ರದ್ಧೆಯ ಮನೋಭಾವ ತಾಳಿದ್ದಾರೆಂಬುದನ್ನು ನೋಡಿದರೆ ನನಗೆ ತುಂಬ ಸಂಕಟವಾಗುತ್ತಿದೆ. ಹಿಂದೆ ಇರುವ ಬೇಜವಾಬ್ದಾರಿ ಸರ್ಕಾರ ಎಂದು ಯಾವುದನ್ನು ಕರೆಯುತ್ತಿದ್ದರೋ ಅಂಥ ಕಾಲದಲ್ಲಿ ಆಡಳಿತಸೂತ್ರ ಹಿಡಿದಿದ್ದ ದಿವಾನ್ ಶ್ರೀ ಮಾಧವರಾಯ ಅವರು ಜನರಿಗೆ ಅನ್ನ ಒದಗಿಸದೇ ಅವರನ್ನು ನಾಯಿಗಳೋಪಾದಿಯಲ್ಲಿ ಕೊಲ್ಲುತ್ತಿದ್ದಾರೆಂದು ಹೇಳುತ್ತಿದ್ದರು. ಅಂಥ ಕಾಲದಲ್ಲಿ ಈಗ ಈ ಸಭೆಯಲ್ಲಿ ಸದಸ್ಯರಾಗಿರುವಂಥ ಶ್ರೀಮಾನ್ ಎಲ್. ಎಸ್. ವೆಂಕಾಜಿರಾಯರು ಕೇಂದ್ರ ಸರ್ಕಾರ ಕೊಡುತ್ತಿದ್ದ ಪಡಿತರ [illegible] ಕಾಲದಲ್ಲೂ ಅನೇಕ ಜನರಿಗೆ ಅನ್ನ ನೀರಿನ ದಾನ ಮಾಡಿದ್ದಾರೆ. ಆ ಒಂದು ಕೀರ್ತಿ ಶಾಶ್ವತವಾಗಿ ಅವರ ಮಕ್ಕಳು ಮರಿಗಳಿಗೆಲ್ಲಾ ಇದ್ದೇ ಇರುತ್ತದೆ. ಹಿಂದೆ ಅಂಥ ಬರಗಾಲ ಬಂದಿತ್ತು. ಅಮೇರಿಕಾ ಇತ್ಯಾದಿ ಪಾಶ್ಚಾತ್ಯ ದೇಶಗಳಿಂದ ಬಂದಿದ್ದ ಡೆಲಿಗೇಷನ್ನಿನವರು ಕೂಡ ನಮ್ಮ ಹಳೆಯ ಮೈಸೂರಿನಲ್ಲಿ ಪ್ರವಾಸ ಮಾಡಿ ಚಿತ್ರದುರ್ಗ, ಕೋಲಾರ ಮತ್ತು ತುಮಕೂರು ಜಿಲ್ಲೆಗಳು ಬೆಂಗಾಡು ಪ್ರದೇಶಗಳಲ್ಲಿ ಪ್ರಥಮಸ್ಥಾನ ಗಳಿಸಿರುತ್ತವೆಂದು ತಿಳಿಸಿದ್ದಾರೆ. ಇದೇ ವಿಚಾರದಲ್ಲಿ ಶ್ರೀ ಹೃದಯನಾಥ ಕುಂಜ್ರೂ ಅವರು ಸಹ ಬಹು ಚೆನ್ನಾಗಿ ತಿಳಿಸಿದ್ದಾರೆ. ಈಗ ನಾನು ಹೇಳಿದ ಮೂರು ಜಿಲ್ಲೆಯಲ್ಲಿ 1948ನೆಯ ಸಾಲಿನಲ್ಲಿ ಜನಗಳಿಗೆ ಉಣ್ಣಲಿಕ್ಕೆ ಅನ್ನವಿಲ್ಲ, ಉಡಲಿಕ್ಕೆ ಬಟ್ಟೆ ಇಲ್ಲ, ಕುಡಿಯುವ ನೀರಿಗೂ ಸಹ ಗತಿಯಿಲ್ಲದೆ ಕಂಗೆಟ್ಟು ಹೋಗಿದ್ದರು. ತುಮಕೂರು ಜಿಲ್ಲೆಯಲ್ಲಿ ಬುಕ್ಕಾಪಟ್ಟಣ ಹೋಬಳಿ ಜನರು ಹೊಟ್ಟೆಗಿಲ್ಲದೆ ದೇವದಾರು ಸೊಪ್ಪನ್ನು ಕೂಡ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಬೇಯಿಸಿ ತಿಂದು ಪ್ರಾಣಗಳನ್ನುಳಿಸಿಕೊಳ್ಳಬೇಕಾಯಿತು. ಇಂಥ ಕಷ್ಟಕಾರ್ಪಣ್ಯಗಳನ್ನು ಜನರು ಅನುಭವಿಸಬೇಕಾಗಿದ್ದರೆ ಇದೇನು ನಮ್ಮ ದೇಶದ ದುರದೃಷ್ಟವೋ ಅಥವಾ ಮತ್ತೆ ಯಾರ ದುರ್ದೈವವೋ ಗೊತ್ತಾಗುವುದಿಲ್ಲ. ಈ ಹಿಂದೆ ಶ್ರೀಮಾನ್ ನಿಜಲಿಂಗಪ್ಪನವರು ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾಗಿದ್ದಾಗಲೂ ಹೀಗೆ ದೇಶದಲ್ಲಿ ಭಯಂಕರ ಕ್ಷಾಮವಿತ್ತು. ಈಗ ನೂತನವಾಗಿ ಕರ್ಣಾಟಕ ರಾಜ್ಯ ಉದಯವಾಯಿತು. ಈ ನೂತನ ರಾಜ್ಯದ ರಾಜ್ಯಾಡಳಿತ ಸೂತ್ರವನ್ನು ಕರ್ಣಾಟಕದ ಪ್ರಥಮ ಮುಖ್ಯಮಂತ್ರಿಗಳಾಗಿ ಶ್ರೀಮಾನ್ ನಿಜಲಿಂಗಪ್ಪನವರೇ ಆಡಳಿತ ನಡೆಸುತ್ತಿರುವಾಗ ಮತ್ತೆ ಈ ಕ್ಷಾಮ ಮಾರಿ, ಅನ್ನ ಮಾರಿ ದಿಡ್ಡಿಯ ಬಾಗಿಲಿನಲ್ಲಿ ಬಂದು ನಿಂತಿದ್ದಾಳೆ! ಹೀಗಾಗುತ್ತಿರುವುದನ್ನು ನೋಡಿದರೆ ದುರದೃಷ್ಟಶಾಲಿಗಳು ಶ್ರೀಮಾನ್ ನಿಜಲಿಂಗಪ್ಪನವರಿರಬೇಕು ಇಲ್ಲವೇ ಈ ದೇಶದ ಜನರು ದುರ್ದೈವಿಗಳಿರಬೇಕು! 1945—46ರಲ್ಲೇನೋ ಆ ಕ್ಷಾಮ ಭಯವಿತ್ತು. ಆದರೆ ಈ ದಿವಸ ಆಗಿದ್ದ ಜನಸಂಖ್ಯೆಗಿಂತ ಇಮ್ಮಡಿಯಾಗಿದೆ. ಮೈಸೂರು ವಿಶಾಲವಾದಂಥ ರಾಜ್ಯವಾಯಿತು. ಈ ದಿವಸ ನವ ಮೈಸೂರಿನ ಪ್ರಜಾಸಂಖ್ಯೆ ಎರಡು ಕೋಟಿಗೇರಿದೆ. ಈ ಎರಡು ಕೋಟಿ ಜನರೂ ಈ ದಿವಸ ದುರ್ದೈವಿಗಳಾದರಲ್ಲಾ ಎಂದು ಹೇಳಲು ನನಗೆ ತುಂಬ ವ್ಯಸನವಾಗುತ್ತದೆ. ಸ್ವಾಮಿ, ಆ ದಿವಸ ಶ್ರೀಮಾನ್ ಹೃದಯನಾಥ ಕುಂಜ್ರೂ ಅವರೂ ಹಿಂದೆ ಇದ್ದಂಥಾ ಬೇಜವಾಬ್ದಾರಿ ಸರ್ಕಾರದ ದಿವಾನರಾಗಿದ್ದ ಶ್ರೀ ಮಾಧವರಾಯರಿಗೆ—"ನೀವು ಬೇಗ ಈ ಆಹಾರದ ಕಂಟ್ರೋಲನ್ನು ವಜಾಮಾಡಿ, ಇಲ್ಲವೇ ಜನರಿಗೆ ಆಹಾರ ಒದಗಿಸಿ, ಹಾಗೆ ಮಾಡದೆ ವೃಥಾ ಜನರನ್ನು ಅನ್ನ ನೀರು ಕೊಡದೆ ನಾಯಿನರಿಗಳಂತೆ ಕೊಲ್ಲಬೇಡಿ. ಜನತೆ ಅನ್ನಾ-ಅನ್ನಾ ಎಂದು ಬೊಬ್ಬೆಯಿಡುತ್ತಿದೆ" ಎಂಬುದಾಗಿ ಹೇಳಿದಂಥ ಮಾತುಗಳನ್ನು ಆಗಿದ್ದ ದಿವಾನರು ಕೇಳಿ ಸಾಧ್ಯವಾದ ಎಲ್ಲ ಪ್ರಯತ್ನಗಳನ್ನೂ ಮಾಡಿ ಜನರಿಗೆ ಆಹಾರ ಸಾಮಗ್ರಿಗಳನ್ನು ಒದಗಿಸಿದರು. ಅವರ ಮಾತಿಗೆ ಆ ದಿವಾನರು ಒಂದು ಬೆಲೆಯನ್ನು ಕೊಟ್ಟರು. ಆ ದಿವಸ ಸಾಧ್ಯವಾದ ಮಟ್ಟಿಗೂ ಜನರಿಗಿದ್ದ ಅನ್ನಬಾಧೆಯನ್ನು ನಿವಾರಣೆ ಮಾಡಿದರು. ಆದರೆ ಕಾಂಗ್ರೆಸ್ ಪ್ರಭುತ್ವ ದೇಶದಲ್ಲಿ ಪ್ರಾರಂಭವಾಗಿ ಇಲ್ಲಿಗೆ ಹತ್ತು ವರ್ಷಗಳ ಮೇಲಾಯಿತು. ಅಲ್ಲಿಂದ ಇಲ್ಲಿಯತನಕ ಈಗಿರತಕ್ಕ ಆಡಳಿತಪಕ್ಷ ಈ ಕ್ಷಾಮ ನಿವಾರಣೆ ಬಗ್ಗೆ ಹಂಗಾಮಿ ಅಥವಾ ಖಾಯಂ ಆದಂಥಾ ಏನು ಕಾರ್ಯಕ್ರಮಗಳನ್ನು ಕೈಕೊಂಡಿದೆ? ಯೋಚಿಸಿ ನೋಡಿದರೆ ಇವರೆಗೂ ಕೇಂದ್ರ ಸರ್ಕಾರವಾಗಲಿ, ಅಥವಾ ರಾಜ್ಯದ ಸರ್ಕಾರಗಳಾಗಲಿ, ಈ ಕ್ಷಾಮ ಮಾರಿಯನ್ನು ಹೊಡೆದೋಡಿಸಲು ಅಂಥ ಶಾಶ್ವತವಾದ ಪ್ರಯತ್ನಗಳೇನನ್ನೂ ನಡೆಸಿಲ್ಲವೆಂದೇ ಹೇಳಬೇಕಾಗಿದೆ. ಹೋಗಲಿ ಇದನ್ನು ಶಾಶ್ವತವಾಗಿ ನಿವಾರಣೆ ಮಾಡುತ್ತೇವೆಂದು ಯಾರಾದರೂ ಈ ಪೈಕಿ ಪ್ರತಿಜ್ಞೆ ಮಾಡಿದ್ದಾರೇನು? ಇಲ್ಲ. ಈಗಿರತಕ್ಕ ಸರ್ಕಾರದವರು ಮಾಡಿರತಕ್ಕಂಥ ಒಂದೇ ಒಂದು ಭೀಷ್ಮ ಪ್ರತಿಜ್ಞೆ ಏನೆಂದರೆ—ಜನರು ಎಂಥ ಅವಸ್ಥೆಯಲ್ಲಿದ್ದರೇನು? ಅವರು ಏನು ಆಟವಾಡಿದರೇನ? ಅವರ ಅನುಕೂಲ ಅನಾನುಕೂಲದ ವಿಚಾರಗಳೊಂದನ್ನೂ ಗಮನಿಸದೆ ತಾವು ನಿರಾತಂಕವಾಗಿ ಅಧಿಕಾರದಲ್ಲಿರಬೇಕೆಂಬ ಒಂದು ಪ್ರತಿಜ್ಞೆ ವಿನಾ ಈ ದೇಶವನ್ನಾಗಲಿ ದೇಶದ ಜನತೆಯನ್ನಾಗಲಿ ಕ್ಷಾಮ ದೇವತೆಯ ದವಡೆಯಿಂದ ಪಾರುಮಾಡುತ್ತೇವೆಂದೇನಾದರೂ ಪ್ರತಿಜ್ಞೆ ಮಾಡಿದ್ದಾರೆಯೋ ಎಂದರೆ—ಅದೇನೂ ಕಾಣುತ್ತಿಲ್ಲ.

5 P.M.

ಯಾವುದಾದರೂ ಒಂದು ತತ್ವವನ್ನು ರೂಪಿಸುತ್ತಿದ್ದೀರೋ, ಇಲ್ಲ; ಯಾವುದಾದರೂ ಕೆಲಸವನ್ನು ಕಾರ್ಯರೂಪಕ್ಕೆ ತಂದಿದ್ದೀರೋ, ಇಲ್ಲ. ಆದುದರಿಂದಲೇ ಅಧಿಕಾರಕ್ಕೆ ಬರತಕ್ಕವರು ದೇಶೋಭಿವೃದ್ಧಿಯಾಗುವ ಯೋಚನೆಯನ್ನು ಮೊದಲು ಹೊರಬೇಕು ಎಂದು ಹೇಳುತ್ತಿರುವುದು. ಅದಕ್ಕೋಸ್ಕರವೇ ಇವತ್ತು ಆಡಳಿತ ನಡೆಸತಕ್ಕ ಮಂತ್ರಿಮಂಡಲ ಜನಕ್ಕೆ "ದೇಶ ನಿಮ್ಮದು" ಎಂದು ಹೇಳುತ್ತಿದ್ದೀರಿ. ಅದಕ್ಕಾಗಿ ಆಹಾರವನ್ನು ಹೆಚ್ಚು ಹೆಚ್ಚಾಗಿ ಬೆಳೆಯಬೇಕೆಂದು ಜನರಿಗೆ ದೇಶದ ಮೂಲೆ ಮೂಲೆಯಲ್ಲಿಯೂ ಹೇಳುತ್ತಿದ್ದೀರಿ. ಆದರೆ ಸರ್ಕಾರದವರು ಕಾರ್ಯತಃ ಮಾಡುತ್ತಿರುವುದೇನು? ದೇಶದಲ್ಲಿ ಜಮೀನುಗಳನ್ನು ಕೊಡುವಾಗ, ಶ್ರೀ ದೇವರಾಜ ಅರಸಿನವರು ಹೇಳಿದಂತೆ, ಜಮೀನಿರುವವನೇ, ತನಗೊಂದು ಮತ್ತು ತನ್ನ ಮಗನ ಹೆಸರಿಗೊಂದು ಮೊಮ್ಮನಿಗೊಂದು ಮರಿಮಗನಿಗೊಂದು, ಹೀಗೆ ಭಾಗ ಮಾಡಿಕೊಂಡು ಜಮೀನನ್ನು ಪಡೆಯಲು ಅವಕಾಶವಾಗಿದೆ. ಆದುದರಿಂದಲೇ ಈಗ ದೇಶದಲ್ಲಿ ಕ್ಷಾಮ ಎನ್ನುವುದು ತಾಂಡವಾಡುತ್ತಿರುವುದು. ಇದು ಸರ್ಕಾರಕ್ಕೆ ಅರಿವಾಗಿಲ್ಲವೇನು? ದೇಶದಲ್ಲಿ ಜನಗಳು ಇವತ್ತಿನ ದಿವಸ ಹೇಗೆ ಜೀವನ ಮಾಡುತ್ತಿದ್ದಾರೆ ಎನ್ನುವುದನ್ನು ಯೋಚನೆ ಮಾಡಬೇಕು. ದೇಶದಲ್ಲಿ ಇವತ್ತು ರಾಜ ಮಹಾರಾಜರುಗಳು ಇರಕೂಡದು ಎಂದು ಅವರನ್ನೆಲ್ಲ ಕಿತ್ತುಹಾಕಲಾಯಿತು. ಹಿಂದೆ ದೇಶದಲ್ಲಿ ನಿರಂಕುಶ ಪ್ರಭುತ್ವವಿತ್ತು. ಈ ದಿವಸ ಪ್ರಜಾ ಪ್ರಭುತ್ವ ಆಗಿದೆ. ಆದರೇನು ದೇಶದಲ್ಲಿ ನಾನು ಮುಂದು ತಾನು ಮುಂದು ಎಂದು ಅಧಿಕಾರಕ್ಕಾಗಿ ತಿಕ್ಕಾಟ ಮಾಡಿ ಕಾದಾಡುತ್ತಿದ್ದಾರೆ. ಹೀಗಾದರೆ ಯಾವಾಗ ಇವರು ದೇಶವನ್ನು ಕಟ್ಟತಕ್ಕದ್ದು ಎನ್ನುವುದನ್ನು ಇವರೇ ಯೋಚಿಸಲಿ. ಇಂತಹ ಒಂದು ಘೋರ ಕ್ಷಾಮ ದೇಶಕ್ಕೆ ಬಂದಿರುವಾಗ ಇದನ್ನು ನಿವಾರಣೆ ಮಾಡಲಿಕ್ಕೆ ಯಾವ ಒಂದು ಕಾರ್ಯವನ್ನಾದರೂ ಕೈಹಾಕಿ ಮಾಡಿದ್ದೇವೆ ಎನ್ನುವುದನ್ನು ಇವರು ದೇವರ ಮುಂದೆ ಧೈರ್ಯವಾಗಿ ಹೇಳುತ್ತಾರೋ? ಆ ಧೈರ್ಯ ಇವರಲ್ಲಿ ಕಾಣಿಸುತ್ತಿಲ್ಲ. ಅದರಿಂದ ಇವರು ದೇಶಕ್ಕೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದೇನೆ. ಈಗಾಗಲೇ ನಾನೇ ಈ ಸಭೆಯ ಮುಂದೆ ಒಂದು ಅಡ್‌ಜರ್ನಮೆಂಟ್ ಮೋಷನ್ನನ್ನು ತಂದಿದ್ದೆ. ಅದು ಚರ್ಚೆಗೆ ಬರಲಿಲ್ಲ. ಅದರ ವಿಷಯ ಇಷ್ಟೇ: ಈಗ ಜತ್ತಿ ಸಮಿತಿ ರಿಪೋರ್ಟು ಚರ್ಚೆಗೆ ಬರುವುದರಲ್ಲದೆ ಇದರ ಪ್ರಕಾರ ದೇಶದಲ್ಲಿ ಯಾರು ಯಾರಿಗೆ ಎಷ್ಟು ಜಮೀನಿರಬೇಕು ಎಷ್ಟು ಜನಗಳಿಗೆ ಜಮೀನು ಸಿಕ್ಕುತ್ತದೆ ಎಂಬ ವಿವರಗಳನ್ನು ಕೇಳಬೇಕೆಂದಿದ್ದೆ. ಏಕೆಂದರೆ ಇದರಿಂದ ಈಗ ಜನಗಳಲ್ಲಿ ಬಹಳ ಅಸಮಾಧಾನವಾಗಿದೆ. ಅದಕ್ಕಾಗಿ ಈ ವಿಷಯವನ್ನು ಸರಿಯಾಗಿ ಆಲೋಚನೆಮಾಡಬೇಕೆಂದು ತಂದಿದ್ದೆ.

ಸ್ವಾಮೀ, ಅನೇಕ ಶಾಸ್ತ್ರಗಳನ್ನು ಹೇಳುತ್ತೀರಿ, ಸೂತ್ರಗಳನ್ನು ತಿಳಿಯಪಡಿಸುತ್ತೀರಿ. ಆದರೆ ಆ ಪ್ರಕಾರವಾಗಿ ಇವರು ಎಲ್ಲಿ ನಡೆಸುತ್ತಿದ್ದಾರೆಂಬುದನ್ನು ಹೇಳುತ್ತಾರೆಯೇ? ಅಂತಹ ಶಾಸ್ತ್ರ, ಸೂತ್ರಗಳನ್ನೆಲ್ಲಾ ತಮ್ಮವರಿಗೆ ಅಥವಾ ತಮಗೆ ಬೇಕಾದವರಿಗೆ ಸಂಬಂಧಿಸಿದ ವಿಷಯವು ಬಂದಾಗ ಅವುಗಳೆಲ್ಲ

ಹೇಗೆ ನ್ಯಾಯವಾಗುತ್ತವೆ? ಈಗ ನೀವು ಬೆಂಗಳೂರು ಡಿವಿಜನ್ನು, ಮೈಸೂರು ಡಿವಿಜನ್ನು ಎಂದು ಮಾಡಿದ್ದೀರಿ. ಈಗ ತಾವು ಮಾಡಿರುವ ಆರ್ಡರು ಕಾಪಿ ನನ್ನಲ್ಲಿದೆ. ತಾವು ಈಚೆಗೆ ತುಂಗಾ ಷುಗರ್ ಕಂಪನಿಯವರಿಗೆ ಐದು ಸಾವಿರ ಎಕರೆಯಷ್ಟು ಜಮೀನನ್ನು ಕೊಡುವಾಗ ಯಾರನ್ನು ಕೇಳಿ ಕೊಟ್ಟಿರಿ? ನಿಮ್ಮ ಶಾಸ್ತ್ರ–ಸೂತ್ರಗಳೆಲ್ಲ ಏನಾದವು? ಇವತ್ತು ಯಾರೂ ನಮ್ಮ ದೇಶದಲ್ಲಿ ಸಕ್ಕರೆಯನ್ನು ತಯಾರಿಸುವುದಕ್ಕೆ ಇರಲಿಲ್ಲವೇನು? ಹೀಗೆ ಸಕ್ಕರೆಯನ್ನು ತಯಾರುಮಾಡುವ ಒಬ್ಬ ಬಂಡವಾಳ ಶಾಹಿಗೆ ಐದು ಸಾವಿರ ಎಕರೆ ಜಮೀನನ್ನು ಮಂಜೂರು ಮಾಡಿರತಕ್ಕ ಬಗ್ಗೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಅವರು ಯಾರೇ ಆಗಿರಲಿ. ಅವರ ಮೇಲೆ ತಕ್ಕ ಶಿಸ್ತಿನ ಕ್ರಮಗಳನ್ನು ತೆಗೆದುಕೊಂಡು ಅವರನ್ನು ಶಿಕ್ಷಿಸಿ, ಚಿಂತೆಯಿಲ್ಲ. ಇಲ್ಲಿಯವರೆಗೆ ಇಂಥಹ ಕೆಲಸಗಳನ್ನೇ ಎಷ್ಟೋ ಮಾಡಿದ್ದೀರಿ. ಆದಾಗ್ಯೂ ಮಾಡಿಲ್ಲವೆಂದು ಬೇರೆ ಹೇಳುತ್ತಿದ್ದೀರಿ. ಹಿಂದಿದ್ದ ಬೇಜವಾಬ್ದಾರಿ ಸರ್ಕಾರ ಆಡಳಿತ ನಡೆಸುತ್ತಿದ್ದ ಮಾದರಿಯಲ್ಲೇ ಇಂದಿಗೂ ಇವರು ಆಡಳಿತ ನಡೆಸುತ್ತಿದ್ದಾರೆಯೇ ವಿನಾ ನಿಮ್ಮಲ್ಲಿ ಈ ಹೊತ್ತು ಒಂದು ಅಂಥ ಜವಾಬ್ದಾರಿ ಇದೆ ಎನ್ನುವುದನ್ನು ತೋರಿಸಿಲ್ಲವೆಂದು ನಾನು ಖಚಿತವಾಗಿ ಹೇಳುತ್ತೇನೆ. ಇವರ ನಡೆವಳಿಕೆ ಹೀಗಾಗಿರುವಾಗ ದೇಶದಲ್ಲಿ ಹೆಚ್ಚು ಆಹಾರದ ಬೆಳೆಯಾಗುತ್ತದೆಯೋ ಎಂದು ನಾನು ಪ್ರಶ್ನೆ ಕೇಳಬೇಕಾಗಿದೆ. ದೇಶದಲ್ಲಿ ಹೆಚ್ಚು ಆಹಾರದ ಬೆಳೆ ಇಲ್ಲದಿರುವಾಗ ಮತ್ತು ದೇಶದಲ್ಲಿ ತಲೆ ಹಾಕಿರುವ ಕ್ಷಾಮವನ್ನು ನಿವಾರಣೆ ಮಾಡಬೇಕೆಂದಿರುವಾಗ ಸರ್ಕಾರದವರು ಹೀಗೆ ಸಾವಿರಾರು ಎಕರೆ ಜಮೀನನ್ನು ಮಾರಾಟ ಮಾಡಿದರೆ ಹೆಚ್ಚು ಆಹಾರ ಬೆಳೆಯುವುದಕ್ಕೆ ಆಗುತ್ತದೆಯೆ ಎನ್ನುವುದನ್ನು ಅವರೇ ಆಲೋಚಿಸಬೇಕು. ಈಗಾಗಲೇ ಮೊದಲನೆಯ ಪಾಂಚವಾರ್ಷಿಕ ಯೋಜನೆಯಾಯಿತು. ಅದು ಮುಗಿದು ಎರಡನೆಯ ಪಾಂಚವಾರ್ಷಿಕ ಯೋಜನೆಯೂ ಆಗಿ ಎರಡು ವರ್ಷಗಳಾದವು; ಮತ್ತು ಮೂರನೆಯ ಪಾಂಚವಾರ್ಷಿಕ ಯೋಜನೆ, ಹಾಗೆಯೇ ಮತ್ತೊಂದು ಯೋಜನೆ ಮಾಡಬೇಕೆಂದಿರುವಾಗ ಸಕ್ಕರೆಯನ್ನು ಉತ್ಪತ್ತಿ ಮಾಡುವುದಕ್ಕಾಗಿ ಈ ಬಗ್ಗೆ ಅಂಕಿಅಂಶಗಳೊಂದನ್ನೂ ನೋಡದೆ ಹೀಗೆ ಜಮೀನನ್ನು ಕೊಟ್ಟರೆ ಕ್ಷಾಮನಿವಾರಣೆ ಮಾಡಿದಂತಾಗುತ್ತದೆಯೇ? ಈಗಾಗಲೇ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀ ಭೀಮಪ್ಪನಾಯಕರವರು ಅಂಕಿಅಂಶಗಳನ್ನೆಲ್ಲ ಕೊಟ್ಟು ಹೇಳಿದರು. ಅಲ್ಲದೆ ಈ ವರೆಗೂ ಐದುಸಾವಿರ ಟನ್ನು ಅಕ್ಕಿ ಕೊಡುತ್ತಿದ್ದುದನ್ನು ಈಗ ಕೇಂದ್ರ ಸರ್ಕಾರವು ನಿಲ್ಲಿಸಿದೆ ಮತ್ತು ಅದರಿಂದಾಗಿ ಡಿಪೋಗಳ ಅಕ್ಕಿಯೂ ಕೂಡ ಸರಿಯಾಗಿ ಸಿಕ್ಕುವುದು ಕಷ್ಟವಾಗಿದೆ ಎಂದು ಶ್ರೀ ದೀನದಯಾಳುನಾಯ್ಡುರವರು ಈಗಾಗಲೇ ಹೇಳಿದ್ದಾರೆ. ಅಶೋಕ ಮೆಹ್ತರವರ ಕಮಿಟಿ ಇಲ್ಲಿಗೆ ಬಂದಿದ್ದಾಗ ಅವರಿಗೆ ಇಲ್ಲಿಯ ಸರ್ಕಾರಿ ಅಧಿಕಾರಿಗಳು ಅಂಕಿ ಅಂಶಗಳನ್ನು ಕೊಟ್ಟರು. ಅದರಿಂದ ಆದ ಪರಿಣಾಮವೇನೆಂದರೆ, ಒಟ್ಟಿನಲ್ಲಿ ಮೈಸೂರಿನಲ್ಲಿ ಹೆಚ್ಚಾಗಿ ಆಹಾರವಿದೆ ಎನ್ನುವ ತೀರ್ಮಾನವನ್ನು ಅವರು ಕೈಗೊಂಡು ಇನ್ನುಮುಂದೆ ಆಹಾರ ಪದಾರ್ಥಗಳನ್ನು ಕೊಡುವುದಿಲ್ಲ ಎನ್ನುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟ ಹಾಗಾಯಿತು. ಆದರೆ ಈ ಒಂದು ನೆಪದಮೇಲೆ ಕೇಂದ್ರ ಸರ್ಕಾರವೂ ಕೂಡ ಆಹಾರ ಧಾನ್ಯಗಳನ್ನು ಕೊಡುವುದಕ್ಕಾಗುವುದಿಲ್ಲ ಎನ್ನತಕ್ಕದ್ದು ಸರಿಯಲ್ಲ. ಆದರೆ ಈ ಸಂದರ್ಭದಲ್ಲಿ ಗಲಿವರ್ ಎಂಬಾತನು ಹೇಳಿರತಕ್ಕ ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಆತನು ಹೀಗೆ ಹೇಳಿದಾನೆ:—

> "Whoever could make two ears of corn or two blades of grass to grow upon a spot of ground where only one grew before would deserve better of mankind and do more essential service to his country than the whole race of politicians put together. . . . . ."

ಸ್ವಾಮೀ, ಇವತ್ತಿನ ದಿವಸ ರೈತನಿಗೆ ಬಹಳ ಪ್ರಾಮುಖ್ಯತೆ ಇದೆ. ಗೋಧಿ, ಅಕ್ಕಿ ಇವುಗಳನ್ನು ಬೆಳೆಯುವವನು ರೈತ. ದೇಶದಲ್ಲಿ ಇವತ್ತು ಒಂದು ಹಿಡಿ ಅನ್ನವನ್ನು ಕೊಡುವವನು ರೈತ. ಅಂತಹ ರೈತನಿಗೆ ಸರಿಯಾಗಿ ವ್ಯವಸಾಯ ಮಾಡುವುದಕ್ಕೆ ಭೂಮಿ ಮತ್ತು ಅವನನ್ನು ಮುಂದಕ್ಕೆ ತರುವುದಕ್ಕೆ ಏನಾದರೂ ಸರ್ಕಾರದವರು ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರಾ ಎಂದರೆ ಹಾಗೇನೂ ಕಾಣಿಸುತ್ತಿಲ್ಲ. ಸುಮ್ಮನೆ ದೊಡ್ಡದಾಗಿ ತುಂಗಭದ್ರ, ಹೀರಾಕುಡ ಮುಂತಾದ ದೊಡ್ಡ ಯೋಜನೆಗಳನ್ನು ಹೇಳುತ್ತಿದ್ದೀರಿ. ಈಗಾಗಲೇ ನನ್ನ ಕೆಲವು ಸ್ನೇಹಿತರು ದೇಶದಲ್ಲಿರುವ ಸಣ್ಣ ಸಣ್ಣ ಕೆರೆಗಳನ್ನು ಬೇಗ ರಿಪೇರಿ ಮಾಡಬೇಕೆಂದು ಹೇಳಿದರು. ಈ ವಿಷಯವಾಗಿ ಇದೇ ಸಭೆಯಲ್ಲಿ ಈ ಹಿಂದೆ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಮಾನ್ಯ ಮರಾಮತ್ತು ಶಾಖೆಯ ಸಚಿವರು ವರ್ಷಕ್ಕೆ ಎಂಟು ಕೆರೆಗಳನ್ನು ಮಾತ್ರ ರಿಪೇರಿ ಮಾಡುತ್ತೇವೆಂದು ಹೇಳಿದರು. ದೇಶದಲ್ಲಿ ಇರುವ ಎರಡು ಕೋಟಿ ಜನ ಇವತ್ತು ಅನ್ನಕ್ಕಾಗಿ ಹಾತೊರೆಯುತ್ತಿರುವಾಗ ವರ್ಷಕ್ಕೆ ಎಂಟು ಕೆರೆಗಳನ್ನು ಮಾತ್ರ ರಿಪೇರಿಮಾಡುತ್ತೇವೆ ಎಂದು ಹೇಳುವುದು ಎಷ್ಟು ಚೆನ್ನಾಗಿದೆ ಎನ್ನುವುದನ್ನು ತಾವೇ ಆಲೋಚನೆಮಾಡಬೇಕು.

ಶ್ರೀ ಹೆಚ್. ಎಸ್. ರುದ್ರಪ್ಪ.—ಯಾವಾಗ ಹೇಳಿದರು?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದು ಡಿಸ್ಟ್ರಿಕ್ಟಿನಲ್ಲಿ ಎಂಟು ಕೆರೆಗಳನ್ನು ಮಾತ್ರ ರಿಪೇರಿಮಾಡುತ್ತೇವೆಂದು ಒಂದು ಪ್ರಶ್ನೆಗೆ ಉತ್ತರವಾಗಿ ಪಿ.ಡಬ್ಲ್ಯು.ಡಿ. ಮಂತ್ರಿಗಳು ಹೇಳಿದ್ದಾರೆ. ತಾವು ಹೀಗೆ ಹೇಳಿದರೆ ದೇಶ ಉದ್ಧಾರವಾಗುತ್ತದೆಯೇ? ತಾವು ದೇಶದ ಜನಕ್ಕೆ ಪರಿಹಾರಕೊಡಬೇಕಾಗಿದ್ದರೆ, ಕ್ಷಾಮದಿಂದ ನಿವೃತ್ತಿ ಮಾಡಬೇಕೆಂದಿದ್ದರೆ, ಬಡಜನಗಳಿಗೆ ಸಹಾಯ ಮಾಡಬೇಕೆಂದಿದ್ದರೆ, ಇವತ್ತು ಏನು ತತ್ವವನ್ನು ಇವರು ಅನುಸರಿಸುತ್ತಿದ್ದಾರೋ ಅದನ್ನು ಸ್ವಲ್ಪ ಬದಲಾವಣೆ ಮಾಡಬೇಕು. ಧರ್ಮಕ್ಕೆ ಬೆಲೆಕೊಟ್ಟು ಇವತ್ತಿನ ದಿನ ಬಂದಿರುವ ಕ್ಷಾಮವನ್ನು ಪರಿಹಾರಮಾಡಲು ಸರಿಯಾಗಿ ಕೆಲಸವನ್ನು ಮಾಡಿದರೆ ಜನಗಳಿಗೆ ಸ್ವಲ್ಪವಾದರೂ ಅನುಕೂಲವಾಗುತ್ತದೆ. ಈ ಸಂದರ್ಭದಲ್ಲಿ ಕೆಲಸ ಮಾಡುವ ಶಾಖೆಗಳಲ್ಲಿರುವ ಅಧಿಕಾರಿಗಳಿಗೆ ಆರ್ಡರನ್ನು ಮಾಡುವಾಗ, ತಾವು ಕಳುಹಿಸಿದ ಆರ್ಡರುಗಳನ್ನು ಸರಿಯಾಗಿ ಪಾಲಿಸುವಂತೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತಿದ್ದೇನೆ. ಈ ರೀತಿಯಾಗಿ ಒಂದು ಒತ್ತಾಯದ ಏರ್ಪಾಡನ್ನು ಮಾಡಿ ದಕ್ಷತೆಯಿಂದ ಕೆಲಸಮಾಡಲು, ಸ್ವಲ್ಪ ನಿಮ್ಮ ಚಾಟಿಯನ್ನು ಸರಿಯಾಗಿ ಅಧಿಕಾರಿಗಳ ಮೇಲೆ ಉಪಯೋಗಿಸಿ ಜನಗಳಿಗೆ ಸಾಕಷ್ಟು ಅನುಕೂಲಗಳನ್ನು ಮಾಡಿಕೊಟ್ಟು ಈಗಿರುವ ಆಹಾರದ ಕೊರತೆಯನ್ನು ನಿವಾರಿಸಬೇಕೆಂದು ನಾನು ಹೇಳುತ್ತೇನೆ.

Sri V. P. DEENADAYALU NAIDU (Cubbonpet).—Mr. Speaker, Sir, this is the only subject on which the House will have to be taken into confidence by giving a very clear picture of the situation. When we actually draw ourselves into the problem I find that everywhere there is cloud and darkness which reminds us of the most horrible and dreadful situation in Bengal some time back. Our State has become larger and so it is all the more necessary that we must have a very clear picture of the situation in the State. If I were to just place before the House the figures from 1945 to 1952 which relate only to old Mysore, one will understand that about 10 to 14 people out of every 100 of the population in cities live not on food but on the scrambles that they get from dustbins. These are people whom we may consider as almost dead; and living not on food but on what we may honourably call as dirty food. In fact, for the last few years I was just thinking whether any effort has been made to ameliorate the condition of these 10 to 14 per cent of the people who live on scrambles taken out of dustbins.

Sri S. D. KOTHAWALE.—Is there any authority?

Sri V. P. DEENADAYALU NAIDU.—The authority is the proceedings of the Legislative Assembly in the year 1952. There is nothing which I will not substantiate. Whatever I quote is from Indian documents such as the First Five-Year Plan, the proceedings of this august previous Assembly.

My first point is that the Department of Food must have a very clear notion and very clear statistics. That is what is wanting. Here I have got certain figures pertaining to the years 1945-52 from the proceedings of the Mysore Legislative Assembly from 20th October to 25th October, relating to extent of lands in which commercial or money crops have been cultivated. We have now resorted to mechanised cultivation. I would like to know from the Hon'ble Minister what is the increase in acreage under cultivation and what is the increase in production as a result of mechanised cultivation. This is a very important aspect on which we would like to have unquestionable figures and not merely figures drawn up by the Department.

Another thing is, I hear so much about what is called inspections. There is the bhoodan march going on now. Similarly, we should march from village to village and see if the official reports that have been placed before us are correct. Otherwise, I am afraid by merely relying on those figures we will land ourselves into trouble. So, in the first instance I question whether the statistics are correct. Secondly, I want to know whether they are properly scrutinised, checked and verified by the official machinery. Is there any machinery to scrutinise and check the statistics? If we blindly accept them we may land ourselves into trouble and we may not be able to make amends before much damage is done. I am only giving a caution. There must be a machinery to scrutinise these statistics and find out whether they are correct. That is the basis on which we can progress, and make our position stable and sure.

Coming to the city aspect, I have been repeatedly drawing the attention of the Government to the identification cards that have been issued. I would like to bring to the notice of the Minister that when issuing the identification cards there is a definite condition laid down and it is that one who holds an identification card for a particular depot is not authorised to purchase foodgrains from any other depot. No doubt, it is a very good condition. But what happens if that particular depot is empty and has no stocks? The identification card holders will have to go to that shop every day. The identification card-holder is not supposed to draw his quota all of a sudden or in accumulated quantities. If he is absent for two or three days from the place and therefore is not in a position to purchase his quota, when he comes back on the fourth day, he is not able to draw his quota for the three previous days. This condition is very far from satisfactory. At least in control days we were able to get a week's quota at a time, but now one has to go every day. That means, in

every house there must be a person to go to the depot every day. And what happens if the depot has no stocks? My submission is that the condition imposed now is very rigid, very difficult and very risky and makes the position of the poor people very hard.

Another thing is that we have made it almost incumbent on the purchaser to take wheat first. If a person wants 4 seers of rice, you ask him to take 2 seers of wheat. The poor people cannot afford it. After all, wheat is not a poor man's food. He must have the concomittants of oil and other things which make living very costly. This is a difficulty which has been agitating the minds particularly of the poor people. I am bringing this aspect of the depots in Bangalore because it has hit the poor people very hard. I am sure the condition must be the same elsewhere also. This state of affairs will have to be remedied. Now, the question is whether the Government has got adequate stocks with it. While replying to a short notice question on this subject, the Hon'ble Minister said that we were not holding stocks and that it was the Government of India which was holding stocks. If we are to surrender ourselves to this extent and not hold certain stocks, I think we are landing ourselves into trouble. We must hold certain stocks which can be released to some of these depots as and when they require. The Government must hold a minimum of a fortnight's or a month's requirements failing which we are not on very safe ground.

The last point that I would like to urge upon the Government is that we have made an effort in the direction of starting regulated markets. Particularly in cities we have thought that this is the working machinery by which we can hold the balance even between the producers, merchants and the consumers. I would only like to ask the Government whether they have gone all out to see that these regulated markets function properly in accordance with the policy laid down by the Government. My respectful submission is that it is a dismal failure. There has been no effort or drive at all. On the other hand, there is some inconvenience caused to the consumers and the merchants. Therefore, unless vigorous efforts are made to plug all holes and remove all difficulties, I am afraid we cannot solve the problem. Though we have certain stocks of foodgrains, it is on account of their maldistribution that we are creating certain temporary and artificial difficulties to our people.

Therefore, I summarise by saying that incorrect statistics, compulsory introduction of certain measures like identification cards and finally the unsatisfactory working of the regulated markets in addition to the failure of rains and other causes have created an abnormal situation which, I hope, the Government will take early steps to meet.

*ಶ್ರೀ ಬಿ. ಎಸ್. ಶಂಕರಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಚರ್ಚೆಯಲ್ಲಿರುವ ಆಹಾರದ ಅಭಾವ ಮತ್ತು ಅದರ ಪರಿಣಾಮವಾಗಿ ಕ್ಷಾಮ ಯಾವ ಕಾರಣಕ್ಕಾಗಿ ಬರುತ್ತದೆ, ಅದರಲ್ಲಿ ಸರ್ಕಾರದ ಪಾತ್ರ ಏನು, ಯಾವ ಕಾರ್ಯಕ್ರಮ ಕೈಗೊಂಡರೆ ಅದು ಕಡಿಮೆಯಾಗುತ್ತದೆ ಈ ವಿಷಯದಲ್ಲಿ ನನಗೆ ತಿಳಿದಮಟ್ಟಿಗೆ ನಾಲ್ಕಾರು ಮಾತುಗಳನ್ನು ಹೇಳಬಿಚ್ಛಿಸುತ್ತೇನೆ. ಆಹಾರದ ಅಭಾವ ಬರುವುದಕ್ಕೆ ಪ್ರಕೃತಿಯ ಪ್ರಕೋಪ ಮತ್ತು ದೈವೇಚ್ಛೆಯೇ ಕಾರಣ. ಸಕಾಲದಲ್ಲಿ ಮಳೆ ಆಗದೆ ಬೆಳೆ ಬರದೆ ಕ್ಷಾಮ ಉದ್ಭವಿಸುತ್ತದೆ. ಎರಡನೆಯದು ದೇಶದಲ್ಲಿ ಜನಗಳು ಮತ್ತು ಆಳ್ವಿಕೆ ಮಾಡತಕ್ಕವರಲ್ಲಿ ಪ್ರಾಮಾಣಿಕತೆ ಇರಬೇಕು, ನೀತಿ ಇರಬೇಕು. ರಾಜ್ಯವನ್ನು ಆಳುವವರಲ್ಲಿ ಪ್ರಾಮಾಣಿಕತೆಯ ಅಂಶ ಜಾಸ್ತಿ ಇದ್ದರೆ ಆಗ ದೇವರು ಅವರನ್ನೂ ಅವರ ಕೆಳಗಿರತಕ್ಕ ಪ್ರಜೆಗಳನ್ನೂ ಪರಿಪಾಲನೆ ಮಾಡುತ್ತಾನೆ. ಉದಾಹರಣೆಗೆ 1952-53ರಿಂದ ಇಲ್ಲಿಯವರೆಗೆ ಯಾವ ಮಟ್ಟದಲ್ಲಿ ರೈತ ಬರುತ್ತಿದ್ದಾನೆ ಎಂದು ಸರ್ಕಾರದವರು ಒದಗಿಸುವ ಅಂಕಿಅಂಶಗಳನ್ನು ನೋಡುವ ಭಾಗದಲ್ಲಿ ಕ್ಷಾಮವು ಇಲ್ಲ, ಆಹಾರದ ಅಭಾವವು ಇಲ್ಲ ಎಂದು ಹೇಳುತ್ತೇನೆ. ಸರ್ಕಾರದವರು ಅಂಕಿ ಅಂಶಗಳನ್ನು ಒದಗಿಸುವ ಕಾಲದಲ್ಲಿ ಆ ಅಂಕಿಅಂಶಗಳು ಹೊರಬಿದ್ದಾಗ ಆ ವಿಚಾರದಲ್ಲಿ ಏನು ಅಭಿಪ್ರಾಯ ಮೂಡಿತು ಎನ್ನುವುದನ್ನು ಕೂಲಂಕಷವಾಗಿ ಪರಿಶೀಲನೆ ಮಾಡುತ್ತಾ ಇಲ್ಲ. ಜನರಿಗೆ ಎದ್ದುಕಾಣುತ್ತಿರುವ ವಿಷಯದಲ್ಲಿ ಹೀಗೆ ತಪ್ಪು ಅಂಕಿಅಂಶಗಳನ್ನು ಒದಗಿಸುವುದರಲ್ಲಿ ಮಂತ್ರಿಗಳು ನಿರತರಾಗಿದ್ದರೆ, ಜನಗಳಿಗೆ ಗೊತ್ತಾಗುತ್ತದೆ. ಕಣ್ಣಿಗೆ ಕಾಣದೆ ಇರತಕ್ಕ, ನೋಟಕ್ಕೆ ಸಿಕ್ಕದೆ ಇರತಕ್ಕ ವಿಷಯದಲ್ಲಿ ಏನಾಗುತ್ತದೆ ಎಂಬುದನ್ನು ತಾವು ತಿಳಿದುಕೊಳ್ಳಬಹುದು. ಹಾಗೆ ಮಾಡುವುದು ಪ್ರಾಮಾಣಿಕತನ ಎಂದು ಹೇಳುತ್ತೇನೆ. ಆಹಾರ ಅಭಾವ ಬರುವುದಕ್ಕೆ ಕಾರಣ ರೈತನನ್ನು ಸರ್ಕಾರ ಯಾವ ಮಟ್ಟದಲ್ಲಿ ಇಡಬೇಕೋ ಆ ಮಟ್ಟದಲ್ಲಿ ಇಡುವುದರಲ್ಲಿ ಅಲಕ್ಷ್ಯ ಮಾಡಿರುವುದು. ಉದಾಹರಣೆ ಕೊಡುತ್ತೇನೆ. ವ್ಯವಸಾಯ ಮಾಡತಕ್ಕ ರೈತನಿಂದ

(ಬಿ. ಎಸ್. ಶಂಕರಪ್ಪ)

ಬೆಳೆ ಬರುತ್ತದೆ. ನನ್ನಹಾಗೆ ಮಾತನಾಡಿದರೆ, ಸಮಿತಿ ನೇಮಕಮಾಡಿದರೆ, ಅದಕ್ಕೋಸ್ಕರ ಬೇಕಾದಷ್ಟು ಸಂತಾಪಪಟ್ಟರೆ, ಪಶ್ಚಾತ್ತಾಪಪಟ್ಟರೆ ಆಹಾರ ಬೆಳೆಯುವುದಿಲ್ಲ. ಈಗ ಏನಾಗಿದೆ ಎಂದರೆ ತಾಲ್ಲೂಕು ಲೆವೆಲ್ಲಿನಲ್ಲಿ ವ್ಯವಸಾಯ ಇಲಾಖೆಯ ನೂರಾರು ಅಗ್ರಿಕಲ್‌ಚರಲ್ ಇನ್ಸ್‌ಪೆಕ್ಟರುಗಳನ್ನು ಚಿಲ್ಲರೆ ಅಂಗಡಿಗಳಲ್ಲಿ ಆರ್ಟಿಫಿಷಿಯಲ್ ಮೆನ್ಯೂರು ಒದಗಿಸಲು ಇಟ್ಟಂತಾಗಿದೆ. ಒಂದು ತಾಲ್ಲೂಕಿನಲ್ಲಿ 280 ಹಳ್ಳಿಗಳಲ್ಲಿರತಕ್ಕ ವ್ಯವಸಾಯಗಾರರಿಗೆ ಅವನು ಏನು ಸಲಹೆ ಕೊಡಬಲ್ಲ? ಸರ್ಕಾರ ಅವನಿಗೆ ಈಗ ಏನು ನೆರವು ಕೊಟ್ಟಿದೆ? ವ್ಯವಸಾಯಗಾರರಿಗೆ ಹೆಚ್ಚು ಆಹಾರ ಬೆಳೆಯಬೇಕೆಂದು ಬಾಯಲ್ಲಿ ಮಾತ್ರ ಹೇಳುತ್ತಾರೆ. ಕಾರ್ಯತಃ ಏನೂ ಮಾಡಿಲ್ಲ, ಸಕಾಲದಲ್ಲಿ ಗುಳ, ಗೊಬ್ಬರ ಅವನಿಗೆ ದೊರೆಯುತ್ತಾ ಇಲ್ಲ. ಇದನ್ನು ಒದಗಿಸಲು ಸರ್ಕಾರ ಅಶಕ್ತತೆ ಹೊಂದಿದೆ. ಕಾಲಕ್ಕೆ ಬೇಕಾಗುವ ಗೊಬ್ಬರ, ಗುಳ, ಆತನಿಗೆ ಕೊಟ್ಟರೆ ಬೆಳೆ ಆಗುವುದಿಲ್ಲವೇ?

ಎರಡನೆಯದಾಗಿ ನಿಜವಾದ ಗೊಬ್ಬರದ ಸಲುವಾಗಿ ದನಗಳನ್ನು ಕಟ್ಟಬೇಕು ಎಂದರೆ ಗ್ರಾಮಾಂತರಗಳಲ್ಲಿರುವ ಗೋಮಾಳವನ್ನು ಇತರ ಜನರಿಗೆ ಕೊಟ್ಟು ದನಗಳಿಗೆ ಸಾಕಾದಷ್ಟು ಗೋಮಾಳ ಇಲ್ಲದಂತೆ ಮಾಡಿದ್ದಾರೆ. ವಸ್ತುತಃ ಕೆಲವು ಗ್ರಾಮಗಳಲ್ಲಿ ಸಾಕಷ್ಟು ಗೋಮಾಳವಿಲ್ಲದ್ದರಿಂದ ದನಗಳ ಗೊಬ್ಬರವೂ ಇಲ್ಲದೆ, ಕೃತಕ ಗೊಬ್ಬರವೂ ಇಲ್ಲದೆ ರೈತರು ತೊಂದರೆ ಪಡುತ್ತಿದ್ದಾರೆ. ಒಂದುಕಡೆ ದನಗಳನ್ನು ಸಾಕುವುದಕ್ಕೆ ಏನೂ ಸೌಕರ್ಯವಿಲ್ಲದೆ ಇನ್ನೊಂದು ಕಡೆ ಇದ್ದ ಸಂಪತ್ತನ್ನು ಬೇರೆ ಉದ್ದೇಶಕ್ಕೋಸ್ಕರ ಉಪಯೋಗಿಸುತ್ತಾ ಬಂದರೆ ದನ ಸಾಕುವುದು ಹೇಗೆ, ಅವುಗಳ ಗೊಬ್ಬರ ಸಿಕ್ಕುವುದು ಹೇಗೆ?

ಮೂರನೆಯದಾಗಿ ಬೆಳೆದ ಬೆಳೆಯನ್ನು ಒಂದು ಕಾಲದಲ್ಲಿ ಜನರು ಕೊಂಡು ಅದನ್ನು ದಾಸ್ತಾನು ಮಾಡಿ ಕೃತಕ ಆಹಾರ ಅಭಾವವನ್ನು ಉಂಟುಮಾಡಿ ಅದನ್ನು ಹೆಚ್ಚು ಬೆಲೆಗೆ ಮಾರಾಟಮಾಡುವುದಕ್ಕೆ ಅವಕಾಶಮಾಡುತ್ತಾರೆ. ಆಹಾರಧಾನ್ಯಗಳನ್ನು ಸರ್ಕಾರದವರು ಸುಗ್ಗಿಯಕಾಲದಲ್ಲಿ ಕೊಂಡು ದಾಸ್ತಾನುಮಾಡಿ ಮಾರ್ಕೆಟ್ ರೇಟಿನಲ್ಲಿ ಅವನ್ನು ಮಾರಬೇಕು. 1952ನೆಯ ಇಸ್ವಿಯಲ್ಲಿ ಆಹಾರದ ಕಂಟ್ರೋಲ್ ತೆಗೆದಕೂಡಲೇ ಆಹಾರ ಅಭಾವ ಮಾಯವಾಯಿತು. ಆಗ ಕೃತಕ ಕ್ಷಾಮ ಬಂದು ಮಾರಾಟ ಮಾಡತಕ್ಕ ಸಾಮಾನುಗಳನ್ನು ಗೋಡೌನಿನಲ್ಲಿ ಹಾಕಿಕೊಂಡು ಹೆಚ್ಚಿಗೆ ಧಾರಣೆ ಬಂದಾಗ ಮಾರುತ್ತಿದ್ದರು. ಆದ್ದರಿಂದ ಕಂಟ್ರೋಲ್ ತೆಗೆದ ಕೂಡಲೇ ಹಳೆಯ ಮೈಸೂರು ಸಂಸ್ಥಾನದಲ್ಲಿ ಆಹಾರದ ಅಭಾವ ಇರಲಿಲ್ಲ.

ನಾಲ್ಕನೆಯದಾಗಿ ರೈತರ ಪರಿಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೆ ಸರ್ಕಾರ ಎಷ್ಟು ಪ್ರಯತ್ನ ಮಾಡುತ್ತದೋ ಅಷ್ಟು ಒಳ್ಳೆಯದಾಗುತ್ತದೆ ಮತ್ತು ಆಹಾರದ ಅಭಾವ ಕಡಮೆಯಾಗುತ್ತದೆ. ಸೊಸೈಟಿಗಳ ಮೂಲಕ ರೈತರಿಗೆ ಷಾರ್ಟ್ ಟರ್ಮ್ ಲೋನ್ ಕೊಟ್ಟು ಬೀಜ, ಗೊಬ್ಬರ, ಎತ್ತು ವಗೈರೆ ಒದಗಿಸಿಕೊಡಬೇಕು. ಇಂತಹ ಉದಾತ್ತ ಧ್ಯೇಯದಿಂದ ಕೂಡಿದ ಸರ್ಕಾರ್ ಸೊಸೈಟಿಗಳಿಗೆ ಒಂದು ಲಕ್ಷ ರೂಪಾಯಿ ಮಾತ್ರ ಒದಗಿಸಿದ್ದಾರೆ. ಫೆಬ್ರುವರಿಯಲ್ಲಿ ಷಾರ್ಟ್ ಟರ್ಮ್ ಲೋನ್ ಕೊಡದೆ ಡಿಫಾಲ್ಟ್ ಆದರೆ, ಡಿಸ್ಟ್ರಿಕ್ಟ್ ಬ್ಯಾಂಕಿನವರು ಏಪ್ರಿಲ್ ತಿಂಗಳಿಂದ ಸಾಲ ಕೊಡುವುದಿಲ್ಲ. ಯಾವ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಮಳೆ ಬಂದರೆ ಯಾವ ಯಾವ ಆಹಾರ ದಿನಸಿ ಬೆಳೆಯುತ್ತಾರೆ, ದುಡ್ಡಿನ ಬೆಳೆ ಬೆಳೆಯುತ್ತಾರೆ ಎನ್ನುವ ಸ್ಟ್ಯಾಟಿಸ್ಟಿಕ್ಸ್ ಇಟ್ಟುಕೊಂಡು ರೈತನಿಗೆ ನೆರವನ್ನು ಕೊಡಬೇಕು. ಉದಾಹರಣೆಗೆ ಪುನರ್ವಸು, ಪುಷ್ಯ ಮತ್ತು ಆರ್ದ್ರ ಮಳೆ ಬಂದರೆ, ರಾಗಿ ಬೆಳೆಯಬಹುದು, ಅಥವಾ ಹಸ್ತ, ಚಿತ್ತ ಇವು ಎರಡರಲ್ಲಿ ಮಳೆ ಬಂದರೂ ರಾಗಿ ಬೆಳೆಯಬಹುದು, ಪುನರ್ವಸು, ಪುಷ್ಯ, ಉತ್ತರ, ಹಸ್ತ ಮಳೆ ಬಾರದೆ ಇದ್ದರೆ ರಾಗಿ ಫಸಲು ಒಂದು ರೂಪಾಯಿಗೆ ಎರಡು ಆಣೆ ಕೂಡ ಆಗುವುದಿಲ್ಲ. ಅಶ್ವಿನಿ, ಭರಣಿಯಲ್ಲಿ ಮಳೆ ಬಂದರೆ ದುಡ್ಡಿನ ಬೆಳೆ ಬೆಳೆಯಬಹುದು. 12—18—50 ಇಂಚು ಮಳೆ ಬಂತು ಎಂದರೂ ಬೆಳೆ ಆಗುವುದಿಲ್ಲ. ಸರ್ಕಾರ ದುಡ್ಡು ಖರ್ಚುಮಾಡಿ ಪ್ರಾಜೆಕ್ಟ್ ಕಟ್ಟಿ ನೀರು ತಡೆದು ನಿಲ್ಲಿಸಿ ಬೇಸಿಗೆ ಕಾಲದಲ್ಲಿ ನೀರು ಒದಗಿಸಿದರೆ ಬತ್ತ ವಗೈರೆ ಬೆಳೆಯಬಹುದೇ ಹೊರತು ಸಣ್ಣಪುಟ್ಟ ಕೆರೆಗಳಿಂದ ಬತ್ತ ಬೆಳೆಯುವುದಿಲ್ಲ. ಹಳೆಯ ಮೈಸೂರು ಸಂಸ್ಥಾನದಲ್ಲಿ ಎಲ್ಲೆಲ್ಲಿ ಮಳೆ ಬಂದಿಲ್ಲವೋ ಅಲ್ಲಿ ಫೆಬ್ರುವರಿ ತಿಂಗಳೊಳಗೆ ಸಾಲ ವಾಪಸನ್ನು ಕೊಡದಿದ್ದರೆ ಮತ್ತೆ ಅವರಿಗೆ ಸಾಲ ಕೊಡುವುದಿಲ್ಲ. ಗೇಯುವ ಎತ್ತನ್ನು ಮಾರಿ ಸಾಲ ತೀರಿಸುತ್ತಾರೆ. ಹೀಗಾಗಿ ಮುಂದೆ ಬೆಳೆಯುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಬೆಳೆಯುತಕ್ಕ ರೈತನಿಗೆ ಕಾಲಕಾಲಕ್ಕೆ ಏನು ಬೇಕು ಎಂಬದನ್ನು ನೋಡಿ ಅವನಿಗೆ ಬೇಕಾದ ನೆರವನ್ನು ಕೊಟ್ಟರೆ ಖಂಡಿತ ಶೇಕಡ 85ರಷ್ಟು ಜನ ವ್ಯವಸಾಯಮಾಡುವ ದೇಶದ ಮಕ್ಕಳು ವಾಸ ಮಾಡುವ ಭೂಮಿಯಲ್ಲಿ ನಮಗೆ ಸಾಕಷ್ಟು ಆಹಾರವನ್ನು ಬೆಳೆಯುತ್ತಾರೆ. ಈಗ ದೇಶದಲ್ಲಿ ಆಹಾರ ಅಭಾವಕ್ಕೆ ರೈತರ ಅಲಕ್ಷ್ಯವೇ ಕಾರಣ ಎಂದು ಹೇಳಿ, ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

*Sri F. H. MOHSIN (Hubli City).—Mr. Speaker, Sir, I wish to state a few words in connection with the food situation of out State and give some suggestions. The very fact that we are discussing food situation of the State today indicates that our food condition is not satisfactory. Our Hon'ble Minister for Revenue has been optimistic about the food situation of the State because of the recent rainfall throughout the State. I have had the opportunity of visiting some places in the old Mysore State recently and seeing the crop condition. I cannot but say that we cannot get as much crop as our Minister expects. Even last year it so happended that in serveral areas there was scarcity of food. We now see that fair price shops are opened here and there. When the Minister for Food, Government of India, toured in North Karnatak areas, it was represented to him that jawar was the main crop in North

Karnatak areas and as the crop had failed, it was necessary for the Government to take immediate steps to procure jawar and stock it and distribute to people in scarcity areas. No steps were taken to stock this article. I need not state that this is the staple food in North Karnatak areas because the Revenue Minister comes from that area and fully knows it.

Sri M. P. PATIL (Minister for Revenue).—But, wherefrom to bring jawar?

Sri F. H. MOHSIN.—Even the Hon'ble Deputy Minister for Food to Government of India said it was very difficult to procure jawar because it was grown only in Karnatak areas. Of course, it would be difficult. That is why I want to suggest that jawar could be procured either from Maharastra or from Bombay area. Also, Government must see that more jawar is grown in those areas. As prevention is better than cure, instead of procuring here and there to supply to the people in the affected areas, it would be much better that we should have improved means of agriculture and try to grow more jawar and also other food grains. In this connection I wish to state that this can only be done by improving the method of agriculture which is unknown to our agriculturists. By Japanese method of agriculture we can grow more paddy. That is a universally admitted thing. If our agriculturists are properly guided in the matter, we can hope to grow more jawar by these modern methods. When compared to old Mysore area, lands in North Karnatak areas are more fertile. But, it is so unfortunate that there are no irrigation schemes for those areas. I suggest that minor irrigation works costing one or two lakhs may be undertaken in those areas. We are happy to see that many irrigation schemes have been undertaken in the old Mysore State. It is only due to the Maharaja and the best administrators that we see so many irrigation schemes in old Mysore and several lakhs of acres of dry and barren lands have been turned into fertile land. We can do this in North Karnatak area also. In every aluk if we spend one or two lakhs for minor irrigation works, I think our State would no more be a scarcity State. Bijapur District alone can supply foodgrains for the whole of the State. We have such fertile lands there. But, because of scarcity of water supply this scarcity exists. This is the time for us to think about permanent measures so that we may put an end to such contingency arising every year. The Hon'ble Minister stated that wheat stock is satisfactory and rice stock is also good. But, I appeal to him to keep in stock jawar also. We must purchase jawar from the areas where jawar is grown more and stock it and supply it so those who use it as the staple food. In the old ration days I have seen that jawar was supplied to people who were not accustomed to it and rice was supplied to those who were not using rice as their staple food. This should not happen again. We must take into consideration the main food grains used in a particular area.

There are fair price depots here and there. Hubli City having a population of a lakh and more has only three such depots. Can these three depots cater to the needs of the city? Moreover, we should see that whatever grain that is supplied to the depots is properly distributed to the people. It should not go only to a favoured few. Government should see that especially poor people are not put to any difficulty in getting foodgrains from the depots. They must derive the full advantage of these depots.

My friend Dr. Nagan Gowda suggested about the improvement of fishery industry and the poultry industry to solve the food problem. It is a very good suggestion. Along with that I may add that the Prevention of Cow Slaughter Act may be repealed. There is a non-official resolution to say that this Act should be made applicable to the whole State. Sir, when we are meeting such a grave situation, it is time for us to reconsider the question. There are so many persons who eat beef. Of course, I am not a beef eater nor any one of my family. But there are thousands who are beef eaters and they are denied of that food. It may also create some food scarcity. I am surprised

(SRI F. H. MOHSIN)

to see that the definition of cow includes buffalo also. Of course, I know that cow is a sacred animal to Hindus. But at the same time we are in a secular State. Why should we deny it to those who eat it, especially cows which are useless and which yield no milk? Moreover, this will solve the fodder problem also. It has been stated that there is not only food problem but there is fodder problem also. If we reconsider the Act, we can solve the food problem as well as fodder problem to some extent. I cannot see any reason why slaughter of buffalo should be prohibited. As far as I know, nobody worships buffalo.

Sri C. K. RAJAIAH SHETTY (Chiknaikanahalli).—Are there people who eat buffalo?

Sri F. H. MOHSIN (Hubli City).—My friend knows there are so many who eat so many things, why only buffalo. So, Sir, we must reconsider that Act and think of repealing it.

In summary of all this, I may state that there should be improved means of agriculture and improving fishery industry and poultry industry should be also developed. Small irrigation schemes should be taken up and the Cow Slaughter Act will have to be reconsidered.

*ಶ್ರೀ ಎಂ. ರಾಮಪ್ಪ (ಹರಿಹರ). ಸ್ವಾಮಿ, ನಿನ್ನೆ ಮತ್ತು ಈ ದಿವಸ ಯಾವ ರಾಜಕೀಯ ಪಕ್ಷದ ವ್ಯತ್ಯಾಸವಿಲ್ಲದೆ ಮಾನ್ಯ ಸದಸ್ಯರು ಕ್ಷಾಮ ಪರಿಸ್ಥಿತಿ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದರೆ ನನ್ನ ಮಾನ್ಯ ಸ್ನೇಹಿತರಲ್ಲಿ ಕೆಲವರು ಪ್ರಕೃತಿ ವಿಕೋಪ ಇದಕ್ಕೆ ಕಾರಣ ಮತ್ತು ಬೇರೆ ಯಾರೂ ಕಾರಣರಲ್ಲವೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುವುದಿಲ್ಲ. ಇವತ್ತಿನ ದಿವಸ ನಮ್ಮ ರೆವಿನ್ಯೂ ಮಂತ್ರಿಗಳು ಅಥವಾ ವ್ಯವಸಾಯ ಮಂತ್ರಿಗಳು ಕಾರಣರಾಗಿಲ್ಲದೆ ಇರಬಹುದು. ಈಗಿನ ಆಡಳಿತ ಪಕ್ಷದವರು ಇವತ್ತಿನ ದಿವಸ ಕಾರಣರು ಅಲ್ಲದೇ ಇರಬಹುದು. ಆದರೆ ಹತ್ತು ವರ್ಷಗಳಿಂದಲೂ ಕೇಂದ್ರ ಸರ್ಕಾರ ಮತ್ತು ನಮ್ಮ ಸಂಸ್ಥಾನದಲ್ಲಿದ್ದ ಆಡಳಿತ ಪಕ್ಷದವರೇ ಇದಕ್ಕೆ ಕಾರಣರು ಎಂದು ಹೇಳಿದರೆ ತಾವೆಲ್ಲರೂ ಒಪ್ಪಿಕೊಳ್ಳಬೇಕು. ನಮ್ಮ ವ್ಯವಸಾಯ Gambling in rain ಎಂದರೆ ಮಳೆಯೊಡನೆ ಒಂದು ಜೂಜು ಎಂದು ನೂರಾರು ವರ್ಷಗಳ ಹಿಂದೆಯೇ ನಮ್ಮ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ. ನಮ್ಮ ಆಡಳಿತ ಪಕ್ಷದವರೂ ನಮ್ಮ ವ್ಯವಸಾಯ ಮಳೆಯೊಡನೆ ಒಂದು ಜೂಜು ಎಂದು ಒಪ್ಪಿಕೊಂಡಿದ್ದಾರೆ. ಕೇಂದ್ರ ಸರ್ಕಾರದ ಪ್ಲಾನಿಂಗ್ ಕಮಿಷನ್ನಿನವರು ಏತಕ್ಕೋಸ್ಕರ ಇದರ ಪರಿಹಾರಕ್ಕೆ ಒಂದು ಅವಕಾಶವನ್ನುಂಟುಮಾಡಲಿಲ್ಲ! ಇವತ್ತಿನ ದಿವಸ ಇಂಡಿಯಾ ದೇಶದಲ್ಲಿ ಕ್ಷಾಮ ಬಂದರೆ, ಅದಕ್ಕೆ ಕೇಂದ್ರ ಸರ್ಕಾರ ಕಣ್ಣು ಮುಚ್ಚಿಕೊಂಡು ಅನುಸರಿಸತಕ್ಕ ನೀತಿಯೇ ಕಾರಣವೆಂದು ಧೈರ್ಯದಿಂದ ಹೇಳುತ್ತೇನೆ. ಪ್ಲಾನಿಂಗ್ ಕಮಿಷನ್ನಿನಲ್ಲಿರತಕ್ಕ ಸದಸ್ಯರು ಪಾಂಚವಾರ್ಷಿಕ ಯೋಜನೆಗಳನ್ನು ತಯಾರು ಮಾಡುವಾಗ ಕಣ್ಣುಮುಚ್ಚಿಕೊಂಡು ಈ ಯೋಜನೆಗಳನ್ನು ಮಾಡುತ್ತಿದ್ದಾರೆಂದು ನನಗೆ ಸಂಶಯವಾಗಿದೆ. ಅನೇಕ ಪಕ್ಷದವರಿಗೆ ಮತ್ತು ಆಡಳಿತ ಪಕ್ಷದವರಿಗೆ ಇದು ಅನುಭವಕ್ಕೆ ಬಂದಿರಬಹುದು. ನಿಜವಾಗಿಯೂ ಹಳ್ಳಿಗಾಡಿನಲ್ಲಿರುವವರು ಮತ್ತು ಪೂರ್ಣ ಅನುಭವವಿದ್ದವರು ಆ ಕಮಿಷನ್ನಿನಲ್ಲಿದ್ದುದೇ ಆದರೆ, ಈ ರೀತಿ ಆಗುತ್ತಿರಲಿಲ್ಲ. ವ್ಯವಸಾಯಗಾರರು ನಿಜವಾಗಿ ಮಳೆಯನ್ನೇ ಆಧಾರವಾಗಿಟ್ಟುಕೊಂಡು ಕೆಲಸಮಾಡುವಾಗ ಅದಕ್ಕೆ ಎಷ್ಟು ಪ್ರಾಮುಖ್ಯತೆಯನ್ನು ಕೊಡಬೇಕೋ ಅಷ್ಟನ್ನು ಪಾಂಚವಾರ್ಷಿಕ ಯೋಜನೆಯಲ್ಲಿ ಕೊಟ್ಟಿಲ್ಲ. ಯೋಜನೆಗಳನ್ನು ಯಾವ ರೀತಿ ತಯಾರುಮಾಡುತ್ತಾರೆ, ರಾಜ್ಯ ಸರ್ಕಾರಗಳ ಅಭಿಪ್ರಾಯ ಹೇಗೆ ತೆಗೆದುಕೊಳ್ಳುತ್ತಾರೆನ್ನುವುದು ಗೊತ್ತಾಗುವುದಿಲ್ಲ. ಒಂದು ಪಕ್ಷ ಇವರ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಅವರು ಯೋಜನೆಗಳನ್ನು ತಯಾರಿಸಿದರೆ ರಾಜ್ಯ ಸರ್ಕಾರದವರು ಕಣ್ಣುಮುಚ್ಚಿಕೊಂಡು ಅದನ್ನೇ ಅನುಸರಿಸುತ್ತಾರೆ. ಇಲ್ಲಿನ ಪರಿಸ್ಥಿತಿ ಏನಿದೆ ಅದನ್ನು ಕೇಂದ್ರ ಸರ್ಕಾರದ ಪ್ಲಾನಿಂಗ್ ಕಮಿಷನ್ನಿನವರಿಗೆ ತಿಳಿಸುವ ಶಕ್ತಿ, ಅನುಭವ ಇಲ್ಲದೇ ಇರಬಹುದು. ಒಂದುವೇಳೆ ಅವರು ಕೇಳಿದರೆ ಇವರೇ ಅವರಿಗೆ ಸರಿಯಾದ ಸಲಹೆ ಕೊಟ್ಟಿಲ್ಲವೆಂದು ಕೇಂದ್ರ ಸರ್ಕಾರ ಹೇಳಬಹುದು. ಆಡಳಿತಪಕ್ಷದವರು ಹತ್ತು ವರ್ಷಗಳಿಂದಲೂ ನಿಜವಾಗಿಯೂ ಪ್ರಕೃತಿಯ ವಿಕೋಪದಿಂದ ಆಹಾರ ಅಭಾವ ಉಂಟಾಗಿದೆಯೆಂದು ಹೇಳಿದರೆ ನಾನು ಒಪ್ಪುವುದಿಲ್ಲ. ಮಳೆ ಫೇಲ್ ಆಗುತ್ತದೆ ಎನ್ನುವುದು ನಮಗೆ ಗೊತ್ತಿದೆ. ಅದಕ್ಕೋಸ್ಕರ ಒಂದು ಪಾಂಚವಾರ್ಷಿಕ ಯೋಜನೆಯನ್ನು ಮಾಡಿದ್ದೀರಾ? ಅನೇಕ ಇರ್ರಿಗೇಷನ್ ಪ್ರಾಜೆಕ್ಟುಗಳಿಗೆ ಸಾಕಷ್ಟು ಪ್ರಾಶಸ್ತ್ಯ ಕೊಟ್ಟಿಲ್ಲ. ಉದಾಹರಣೆಗೆ, ಭದ್ರಾಪ್ರಾಜೆಕ್ಟು ಪೂರ್ತಿ ಆಗಿದ್ದರೆ ಚಿತ್ರದುರ್ಗ ಡಿಸ್ಟ್ರಿಕ್ಟಿನ ನಾಲ್ಕೈದು ತಾಲ್ಲೂಕುಗಳಲ್ಲಿ ಕ್ಷಾಮ ಪರಿಸ್ಥಿತಿಯೇ ಬರುತ್ತಿರಲಿಲ್ಲ. ಹತ್ತು ವರ್ಷಗಳಲ್ಲಿ ಮುಗಿಸುತ್ತೇವೆ ಎಂದು ಹೇಳಿ ಅದನ್ನು 1947ರಲ್ಲಿ ಪ್ರಾರಂಭ ಮಾಡಿದರು; 1957ನೆಯ ಇಸವಿ ಮುಗಿಯುತ್ತಾ ಬಂತು. ಈಗ 1961ಕ್ಕೆ ಮುಗಿಸುತ್ತೇವೆ ಎಂದು ಹೇಳುತ್ತಾರೆ. ಅದು ಎಷ್ಟರಮಟ್ಟಿಗೆ ಮುಗಿಯುತ್ತದೋ ನನಗೆ ಗೊತ್ತಿಲ್ಲ. ಮಳೆಯಾದರೆ ಕ್ಷಾಮ ಪರಿಸ್ಥಿತಿ ಬರುವುದಿಲ್ಲವೆಂದು ಬಿದರ್ ಜಿಲ್ಲೆಯಿಂದ ಬಂದಿರುವವರಲ್ಲಿ ಕೆಲವರು ಹೇಳಿದ್ದಾರೆ. ಇರ್ರಿಗೇಷನ್ ಪ್ರಾಜೆಕ್ಟುಗಳನ್ನು ಪ್ರಾರಂಭಮಾಡಿದರೆ, ನಿಜವಾಗಿ ಕ್ಷಾಮ ಬರುವುದಿಲ್ಲ. ಆದರೆ ಇರ್ರಿಗೇಷನ್ ಪ್ರಾಜೆಕ್ಟುಗಳಿಗೆ ಅಷ್ಟಾಗಿ ಸರ್ಕಾರದವರು ಗಮನ ಕೊಟ್ಟಿಲ್ಲ.

ಶ್ರೀ ಎಂ. ಪಿ. ಪಾಟೀಲ್.—ಬಿಜಾಪುರ ಜಿಲ್ಲೆಗೆ ಪಾಂಚವಾರ್ಷಿಕ ಯೋಜನೆಯಲ್ಲಿ ಸುಮಾರು ಎಂಟು ಕೋಟಿ ರೂಪಾಯಿಗಳನ್ನು ಇರ್ರಿಗೇಷನ್‌ಗೋಸ್ಕರ ಒದಗಿಸಲಾಗಿದೆ.

ಶ್ರೀ ಎಂ. ರಾಮಪ್ಪ.—ಎಂಟು ಕೋಟಿ ರೂಪಾಯಿಗಳು ಸಾಲದು. ಈಗ ಕ್ಷಾಮ ಬಂದಿದೆ. ನಿಜವಾಗಿ ದೇಶಾಭಿಮಾನವಿದ್ದರೆ, ಗಾಂಧೀಭಕ್ತರೆಂದೆನಿಸಿಕೊಂಡಿದ್ದರೆ, ಟಿ. ಎ. ಇಲ್ಲದೆ ಮಂತ್ರಿಗಳಾದ ನೀವು ಟೂರ್ ಮಾಡಿ. ಸರ್ಕಾರದವರು ಟಿ. ಎ. ಮತ್ತು ಡಿ. ಎ. ಅಲೋಯನ್ಸ್ ಕೊಡದೇ ಇದ್ದರೂ ಪರವಾಗಿಲ್ಲವೆಂದು ಮಂತ್ರಿಗಳು ಟೂರ್ ಮಾಡಲು ತಯಾರಾಗಿ

ದ್ದಾರೆಯೇ ? ದೇಶಾಭಿಮಾನವಿದ್ದರೆ, ಅವುಗಳನ್ನು ಬಿಟ್ಟು, ನೀವು ಟೂರ್‌ಮಾಡಿ, ಎಲ್ಲಿ ಕ್ಷಾಮ ಪರಿಸ್ಥಿತಿ ಯುಂಟಾಗಿದೆ ಎಂಬುದನ್ನು ನೋಡಿ ಪರಿಹಾರ ಕ್ರಮ ವನ್ನು ಕೈಗೊಳ್ಳಿ. ತಿಂಗಳಿಗೆ ಟೂರ್‌ಮಾಡುವುದ ಕ್ಕೋಸ್ಕರ ಐದು ಸಾವಿರ ರೂಪಾಯಿಗಳನ್ನು ತೆಗೆದು ಕೊಂಡರೆ ಏನು ಪ್ರಯೋಜನ ?

Sri M. P. PATIL.—How does the question of T.A. arise in this case Sir? The Hon'ble Member may be rich and he may not require T.A. for touring. There are many poor people among Ministers who may require T.A.

Sri M. RAMAPPA.—Under this pretext let them not draw huge sums as T. A. That is my suggestion. ಕೇವಲ ರಿಪೋರ್ಟ್ ತರಿಸಿಕೊಂಡರೆ ಸಾಲದು. ಐ.ಎ.ಎಸ್. ಆಫೀಸರುಗಳು ರೈತರ ಸ್ನೇಹಿತರಲ್ಲ. ಅವರು ರೈತರ ಶತ್ರುಗಳು ಎಂದು ಹೇಳುವುದಕ್ಕೆ ನಾನು ಹಿಂಜರಿಯುವುದಿಲ್ಲ. ನಾನು ಎಷ್ಟೋ ಕಡೆ ತಿರುಗಾಡಿದ್ದೇನೆ. ಅವರು ನಿಜವಾಗಿ ರೈತರ ಸ್ನೇಹಿತರಲ್ಲ. ಸುಮ್ಮನೆ ಟೂರ್‌ಮಾಡಿ ಅಲ್ಲಿ ಕ್ಷಾಮಪರಿಸ್ಥಿತಿ ಇದೆ, ಇಲ್ಲಿ ಕ್ಷಾಮ ಪರಿಸ್ಥಿತಿ ಇದೆ ಎಂದು ಹೇಳಿ ಫೇರ್‌ಪ್ರೈಸ್ ಡಿಪೋಗಳನ್ನು ಓಪನ್ ಮಾಡಿದರೆ ಸಾಲದು. ರೈತರಿಗೆ ಮತ್ತು ಕೂಲಿಗಾರರಿಗೆ ಅದನ್ನು ಕೊಂಡುಕೊಳ್ಳುವ ಶಕ್ತಿ ಇಲ್ಲ. ಅಂತಹ ಪ್ರದೇಶಗಳಲ್ಲಿ ರಿಲೀಫ್ ಕಾಮಗಾರಿಗಳನ್ನು ಪ್ರಾರಂಭಮಾಡಿ. ಸುಮ್ಮನೆ ಮೂರು ಕಾಸು ಕೆಲಸವನ್ನೂ ಮಾಡದೆ ಸರ್ಕಾರದಿಂದ ಈ ಬಾಬಿಗೆ ದುಡ್ಡು ತೆಗೆದುಕೊಂಡಿದ್ದಾರೆ. ಆದ್ದರಿಂದ ಜವಾಬ್ದಾರೀ ಜನರನ್ನು ನೇಮಿಸಿ, ಪರ್ಮನೆಂಟ್ ವರ್ಕ್ಸ್‌ನ್ನು ಮಾಡಿಸಬೇಕು. ಅವರಿಗೆ ದುಡ್ಡು ಕೊಡಬೇಕೆಂದು ಹೇಳಿ ಟೆಂಪೊರರಿ ವರ್ಕ್ಸ್‌ನ್ನು ಮಾಡಬೇಡಿ. ಸರಿಯಾದ ಯೋಜನೆಗಳನ್ನು ಹಾಕಿಕೊಂಡು ರಿಲೀಫ್ ಕಾಮಗಾರಿಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ ನೀವು ಖುದ್ದಾಗಿ ಟೂರ್‌ಮಾಡಿ. ಚರ್ಚೆಗೆ ಉತ್ತರ ಕೊಡುವಾಗ ಈ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ಕೊಡಬೇಕು. ಬರೀ ವಾದಿಸುವುದನ್ನು ಬಿಡಿ. ನಾವು ಹೇಳುವುದರಲ್ಲಿ ಸತ್ಯಾಂಶವಿದೆಯೆಂಬುದನ್ನು ಒಪ್ಪಿಕೊಂಡು ಏನೇನು ಮಾಡಬೇಕೋ ಅದನ್ನು 15 ದಿವಸ ಗಳೊಳಗಾಗಿ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಜತ್ತಿ ಸಮಿತಿಯ ವರದಿಯನ್ನು ಆದಷ್ಟು ಜಾಗ್ರತೆ ಕಾರ್ಯಗತಮಾಡಬೇಕು. ಈಗಾಗಲೇ ವರದಿಯನ್ನು ಸಲ್ಲಿಸಿದ್ದಾರೆ. ಇದನ್ನು ಕೆಲವು ಗುಂಪಿನವರು ಒಪ್ಪಿ ಕೊಳ್ಳಕೂಡದು ಎಂಬುದಾಗಿ ಹೇಳುತ್ತಿರುವುದು ನನಗೆ ತಿಳಿದುಬಂದಿದೆ. ಆದರೆ ಆ ಸಮಿತಿಯ ವರದಿ ಬಹಳ ಪ್ರಗತಿದಾಯಕವಾಗಿದೆ. ಇದನ್ನು ಒಮ್ಮತ ದಿಂದ ನಾವು ಕೊಟ್ಟಿದ್ದೇವೆ. ಆದಷ್ಟು ಜಾಗ್ರತೆ ಇದನ್ನು ಜಾರಿಗೆ ತಂದು ಆಹಾರ ಪರಿಸ್ಥಿತಿಯನ್ನು ಉತ್ತಮಗೊಳಿಸಿ ಕ್ಷಾಮ ಪರಿಸ್ಥಿತಿಯನ್ನು ನಿವಾರಣೆ ಮಾಡುತ್ತೀರೆಂದು ನಂಬಿದ್ದೇನೆ.

ಶ್ರೀ ಕೆ. ಎಲ್. ನರಸಿಂಹಯ್ಯ (ಹೆಬ್ಬೂರು).— ಸ್ವಾಮಿ, ಈಗಾಗಲೇ ಈ ಮಾನ್ಯ ಸಭೆಯಲ್ಲಿ ದೇಶದಲ್ಲಿ ಈ ದಿವಸ ಇರತಕ್ಕ ಆಹಾರದ ಪರಿಸ್ಥಿತಿ ಮತ್ತು ಅಲ್ಲಲ್ಲೆ ತಲೆದೋರಿರುವ ಕ್ಷಾಮ ಪರಿಸ್ಥಿತಿಯ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಆದರೆ ಈ ಒಂದು ಪರಿಸ್ಥಿತಿಗೆ ಮೊಟ್ಟ ಮೊದಲನೆಯದಾಗಿ ಪಿ. ಡಬ್ಲ್ಯು. ಡಿ. ಮೂಲಕಾರಣ ವೆಂದು ನನಗನ್ನಿಸುತ್ತಿದೆ. ಏತಕ್ಕೆಂದರೆ ಈ ಇಲಾಖೆ ಯವರು ತಮ್ಮ ಕೆಲಸಕಾರ್ಯಗಳನ್ನು ಸರಿಯಾಗಿ ಮಾಡಿದ್ದರೆ ಈ ಹೊತ್ತು ದೇಶದಲ್ಲಿ ಈ ಆಹಾರದ ಅಭಾವವಾಗಲಿ ಅಥವಾ ಈ ಕ್ಷಾಮಭಯವಾಗಲಿ ಇರಲು ಕಾರಣವಿರಲಿಲ್ಲ. ಇನ್ನು ಎರಡನೆಯದಾಗಿ ಸ್ವಲ್ಪ ಮಟ್ಟಿಗೆ ಜಿಲ್ಲಾಧಿಕಾರಿಗಳು ಮತ್ತು ಡಿವಿಜನ್ ಅಧಿಕಾರಿಗಳೂ ಕಾರಣರೆಂದು ಹೇಳಬೇಕಾಗಿದೆ. ಮೊನ್ನೆ ತಾನೆ ನಮ್ಮ ಕೊರಟಗೆರೆ ತಾಲ್ಲೂಕಿಗೆ ಸಂಬಂಧಪಟ್ಟ ಡಿವಿಜನ್ ಅಧಿಕಾರಿಗಳು ಅಲ್ಲಿಗೆ ಬಂದಿದ್ದರು. ಕೊರಟಗೆರೆ ತಾಲ್ಲೂಕಿನಲ್ಲಿ ಸರಿಯಾಗಿ ಮಳೆ ಬೆಳೆಗಳಾಗಿಲ್ಲ. ಆ ಪರಿಸ್ಥಿತಿಯನ್ನು ಅಧಿಕಾರಿಗಳು ಮನಗಾಣಬೇಕಾಗಿದೆ. ಆದುದರಿಂದ ಅವರನ್ನು ಚೆನ್ನಾಗಿ ಟಾರ್ ಹಾಕಿದ್ದ ರಸ್ತೆಯಲ್ಲಿ ಪ್ರಯಾಣ ಮಾಡುವುದಕ್ಕೆ ಬದಲಾಗಿ ಬೇರೊಂದು ರಸ್ತೆಯಿದೆ, ಆ ರಸ್ತೆಯಲ್ಲಿ ಅವರನ್ನು ಪ್ರಯಾಣಮಾಡಬೇಕೆಂದು ಕೇಳಿಕೊಂಡಿದ್ದೆ. ಅದರಲ್ಲಿ ಪ್ರಯಾಣ ಮಾಡಿದರೆ ಅವರಿಗೆ ಜನರಿಗಿರತಕ್ಕ ಕುಂದುಕೊರತೆಗಳೇನೆಂಬು ದನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆಂದು ತಿಳಿಸಿದೆನು. ಆದಾಗ್ಯೂ ಆ ಅಧಿಕಾರಿಗಳು ಟಾರ್ ರಸ್ತೆಯಲ್ಲಿ ಪ್ರಯಾಣ ಹೋದರೇ ಶಿವಾಯಿ ನಾನು ಹೇಳಿದ ರಸ್ತೆಯಲ್ಲಿ ಅವರು ಪ್ರಯಾಣ ಮಾಡಲಲ್ಲ. ಸ್ಥಳೀಯ ಮುಖಂಡರು ಹೇಳಿದ್ದನ್ನು ನಂಬಬೇಕು. ಇಲ್ಲವೇ ಅವರೇ ಸ್ವತಃ ಹೋಗಿ ಇಂತಿಷ್ಟು ಪ್ರದೇಶದಲ್ಲಿ ಮಳೆ ಬೆಳೆಗಳಾಗಿಲ್ಲ ಎಂಬುದನ್ನು ಪರಿಶೀಲನೆ ಮಾಡಿ ಕೊಂಡು ಬರಬೇಕು. ದೇಶದ ಪರಿಸ್ಥಿತಿ ಏನಿದೆಯೆಂಬು ದನ್ನು ತಿಳಿಯಲು ಇರತಕ್ಕದ್ದು ಈ ಎರಡು ಮಾರ್ಗ ಗಳು ಮಾತ್ರ. ಈ ಮಾರ್ಗಗಳೇನಿವೆಯೋ ಇವುಗಳನ್ನು ಕೈಬಿಟ್ಟು ಈ ಸರ್ಕಾರದ ಸ್ಟ್ಯಾಟಿಸ್ಟಿಕಲ್ ಇಲಾಖೆಯ ವರು 'ಬೆಳೆಯಾಗಿದೆ ಮತ್ತು ಆಹಾರ ಸಾಮಗ್ರಿ ಗಳು ಇಷ್ಟಿಷ್ಟು ಪಲ್ಲಾ ಇದೆ' ಎಂದು ಹೇಳಿಬಿಡು ತ್ತಾರೆ. ನಮ್ಮ ಮಂತ್ರಿಗಳು ಅದನ್ನೇ ನಂಬಿಬಿಡು ತ್ತಾರೆ. ಆದರೆ ಇವರ ಅಂಕಿ ಅಂಶಗಳ ಸತ್ಯಾಸತ್ಯತೆ ಆ ಪರಮಾತ್ಮನಿಗೇ ಗೊತ್ತಾಗಬೇಕು. ಈ ಅಂಕಿ ಅಂಶ ಗಳನ್ನು ಹೊರಡಿಸತಕ್ಕ ಇಲಾಖೆಯವರು ನಮ್ಮ ದೇಶ ದಲ್ಲಿ ಸೆಪ್ಟಂಬರ್ ತಿಂಗಳಿನ ತನಕ ಆಗುವಷ್ಟು ಆಹಾರ ಬೇಕಾಗಿರುತ್ತದೆ ಎಂದು ಇಂಡಿಯಾ ಸರ್ಕಾರಕ್ಕೆ ತಿಳಿ ಸಿದ್ದರು. ಅದಕ್ಕಾಗಿ ಮಂತ್ರಿಗಳು ಆಹಾರ ಸಾಮಗ್ರಿಗಳ ಸರಬರಾಯಿಗಾಗಿ ಯಾತ್ರೆ ಹೊರಡ ಬೇಕಾಯಿತು. ಆದರೆ ಅವರು ಆ ದಿವಸ ಹಾಗೆ ಆಹಾರಕ್ಕಾಗಿ ಭಿಕ್ಷಾ ಪಾತ್ರೆಹಿಡಿದು ಹೊರಟವರು ಈ ದಿವಸದವರೆಗೂ ಅವರ ಯಾತ್ರೆ ನಿಂತಿಲ್ಲ; ಮತ್ತು ಈ ಯಾತ್ರೆ ಯಾವತ್ತು ನಿಲ್ಲುತ್ತದೋ ನನಗೆ ಅದು ಗೊತ್ತಾಗದು. ಆದರೆ, ಕೇಂದ್ರ ಸರ್ಕಾರದವರೇನೋ ಅಷ್ಟಿಷ್ಟು ಆಹಾರ ಧಾನ್ಯಗಳನ್ನು ಸರಬರಾಯಿಮಾಡು ತ್ತಿದ್ದಾರೆ. ಅದು ನಮಗೆ ಏತಕ್ಕೂ ಸಾಲದು. ಈ ದಿವಸ ಸರ್ಕಾರದವರು ತೆರೆದಿರುವ ಈ ಫೇರ್ ಪ್ರೈಸ್ ಡಿಪೋಗಳಾದರೂ ದೇಶಾದ್ಯಂತವೂ ಇರುತ್ತವೆಯೇ ಎಂದು ಕೇಳಿದರೆ ಅದೂ ಸಹ ಇಲ್ಲ. ನಮ್ಮ ತುಮ ಕೂರು ಕಸಬಾದಲ್ಲಿ ಈ ಫೇರ್ ಪ್ರೈಸ್ ಡಿಪೋಗಳು ಎರಡೇ ಎರಡು ಇವೆ. ಈ ಡಿಪೋಗಳಲ್ಲಿ ಮಾರಾಟ ಮಾಡುವ ಅಕ್ಕಿ-ಗೋಧಿಯು ಯಾರಿಗೆ ಸಿಕ್ಕುತ್ತದೆ ಎಂದರೆ ತುಮಕೂರು ಟೌನಿನಲ್ಲಿ ವಾಸಮಾಡತಕ್ಕ ಜನರಿಗೆ ಮಾತ್ರ ದೊರೆಯುತ್ತಿದೆ. ಆದರಲ್ಲೂ ಧಾರಾಳ ವಾಗಿ ಯಾರಿಗೆ ದೊರೆಯುತ್ತಿದೆಯೆಂದರೆ ಆ ಸ್ಥಳದಲ್ಲಿರ ತಕ್ಕ ಅಧಿಕಾರವರ್ಗದವರಿಗೆ ಮಾತ್ರ. ಈ ಡಿಪೋ ಗಳನ್ನು ಅಲ್ಲಿ ನಡೆಸುತ್ತಿರುವವರು ಕಾಲಕ್ಕೆ ಸರಿಯಾಗಿ ಅವುಗಳನ್ನು ತೆರೆದು ಕಾಲಕ್ಕೆ ಸರಿಯಾಗಿ ಅವುಗಳನ್ನು ಮುಚ್ಚಿಬಿಡುತ್ತಾರೆ, ಹೀಗೆ ಹೆಸರಿಗೆ ಮಾತ್ರ ತುಮ

(ಶ್ರೀ ಕೆ. ಎಲ್. ನರಸಿಂಹಯ್ಯ)

ಕೂರಿಗೂ ಎರಡು ಫೇರ್ ಪ್ರೈಜ್ ಡಿಪೋಗಳನ್ನು ಕೊಡಲಾಗಿದೆ ಎಂದು ಹೇಳಲು ಸರ್ಕಾರದವರಿಗೆ ಒಂದು ದಾರಿ ಆಯಿತೇವಿನಾ ಇವುಗಳಿಂದ ದೊರೆಯುವ ಅನುಕೂಲ ಆ ಹಳ್ಳಿ ರೈತರಿಗೇನೂ ಸಿಕ್ಕುವಹಾಗಿಲ್ಲ. ಇವುಗಳ ಅನುಕೂಲವೇನಿದ್ದರೂ ಈ ಹೊತ್ತು ಆ ಅಧಿಕಾರಿಗಳಿಗೆ ಮಾತ್ರ ದೊರೆಯುತ್ತಿದೆ. ಸರ್ಕಾರದವರಿಗೆ ಈ ಡಿಪೋಗಳ ಅನುಕೂಲ ಹಳ್ಳಿಯವರಿಗೆ ಸಿಕ್ಕುವಂತೆ ಮಾಡಬೇಕೆಂಬ ಇಚ್ಛೆಯಿದ್ದರೆ ಇವರು ಮೊದಲು ಹಳ್ಳಿಯ ಜನರಿಗೆ ಕೆಲಸ ದೊರೆಯುವಂಥ ಒಂದು ಏರ್ಪಾಡನ್ನು ಮಾಡಬೇಕು.

ಹೀಗೆ ಮಾಡಿದರೆ ಆ ಜನರಿಗೆ ನಾಲ್ಕು ಕಾಸುಗಳ ಕೂಲಿಯನ್ನು ಸಂಪಾದಿಸಲು ಮಾರ್ಗವಾಗುತ್ತದೆ. ಈ ಒಂದು ಮಾರ್ಗವನ್ನು ಬಿಟ್ಟರೆ ಆ ಹಳ್ಳಿಯ ಬಡ ಜನರಿಗೆ ಉಪಕಾರಮಾಡಲು ಮತ್ತೊಂದು ಮಾರ್ಗವೇ ಇರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಈ ದಿವಸ ನಮ್ಮ ತುಮಕೂರು ತಾಲ್ಲೂಕಿಗೆ ಕೆರೆ ಕಾಂಗಾರಿ ಮತ್ತು ರಸ್ತೆಗಳ ಕಾಂಗಾರಿ ಬಗ್ಗೆ $2\frac{1}{2}$ ಲಕ್ಷ ರೂಪಾಯಿಗಳ ಹಣವನ್ನು ಮಂಜೂರ್ಮಾಡಿದ್ದಾರೆ. ಆದಾಗ್ಯೂ ಆ ಕೆರೆಗಳ ರಿಪೇರಿ ಕೆಲಸವಾಗದೆ ಅವುಗಳೆಲ್ಲಾ ಹಾಗೆಯೇ ಬಿದ್ದಿವೆ. ಈ ವಿಚಾರದಲ್ಲಿ ನಾವು ಸಂಬಂಧಪಟ್ಟ ಎಲ್ಲ ಸ್ಥಳೀಯ ಅಧಿಕಾರಿಗಳಿಗೂ ಸರ್ಕಾರಕ್ಕೂ ಮತ್ತು ಮಂತ್ರಿಗಳಿಗೂ ತಿಳಿಸಿದ್ದಾಯಿತು. ಆದರೆ ಈ ತಹಲ್‌ವರೆಗೂ ಇನ್ನೂ ಯಾರಿಗೂ ಈ ವಿಚಾರ ಮನಸ್ಸಿಗೆ ಬಂದಹಾಗೆ ಕಾಣುತ್ತಿಲ್ಲ. ಅಂತೂ ಈ ವರೆಗೂ ಯಾರ ಮನಸ್ಸೂ ಇನ್ನೂ ಅಲುಗಾಡಿಲ್ಲ. ಈ ಕಾರಣಗಳಿಂದ ನಾನಾಗಲೇ ತಿಳಿಸಿದಂತೆ ಈ ಕ್ಷಾಮಭೀತಿಗೆ ಮೊದಲನೆಯ ಕಾರಣಕರ್ತರೆಂದರೆ P.W.D. ಅವರೇ ಎಂದು ಹೇಳಿದರೆ ಅದೇನೂ ಅಷ್ಟು ತಪ್ಪಾಗಲಾರದೆಂದು ನಾನು ಭಾವಿಸುತ್ತೇನೆ. ಈಗತಾನೆ ಮಾತನಾಡಿದಂಥ ಶ್ರೀಮಾರ್ಕರಾಮಪ್ಪನವರು ಈ ಅಧಿಕಾರಿವರ್ಗದಲ್ಲಿ ಕೆಲವರಲ್ಲಿ ಕರುಣೆ ಎಂಬುದೇ ಇಲ್ಲವೆಂದು ತಿಳಿಸಿದರು. ಅದನ್ನು ನಾನು ಅಕ್ಷರಶಃ ನಿಜವೆಂದು ಒಪ್ಪುತ್ತೇನೆ. ಈ ಅಧಿಕಾರಿಗಳಲ್ಲಿ ಬಹುಭಾಗದ ಜನ ಹಳ್ಳಿಗಳಿಗೆ ಹೋಗುತ್ತಿಲ್ಲ. ಹೀಗಾಗಿ ಇವರಿಗೆ ಹಳ್ಳಿಯ ಜನರ ಕಷ್ಟಸುಖಗಳೇನೆಂಬುದು ಗೊತ್ತಾಗುತ್ತಿಲ್ಲ. ಏನೋ ಅಪ್ಪಿ ತಪ್ಪಿ ಒಬ್ಬಿಬ್ಬರು ಅಧಿಕಾರಿಗಳು ಸಂಚಾರ ಮಾಡಿದರೂ ಕೂಡ ಅವರು ಟಾರ್ ರಸ್ತೆಗಳಲ್ಲಿ ನೇರವಾಗಿ ಹೋಗಿ ನೇರವಾಗಿ ಅದೇ ರಸ್ತೆಯಲ್ಲಿ ವಾಪಸ್ಸು ಬಂದುಬಿಡುತ್ತಾರೆ. ಹೀಗೆ ಇವರು ಸಂಚಾರಣೆ ಮಾಡಿಕೊಂಡು ಬಂದು ಕೊನೆಯಲ್ಲಿ ದೇಶದಲ್ಲಿ ಅಂಥ ಕಷ್ಟ ಪರಿಸ್ಥಿತಿ ಇದ್ದಹಾಗೇನೂ ಕಾಣುತ್ತಿಲ್ಲ ಎನ್ನುವುದಾಗಿ ಒಂದು ಸ್ಟೇಟ್‌ಮೆಂಟನ್ನು ಕೊಟ್ಟುಬಿಡುತ್ತಾರೆ. ಹಿಂದಿನಕಾಲದಲ್ಲಾದರೋ ದೊಡ್ಡ ದೊಡ್ಡ ಅಧಿಕಾರಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ಸಂಚಾರಣೆಯನ್ನು ಕೈಕೊಂಡಾಗ ಅಲ್ಲಲ್ಲೇ ಅವರು ಹಳ್ಳಿಗಳಿಗೆ ಭೇಟಿಕೊಟ್ಟು ಅಲ್ಲಿನ ಸಾರ್ವಜನಿಕ ಮುಖಂಡರನ್ನು ಕರೆಸಿಕೊಂಡು ಆ ಸ್ಥಳದ ಜನರ ಕಷ್ಟಸುಖಗಳೇನೆಂಬುದನ್ನು ವಿಚಾರಮಾಡಿ ತಿಳಿದುಕೊಳ್ಳುವಂಥ ಒಂದು ರೀತಿ ನೀತಿಯಿತ್ತು. ಈ ದಿವಸ ಆ ಪದ್ಧತಿಯಿಲ್ಲ. ಎಲ್ಲದಕ್ಕೂ ಸ್ಥಳೀಯ ಅಧಿಕಾರಿಗಳು ಕಳುಹಿಸತಕ್ಕ ರಿಪೋರ್ಟುಗಳೇ ಮೂಲಾಧಾರ. ಆದರೆ ಇದು ನ್ಯಾಯವಾದ ಮಾರ್ಗವಲ್ಲ. ಈಗ ನಾನು ಸರ್ಕಾರದವರಿಗೆ ಮುಖ್ಯವಾಗಿ ಸಲಹೆ ಮಾಡಬೇಕಾಗಿರುವುದು ಇಷ್ಟೇ. ಸರ್ಕಾರದವರು ಹಳ್ಳಿಯ ಜನರಿಗೆ ಮೊದಲು ಕೂಲಿ ಕೆಲಸ ಕೊಡಬೇಕು; ತನ್ಮೂಲಕ ಅವರಿಗೆ ಕೂಲಿ ದೊರೆಯುವಂತೆ ಮಾಡಿದರೆ ಆಗ ಅವರಿಗೆ ಅನ್ನಕ್ಕೊಂದು ಮಾರ್ಗ ಕಲ್ಪಿಸಿಕೊಟ್ಟಹಾಗಾಗುತ್ತದೆ. ಮೇಲಾಗಿ ಕೆರೆ, ನಾಲೆ, ರಸ್ತೆಗಳ ರಿಪೇರಿ ಕಾರ್ಯಕೂಡ ಬಹಳ ಮಟ್ಟಿಗೆ ನೆರವೇರಲು ಸಾಧ್ಯವಾಗುತ್ತದೆ. ಸರ್ಕಾರದವರು ಆದಷ್ಟು ಬೇಗ ಈ ಮಾರ್ಗವನ್ನು ಅನುಸರಿದೆ ಹೋದರೆ ಅಥವಾ ಈಗಿನಂತೆ ಕೇವಲ ಪಟ್ಟಣಗಳಲ್ಲಿರತಕ್ಕ ಜನರಿಗೆ ಅಷ್ಟಿಷ್ಟು ಕಾಳು ದೊರೆಯುವಂತೆ ಮಾಡಿದ್ದೇವಲ್ಲಾ ಎಂದು ಹೀಗೆಯೇ ಮುಂದುವರಿದರೆ ಮುಂದೆ ಬಹಳ ಕಷ್ಟಕ್ಕೀಡಾಗಬೇಕಾಗುತ್ತದೆ. ಧಾರಣೆವಾಸಿಗಳು ದಿನದಿನಕ್ಕೂ ಏರುತ್ತಿವೆ. ಕೊನೆಗೇನಾದರೂ ಆ ಹಳ್ಳಿ ಜನರು ಸರ್ಕಾರದಮೇಲೆ ಮುನಿಸಿಕೊಂಡರೆ ಆಗ ಸರ್ಕಾರವೆಲ್ಲಾ ಎಲ್ಲಿಗೆ ಓಡಬೇಕೋ ಅದನ್ನು ನಾನು ಹೇಳಲಾರೆ! ಆದ್ದರಿಂದ ಸರ್ಕಾರದವರು ಈ ದಿವಸ ನಮ್ಮ ಜನರಿಗೆ ಮೊದಲು ಕೆಲಸ ಒದಗಿಸಿಕೊಡಿ. ಇವರು ಕೇವಲ ಬಾಯಲ್ಲಿ ಮಾತ್ರ ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ಹೇಳುತ್ತಾ ಕಾರ್ಯರೂಪದಲ್ಲಿ ಅದನ್ನು ಮತ್ತಷ್ಟು ಕೇಂದ್ರೀಕರಣ ಮಾಡುತ್ತಿದ್ದಾರೆ. ಇದರಿಂದ ಈ ದಿವಸ ಅನೇಕ ಕೆಲಸ ಕಾರ್ಯಗಳು ಸರಾಗವಾಗಿ ನಡೆಯುತ್ತಿಲ್ಲ. ಅನೇಕ ತೊಂದರೆಗಳುಂಟಾಗಲು ಇದೇ ದೊಡ್ಡ ಕಾರಣ. ಒಂದು ಪೇಪರ್ ಕೆಳಗಿನಿಂದ ಹೊರಟರೆ ಅದು ಅಸಿಸ್ಟೆಂಟ್ ಇಂಜಿನಿಯರ್, ಎಗ್ಜಿಕ್ಯೂಟೀವ್ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಮತ್ತು ಚೀಫ್ ಇಂಜಿನಿಯರ್‌ವರೆಗೆ ಒಂದೊಂದು ಟೇಬಲ್ ಬಿಡಲು ಎಷ್ಟೋ ನಿಧಾನವಾಗುತ್ತಿದೆ. ಈರೀತಿ ನಿಧಾನವಾಗುತ್ತಿರುವುದನ್ನು ತಪ್ಪಿಸಿ ಅಧಿಕಾರವನ್ನು ವಿಕೇಂದ್ರೀಕರಣಮಾಡಿ, ಕೆಲಸಗಳು ಜಾಗ್ರತೆಯಾಗಿ ಆಗುವಂತೆ ಮಾಡಬೇಕು. ನಮ್ಮ ಆಫೀಸರುಗಳು ಈ ದಿವಸ ಟೂರ್ ಮಾಡುವುದು ಎಲ್ಲಿ? ಒಳ್ಳೆ ಟಾರ್ ರಸ್ತೆಗಳು ಎಲ್ಲಿವೆಯೋ ಅಲ್ಲಿ. ಹೀಗಿರುವಾಗ ಇವರು ನಾವುಗಳು ಇಲ್ಲಿಗೆ ಬಂದು ಹೇಳತಕ್ಕಂಥ ಸಂಗತಿಗಳನ್ನು ನಂಬಬೇಕು. ನಾವು ಇಲ್ಲಿಗೆ ಪ್ರತಿನಿಧಿಗಳಾಗಿ ಬಂದು ಹೇಳತಕ್ಕ ಪ್ರತಿಯೊಂದು ವಿಚಾರವನ್ನೂ ಸರ್ಕಾರದವರು ಸತ್ಯವಾದುದೆಂತಲೇ ನಂಬಬೇಕು. ನಾವಿಲ್ಲಿಗೆ ಬಂದಿರುವುದು ಸುಮ್ಮನೆ ನಮ್ಮಲ್ಲಿ ಅಕ್ಕಿಯಿಲ್ಲ, ರಾಗಿಯಿಲ್ಲ, ಮಳೆಯಿಲ್ಲ, ಬೆಳೆಯಿಲ್ಲ ಎಂಬುದಾಗಿ ಸುಳ್ಳು ಹೇಳುವುದಕ್ಕಾಗಿ ಬಂದಿಲ್ಲ. ನಾವು ಅಷ್ಟು ಸುಳ್ಳನ್ನು ಹೇಳಲು ತಯಾರಾಗಿಲ್ಲ. ಹಿಂದೆ Prime Minister ಕೊರಟಗೆರೆ, ಶಿರಾ, ಪಾವಗಡ, ಮದುಗಿರಿ—ಈ ಸ್ಥಳಗಳಿಗೆ ಭೇಟಿಯಿತ್ತಿದ್ದಾಗ ಜನರು ಅರಿಕೆಮಾಡಿಕೊಂಡ ವಿಚಾರಗಳನ್ನೆಲ್ಲಾ ಕೇಳಿ ಆ ಪ್ರದೇಶಗಳಿಗೇನಾದರೂ ಒಂದು ರೀತಿಯ ಖಾಯಂ ಪರಿಹಾರೋಪಾಯ ಮಾರ್ಗಗಳನ್ನು ಕೈಕೊಳ್ಳುವುದಾಗಿ ಜನರಿಗೆ ತಿಳಿಸಿ ಬಂದಿದ್ದರು. ಆದರೆ ಆ ಭರವಸೆ ಆ ದಿವಸಕ್ಕೇ ಮುಗಿಯಿತು! ನಾನು ಸುಮ್ಮನೆ ಈ ವಿಚಾರಗಳನ್ನೆಲ್ಲಾ ಮಾತನಾಡುತ್ತಿಲ್ಲ. ಮೊನ್ನೆ ಒಂದಾವರ್ತಿ ನಾನೇ ಖುದ್ದಾಗಿ ಕೊರಟಗೆರೆ ತಾಲ್ಲೂಕು, ಕೋಳಾಲ ಹೋಬಳಿಗೆ ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಮತ್ತು ಎಗ್ಜಿಕ್ಯುಟೀವ್ ಇಂಜಿನಿಯರನ್ನು ಕರೆದುಕೊಂಡು ಹೋಗಿ ಆ ಪ್ರದೇಶದಲ್ಲಿರತಕ್ಕ ಕ್ಷಾಮ ಪರಿಸ್ಥಿತಿಯನ್ನು ತೋರಿಸಿದ್ದೇನೆ. ಆ ಪ್ರದೇಶವೆಲ್ಲಾ ಕಲ್ಲುನೆಲ. ಆ ಕಾಲದಲ್ಲಿ ಅಲ್ಲೇ ಕೆಲಸಮಾಡುತ್ತಿದ್ದಂಥ ರೈತರು ಏನೋ ಕೊಂಚ ಹುರಳಿಯನ್ನಾದರೂ ಬೆಳೆಯಲು ಇಷ್ಟೆಲ್ಲಾ ಪ್ರಯತ್ನ ಪಡುತ್ತಿದ್ದೇವೆ, ಇಲ್ಲಿ ಎಲ್ಲಾ ಬೆಳೆಗಳೂ ಒಣಗಿಹೋದವು ಎಂದು ತಿಳಿಸಿದರು. ಈ ಆಫೀಸರುಗಳಿಗೆ ಹುರುಳಿ ಬೆಳೆಯನ್ನಿಡುವ ಕಾಲ ಯಾವುದು ಎಂಬುದು ಕೂಡ ಗೊತ್ತಿಲ್ಲ. ಆಗ

ನಾನು ಹುರುಳಿ ಬೆಳೆ ಆಗುತ್ತದೆಯೇ ಎಂದು ಕೇಳಿ
ದ್ದಕ್ಕೆ ರೈತರು 'ಇಲ್ಲಾ ಸ್ವಾಮಿ, ಹುರುಳಿ ಬೆಳೆಗೂ
ಸಹ ಕಾಲ ಮೀರಿಹೋಗಿದೆ; ಇದೇನಿದ್ದರೂ ಕೇವಲ
ದನಕರುಗಳಿಗೆ ಮೇವು ಆಗುತ್ತದೆ ಅಷ್ಟೇ' ಎಂಬು
ದಾಗಿ ತಿಳಿಸಿದರು. ಇಲ್ಲಿಯವರೆಗೂ ನಮ್ಮ ಪ್ರದೇಶದಲ್ಲಿ
ರೈತರು ದನಕರುಗಳಿಗೆ ಮೇವಿಲ್ಲದೆ ರಸ್ತೆ ಮರಗಳಲ್ಲಿದ್ದ
ಸೊಪ್ಪನ್ನು ಕತ್ತರಿಸಿ ಹಾಕುತ್ತಿದ್ದರು. ಆದರೆ ಈ
ದಿವಸ ಆ ಮರಗಳಲ್ಲಿ ಸೊಪ್ಪುಸಹ ಇಲ್ಲದಂತಾಗಿದೆ.
ಹೀಗೆಲ್ಲಾ ಆಗಿ ಕಾಡಿನಲ್ಲಿದ್ದ ಮರಗಳ ಸೊಪ್ಪು ದನ
ಗಳಿಗಾಯಿತು, ಮರಗಳು ಜನರ ಸೌದೆಗೆ ಉಪ
ಯೋಗಿಸಲ್ಪಟ್ಟವು. ದೇಶದಲ್ಲಿ ಕ್ಷಾಮ ತಲೆದೋರುತ್ತ
ಲಿದೆ. ದೇಶದಲ್ಲಿ ಇಂಥ ಅಭಾವ ಪರಿಸ್ಥಿತಿಯುಂಟಾಗಿ
ದ್ದರೂ ಸರ್ಕಾರ ಎರಡು ಲಕ್ಷ ಪಲ್ಲ ಕಾಳು ದಾಸ್ತಾನಿದೆ
ಎಂದು ತಿಳಿಸುತ್ತಿದ್ದಾರೆ. ನಾನೀಗ ಹೇಳುತ್ತಿರು
ವುದು ನಮ್ಮ ತುಮಕೂರು ಜಿಲ್ಲೆಯ ವಿಚಾರ. ಹೀಗೆ
ಅಧಿಕಾರಿಗಳು ತಿಳಿಸುತ್ತಿರುವ ಅಂಕಿ ಅಂಶಗಳು ಸುಳ್ಳೋ
ಅಥವಾ ನಿಜವೇ ಎಂಬುದನ್ನು ಯಾರೂ ಪರಿಶೀಲನೆ
ಮಾಡಿ ನೋಡುತ್ತಿಲ್ಲ. ಎಲ್ಲಿ ನೋಡಲಿ ಇಂಥ ಕಷ್ಟ
ಪರಿಸ್ಥಿತಿ ಉಂಟಾಗಿದೆ. ಹೀಗಿರುವಾಗ ನಾವು
ನಮ್ಮ ಕಷ್ಟ ಸುಖಗಳನ್ನು ಯಾರಲ್ಲಿ ಹೋಗಿ ಹೇಳಿ
ಕೊಳ್ಳಬೇಕೋ ಅದೇ ನನಗೆ ತಿಳಿಯದಂತಾಗಿದೆ.
ಸರ್ಕಾರದವರು ಹೇಳುವಂಥ ವಿಚಾರಗಳನ್ನು ಸಂಬಂಧ
ಪಟ್ಟ ಅಧಿಕಾರಿಗಳು ಚೆಕ್‌ಮಾಡಬೇಕು, ಸ್ಕ್ರೂಟಿನೀ
ಮಾಡಬೇಕು. ಆ ಬಗ್ಗೆ ಒಂದು ಸ್ಥಳೀಯ ಖಾಸಗೀ
ಜನರ ಸಮಿತಿಯನ್ನು ಸಹ ನೇಮಿಸಬೇಕಾದದ್ದು
ಅಗತ್ಯ. ಖಾಸಗೀ ಜನರ ಮಾತಿನಲ್ಲಿ ಸರ್ಕಾರ
ಒಂದು, ನಂಬಿಕೆಯನ್ನಿಡಬೇಕು. ಆದರೆ ಆಗತಕ್ಕ
ಕೆಲಸಗಳ ಬಗ್ಗೆ ಮೀನ ಮೇಷ ಮಾತ್ರ ಎಣಿಸಬೇಡಿ
ಎಂದು ಹೇಳುತ್ತೇನೆ. ಇದೇ ವಿಚಾರವಾಗಿ ನಾನು
ಸಾಕಷ್ಟು ವಿಷಯಗಳನ್ನು ಎಗ್ಜಿಕ್ಯುಟೀವ್ ಇಂಜಿನಿಯ
ರಿಗೂ ಹೇಳಿದ್ದೇನೆ. ಆದರೆ ಅಲ್ಲಿಯ ಜನರಿಗೆ ಕೂಲಿಗೆ
ಮಾರ್ಗಮಾಡಲು ಯಾವುದಾದರೂ ಕೆಲಸಗಳನ್ನು
ಪ್ರಾರಂಭಮಾಡಿ ಎಂದುದಕ್ಕೆ ಅವರು "ನಮ್ಮಲ್ಲಿ
ದುಡ್ಡೇ ಇಲ್ಲ" ಎಂದು ಹೇಳಿದರು. ಆದರೆ ಈಗ
ಸಭೆಯಲ್ಲಿ ಹಣಕಾಸಿನಮಂತ್ರಿಗಳಿಲ್ಲ; ಇದ್ದಿದ್ದರೆ
ಬಹಳ ಚೆನ್ನಾಗಿತ್ತು. ಈ ದಿವಸ ಆ ಜಿಲ್ಲೆಯಲ್ಲಿ ಅತಿ
ಬೇಗ ಆಗಬೇಕಾಗಿರುವಂಥ ಅನೇಕ ಕೆರೆ, ಬಾವಿ,
ಕಾಲುವೆಗಳ ಕಾಂಗಾರಿಯನ್ನು ಮಂಜೂರು ಮಾಡಿಸಿ
ಇಟ್ಟುಕೊಂಡಿದ್ದಾರೆ. ಆ ಕಾರ್ಯಗಳೊಂದನ್ನೂ ಕೈ
ಗೊಂಡಿಲ್ಲ. ಆದರೆ ಪ್ರತಿಯೊಬ್ಬ ಮಂತ್ರಿಗಳ ಪೋರ್ಟ್
ಫೋಲಿಯೋ ವಿಚಾರ ಅವರವರಿಗೇ ಸೇರಿದ್ದರೂ ಅದರಲ್ಲಿ
ಒಂದು ಜಾಯಿಂಟ್ ರೆಸ್‌ಪಾನ್ಸಬಿಲಿಟಿ ಎಂಬು
ದೊಂದು ಬೇರೆಯಿದೆ. ನಿಜ. ಅದಕ್ಕಾಗಿ ಯಾವ
ಮಂತ್ರಿಗಳೇ ನಮ್ಮ ಜಿಲ್ಲೆಗೆ ಬರಲಿ ನಾವು ಅವರ
ಜೊತೆಯಲ್ಲಿ ಸುತ್ತಲು ಸಿದ್ಧರಾಗಿದ್ದೇವೆ. ಆದರೆ
ಇತ್ತೀಚೆಗೆ ಕಳೆದ ಎರಡು ಮೂರು ದಿವಸಗಳಿಂದ
ಒಂದೇ ಸಮನೆ ಮಳೆ ಬೀಳುತ್ತಿದೆ, ಇನ್ನೇನು ಪರವಾ
ಇಲ್ಲ ಎಂದು ಸರ್ಕಾರದವರು ಭಾವಿಸಿರಬಹುದು.
ಇದು ಖಂಡಿತ ಸರಿಯಾದ ಭಾವನೆಯಲ್ಲ. ಈಗ ಬಿದ್ದಿ
ರುವ ಮಳೆಯಲ್ಲಿ ಕೆಲವುಕಡೆ ತಲೆ ನೆನೆಯುವಷ್ಟು
ಬಿದ್ದಿದೆ. ಮತ್ತೆ ಕೆಲವು ಕಡೆ ನೆಲ ಸಹ ನೆನೆದಿಲ್ಲ; ಅಂಥ
ಮಳೆ ಈಗ ಬಿದ್ದಿದೆ. ಹೀಗಿರುವುದರಿಂದ ಇನ್ನೇನು ದೇಶ
ದಲ್ಲಿ ಮಳೆಯಾಗಿದೆ ಎಂದು ಸರ್ಕಾರದವರು ಕೈಕಟ್ಟಿ
ಕುಳಿತರೆ ಮುಂದೆ ಬಹಳ ಕಠಿಣವಾಗುತ್ತದೆ. ಭೀಕರ
ಪರಿಸ್ಥಿತಿಗೀಡಾಗಬೇಕಾದ ಕಾಲ ಒದಗಬಹುದು.
ಈ ಮಳೆಯಿಂದ ಯಾವ ಜನರಿಗೂ ಏನೂ ಪ್ರಯೋಜನ
ವಾಗಿಲ್ಲ. ಆದರೆ ನಾವಿನ್ನು ಹೀಗೆ ಬರಿ ಟೀಕೆ ಟಿಪ್ಪಣಿ
ಗಳನ್ನು ಮಾಡದೆ ಜನರಿಗೆ ಅನುಕೂಲವಾಗುವ ಕಾರ್ಯ
ಗಳಲ್ಲಿ ಕೈಹಾಕೋಣ. ನಮ್ಮ ರೆವಿನ್ಯೂ ಮಂತ್ರಿಗಳು
'You people go on ahead with the work'
ಎಂದು ಹೇಳಲಿ. ಹಾಗೆ ಮಾಡದೆ ಅವರೊಂದು ಹೇಳಿ
ದರೆ ಅದು ಅವರ ಕೈಕೆಳಗಿನ ಸೆಕ್ರೆಟರಿಗಳಿಗೆ ಬಂದು,
ಅನಂತರ ಡಿ. ಸಿ. ಅನಂತರ ಅಮಲ್ದಾರ್ ಆಫೀಸಿನಲ್ಲಿ
ಆ ಮಂತ್ರಿಗಳ ಆಜ್ಞೆ ಜನರಿಗೆ ತಿಳಿಸಲು ರೆವಿನ್ಯೂ
ಇನ್ಸ್‌ಪೆಕ್ಟರಿಗೆ ಬರಬೇಕಾಗಿದೆ. ಇದು ತಪ್ಪಬೇಕು.
ಇದರಿಂದಲೇ ಕೆಲಸಗಳು ಸರಾಗವಾಗಿ ಆಗುತ್ತಿಲ್ಲ.
ಇಲ್ಲಿಯತನಕ ಈ ವಿಚಾರವಾಗಿ ಮಂತ್ರಿಗಳಿಗೆ ಆಗು
ತ್ತಿದ್ದ ಬೈಗಳು ಈಗ ಸದಸ್ಯರಾದ ನಮಗೆ ಬರುವಂಥ
ಪರಿಸ್ಥಿತಿಯುಂಟಾಗಿದೆ. ನಾಳೆ ಊರಿಗೆ ಹೇಗಪ್ಪಾ
ಹೋಗುವುದು ಎನ್ನಿಸುತ್ತವೆ. ಇಂಥ ಕ್ಷಾಮ ಕಾಲದಲ್ಲಿ
ಸರ್ಕಾರದವರು ಕಾನೂನುಗಟ್ಟಲೆಗಳನ್ನು ಸಡಿಲ
ಪಡಿಸಿ ಕೆಲಸಗಳನ್ನು ನಡೆಸಲು ಹುಕುಂ ಮಾಡಬೇಕು.
ನಾವು ನಾಳೆ ನಾಳಿದ್ದರಲ್ಲಿ ಹೋಗಿ ಊರುಗಳನ್ನು
ತಲುಪುವುದರೊಳಗಾಗಿ ಸರ್ಕಾರದವರು ಮಾಡತಕ್ಕ
ಆಜ್ಞೆಗಳ ಫಲವಾಗಿ ಜನರಿಗೆ ತಕ್ಷಣ ಅನುಕೂಲ ದೊರೆ
ಯುವಂತಾಗಬೇಕು; ಅವರಿಗೆ ಸಾಕಷ್ಟು ಕೆಲಸ ಸಿಕ್ಕು
ವಂತೆ ಆಜ್ಞೆ ಹೊರಡಬೇಕು.

6 P.M.

ನಮ್ಮ ಅಧಿಕಾರಿಗಳಿಗೆ ಎಷ್ಟೋ ದುಡ್ಡನ್ನು ಖರ್ಚು
ಮಾಡುವುದಕ್ಕೆ ಕೊಡುತ್ತಾರೆ. ಆದರೆ ಅದು ಸರಕಾರ
ದಿಂದ ಮಂಜೂರಾಗಿ ಬರುವುದು ತಡವಾಗುತ್ತದೆ.
ಹೀಗಾಗಿ ಸರಕಾರದಿಂದ ಡೆಪ್ಯುಟೀ ಕಮಿಷನರವರಿಗೆ,
ಅಲ್ಲಿಂದ ತಾಲ್ಲೂಕು ಆಫೀಸಿಗೆ ಬರುವುದು ತಡವಾಗಿ
ಅಲ್ಲಿಂದ ಗ್ರಾಮಗಳಲ್ಲಿರುವ ಪಂಚಾಯಿತಿ ಚೇರ್ಮನ್ನ
ರಿಗೋ, ಶ್ಯಾನುಭೋಗರಿಗೋ information
ಬರುವುದೂ ಕೂಡ ತಡವಾಗಿ ಕೆಲಸ ನಡೆಯುವುದೂ
ನಿಧಾನವಾಗುತ್ತದೆ. ಆದುದರಿಂದ ಈ ಅಧಿಕಾರ
ವನ್ನು ಡೆಪ್ಯುಟೀ ಕಮಿಷನರವರಿಗೆ ಬಿಟ್ಟುಕೊಟ್ಟರೆ ತಕ್ಕ
ಮಟ್ಟಿಗಾದರೂ ಅನುಕೂಲವಾಗುತ್ತದೆ. ಇಷ್ಟನ್ನು
ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಂ. ಲಿಂಗೇಗೌಡ (ಕನಕಪುರ).—ಮಾನ್ಯ
ಅಧ್ಯಕ್ಷರೇ, ಆಹಾರದ ವಿಷಯವಾಗಿ ಪ್ರಸ್ತಾಪಿಸುತ್ತ
ಮಾನ್ಯ ಸದಸ್ಯರು ಹದಗೆಟ್ಟಿರುವ ಆಹಾರದ ಪರಿಸ್ಥಿತಿ
ಯನ್ನು ಪರಿಹರಿಸುವುದಕ್ಕಾಗಿ ಕೆಲವು ಉತ್ತಮವಾದ
ಸಲಹೆಗಳನ್ನು ಕೊಟ್ಟಿದ್ದಾರೆ. ಅವನ್ನೆಲ್ಲ ಬಿಟ್ಟು ಒಂದೆ
ರಡು ವಿಷಯಗಳನ್ನು ಮಾತ್ರ ಇಲ್ಲಿ ಹೇಳಲು ನಾನು
ಇಚ್ಛೆಪಡುತ್ತಿದ್ದೇನೆ. ನಮ್ಮ ದೇಶದಲ್ಲಿ ಆಹಾರಕ್ಕೆ
ಅಭಾವವೇನೂ ಇಲ್ಲ. ನಮ್ಮ ದೇಶದಿಂದ ಹೊರಕ್ಕೆ
ಸಾಗುತ್ತ ಇರುವ ಆಹಾರ ಪದಾರ್ಥಗಳನು ಸರಕಾರ
ದವರು ಮೊದಲು ತಡೆಗಟ್ಟಬೇಕು. ಇದು ತಮಗೆ
ಹೊಸದಾಗಿ ಕಾಣಬಹುದು. ಮೈಸೂರು ಕಡೆಯಿಂದ
ಗೋವಾ ಪ್ರದೇಶಕ್ಕೆ ಬೇಕಾದಷ್ಟು ಆಹಾರದ ಧಾನ್ಯ
ಗಳು, ಅನಂತರ ಗೋವಾದಿಂದ ಪಾಕೀಸ್ತಾನಕ್ಕೆ
ಹೋಗುತ್ತಿದೆ. ಅಲ್ಲದೆ ಪಂಜಾಬಿನಿಂದಲೂ ಪಾಕೀ
ಸ್ತಾನಕ್ಕೆ ಗೋಧಿ ಹೋಗುತ್ತಿದೆ ಎಂದು ನಾನು ತಿಳಿದು
ಕೊಂಡಿದ್ದೇನೆ. ಗೋವಾಕ್ಕೆ ನಮ್ಮ ದೇಶದಿಂದ
ಅಕ್ಕಿಯು ಸಾಗುವಾಗ ಹಣ ಕೊಟ್ಟು, ಸವರನ್ನು
ಗಳನ್ನು ಕೊಟ್ಟು ವ್ಯವಹಾರ ನಡೆಯುತ್ತಿದೆ. ಇದಕ್ಕೆ
ಕಾರಣ ಈ ಅಕ್ಕಿಯು ಹಾಗೇ ಗೋವಾದಿಂದ ಪಾಕೀ
ಸ್ತಾನಕ್ಕೆ ಹೋಗುತ್ತಿದೆ. ಈ ರೀತಿಯಾಗಿ ಎಲ್ಲಿ
ವ್ಯಾಪಾರ ವ್ಯವಹಾರಗಳೂ ನಡೆಯುತ್ತಿವೆ ಎನ್ನುವು
ದನ್ನೂ ಕೂಡ ನಾನು ಖಚಿತವಾಗಿ ತಿಳಿದುಕೊಂಡಿ
ದ್ದೇನೆ. ಇದನ್ನು ತಡೆಗಟ್ಟಬೇಕಾದುದು ಬಹಳ ಅಗತ್ಯ

(ಶ್ರೀ ಎಂ. ಲಿಂಗೇಗೌಡ)

ಎರಡನೆಯದಾಗಿ ನಮ್ಮ ದೇಶದ ಆಹಾರ ಪರಿಸ್ಥಿತಿಯನ್ನು ಮೈಸೂರು ರಾಜ್ಯ ಒಂದಕ್ಕೇ ಹೋಲಿಸಿಕೊಂಡು ನಾವು ಮಾತನಾಡುವುದು ಸಾಧ್ಯವಿಲ್ಲ. ಇದು ನಮ್ಮ ಭಾರತದ ಎಂದರೆ, ಇಂಡಿಯಾ ದೇಶದ ಒಟ್ಟಿನಲ್ಲಿ ನಾವು ಆಲೋಚನೆ ಮಾಡಬೇಕಾದ ವಿಷಯ ಇದು. ಏಕೆಂದರೆ 'ಮೈಸೂರು ಸಂಸ್ಥಾನದಲ್ಲಿ ದಾಸ್ತಾನು ಇಲ್ಲವೆಂದು ಫೇರ್ ಪ್ರೈಸು ಡಿಪೋಗಳನ್ನು ಕೊಡುವುದಕ್ಕಾಗುವುದಿಲ್ಲ' ವೆಂದು ಇಂಡಿಯಾ ಸರಕಾರದವರು ಹೇಳುವುದಕ್ಕೆ ಸಾಧ್ಯವಿಲ್ಲ. ನಾವು ಮೈಸೂರು ರಾಜ್ಯಕ್ಕೆ ಎಷ್ಟರಮಟ್ಟಿನ ಪ್ರಜೆಗಳೋ ಭಾರತ ಸರಕಾರಕ್ಕೂ ನಾವು ಅಷ್ಟರಮಟ್ಟಿನ ಪ್ರಜೆಗಳು. ನಮ್ಮ ಪ್ರಾಂತಕ್ಕೆ ಅಕ್ಕಿಯನ್ನು ಸಪ್ಲೈ ಮಾಡುವುದಿಲ್ಲ, ಇನ್ನು ಮುಂದೆ ಸದರನ್ ಜೋನಿನಲ್ಲೆ ತರಿಸಿಕೊಳ್ಳುವ ಏರ್ಪಾಡನ್ನು ಮಾಡಬೇಕೆಂದು ನಮ್ಮ ಮಂತ್ರಿಗಳು ಒಂದು ಸ್ಟೇಟುಮೆಂಟನ್ನು ಕೊಟ್ಟರು. ಅದರಲ್ಲಿ "ಅಕ್ಟೋಬರು ಒಂದನೇ ತಾರೀಖಿನಿಂದ ಇಂಡಿಯಾ ಸರಕಾರದವರು ನಮಗೆ ಅಕ್ಕಿಯನ್ನು ಕೊಡುವುದಿಲ್ಲ" ಎಂದು ಕೊಟ್ಟಿದ್ದಾರೆ. ಹಾಗೆ ಸ್ಟೇಟ್‌ಮೆಂಟನ್ನು ಕೊಟ್ಟಿದ್ದು ಸರಿಯಲ್ಲವೆಂದು ನಾನು ಹೇಳುತ್ತಿದ್ದೇನೆ. ಹಾಗೆ ಕೊಟ್ಟಿದ್ದರಿಂದ ವರ್ತಕರು ಈಗ ಕಳ್ಳ ವ್ಯಾಪಾರ ಮಾಡುವುದಕ್ಕೆ ಅನುಕೂಲವಾಯಿತು ಮತ್ತು ಹೆಚ್ಚಿಗೆ ದಾಸ್ತಾನು ಮಾಡುವುದಕ್ಕೆ ಈ ವರ್ತಕರುಗಳಿಗೆ ಅನುಕೂಲವಾಯಿತು. ಅನಂತರ ನಮ್ಮ ಮಾನ್ಯ ಮಂತ್ರಿಗಳು ಈಚೆಗೆ ಶ್ರೀ ಜೈನ್ ಅವರು ಹೈದರಾಬಾದಿಗೆ ಬಂದಿದ್ದಾಗ ಭೇಟಿಮಾಡಿ ಈ ವಿಷಯದಲ್ಲಿ ಒಂದು ತೀರ್ಮಾನಕ್ಕೆ ಬಂದಿದ್ದೇವೆಂದು ಹೇಳಿದರು. ಈಗ ಈ ಅಕ್ಕಿಯನ್ನು ಸಾಲವಾಗಿ ಕೊಡುತ್ತಾರೋ, ಎರವಲಾಗಿ ಕೊಡುತ್ತಾರೋ ಅದನ್ನೂ ಕೂಡ ಖಚಿತವಾಗಿ ಒಪ್ಪಿಕೊಂಡಿಲ್ಲವೆಂದು ಕೇಳಿದೆ. ಈಗ ಎಷ್ಟು ಪ್ರಾಡ್ಯೂಸ್ ಆಗುತ್ತೋ ಅದರ ಐದನೆಯ ಒಂದು ಭಾಗವನ್ನು ನಮಗೆ ಕೊಡಬೇಕು. ಅದರ ಮೇಲೆ ನಮಗೆ ಸಿಕ್ಕುವುದಿಲ್ಲವೆಂದು ಗೊತ್ತಾಗಿದೆ. ಹಾಗೆಂದೇನೂ ಹೇಳಿಲ್ಲ. ಈಗಿರತಕ್ಕ ಫೇರು ಪ್ರೈಸು ಡಿಪೋಗಳಲ್ಲಿ ಐದನೆಯ ಒಂದು ಭಾಗಕ್ಕೆ ಮಾತ್ರ ಅಕ್ಕಿ ಕೊಡಬೇಕಾಗುತ್ತದೆ ಮತ್ತು ಇನ್ನೂ ಹೆಚ್ಚಿನ ಅಭಾವ ಕಂಡು ಬಂದರೆ ಇನ್ನೂ ಹೆಚ್ಚಿನ ಡಿಪೋಗಳನ್ನು ಕೊಡುತ್ತಾರೆಂದು ನಂಬಿಕೊಳ್ಳುವುದಕ್ಕೆ ಆಗುವುದಿಲ್ಲ. ಏನೋ ಅದೃಷ್ಟವಶಾತ್ ಮಳೆಯೇನೋ ಬಂದು ಸಹಾಯ ಮಾಡಿದರೆ ರಾಗಿ ಬೆಳೆ ಇಳಿಯುತ್ತದೆ. ಆದರೆ ಹೆಚ್ಚಿಗೆ ಮಳೆ ಬಂದರೆ ರಾಗಿ ಹಾಳಾಗುತ್ತದೆ. ಹಾಗೆ ಬೀಳದೆ ಅನುಕೂಲವಾಗಿ ಮಳೆ ಬಿದ್ದರೆ ಮುಂದಿನ ಸುಗ್ಗಿಯ ವೇಳೆಗಾದರೂ ಪಲ್ಲ ಒಂದಕ್ಕೆ ಐದು ರೂಪಾಯಿಗಳಷ್ಟಾದರೂ ಬೆಲೆಯಲ್ಲಿ ಕಡಿಮೆಯಾಗುತ್ತದೆ. ಆ ಕಾರಣ ಇಂತಹ ಅಭಾವ ಈ ವರ್ಷವೇ ಬರುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದರೂ ಅಕ್ಕಿ ಮತ್ತು ಗೋಧಿಯನ್ನು ಇಂಡಿಯಾ ಸರಕಾರದವರು ನಮಗೆ ಸಾಕಷ್ಟು ಪ್ರಮಾಣದಲ್ಲಿ ಕೊಡಬೇಕು. ಹಾಗೆ ಕೊಡದೆ ಹೋದರೆ ಸಿಟಿ ಏರಿಯಾದಲ್ಲಿರತಕ್ಕವರಿಗೆ ಮತ್ತು ಬಡವರಿಗೆ ಬಹಳ ತೊಂದರೆಯಾಗುತ್ತದೆ ಎಂದು ನಾನು ಖಚಿತವಾಗಿ ಅಭಿಪ್ರಾಯಪಡುತ್ತೇನೆ; ಮತ್ತು ಈಗ ಡಿಪೋಗಳಲ್ಲಿ ಸರಬರಾಜಾಗುತ್ತಿರುವ ಅಕ್ಕಿಯನ್ನು ನೋಡಿದರೆ ಅದು ತಿನ್ನುವುದಕ್ಕೆ ಕೂಡ ನಾಲಾಯಕ್ಕಾಗಿದೆ. ಆದರೆ ಬೆಲೆ ಈಗ ಹೆಚ್ಚಾಗಿದ್ದರೂ ರೂಪಾಯಿಗೆ ಒಂದು ಸೇರು ಆದ ರೂ ಕೂಡ ಹಾಗೆಯೇ ಕೊಂಡು ತಿನ್ನತಕ್ಕವರೂ ಇದ್ದಾರೆ. ಆದರೆ ಬಡವರಿಗೆ ಇದರಿಂದ ಬಹಳ ಕಷ್ಟವಾಗಿದೆ. ಆ ಕಾರಣ ಅಕ್ಕಿ ಮತ್ತು ಗೋಧಿ ಇವುಗಳನ್ನು ಹೊರಗಡೆಯಿಂದ ತರಿಸಲೇಬೇಕಾಗುತ್ತದೆ. ನಮ್ಮ ಸರಕಾರದವರು ಇಂಡಿಯಾ ಸರಕಾರದವರ ಮೇಲೆ ಒತ್ತಾಯವಾದ ಡಿಮ್ಯಾಂಡನ್ನು ಹಾಕಿದರೆ ಮತ್ತು ಅವರ ಗಮನಕ್ಕೆ ಈ ಪರಿಸ್ಥಿತಿಯನ್ನು ತಂದರೆ ಅವರು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ; ಮತ್ತು ಇದೇನೂ ಅಂತಹ ಕಷ್ಟಸಾಧ್ಯವಾದ ಕೆಲಸವಲ್ಲ.

ಇನ್ನು ನಮ್ಮ ಆಹಾರದ ಉತ್ಪತ್ತಿಯನ್ನು ಹೆಚ್ಚಿಗೆ ಬೆಳೆಯುವುದಕ್ಕೆ ಸಾಧ್ಯವೇ ಏನು ಎನ್ನುವುದನ್ನು ಆಲೋಚನೆ ಮಾಡುವುದಾದರೆ, ರೈತರಿಗೆ ಅಗತ್ಯವಾದ ದನಗಳಿಗೆ ಹುಲ್ಲನ್ನು ಬೆಳೆಯುವುದಕ್ಕೆ ಕೂಡ ಜಾಗವನ್ನು ಬಿಟ್ಟಿಲ್ಲ. ಹೀಗೆ ಸರಕಾರ ಮಾಡುತ್ತಿರುವ ಆರ್ಡರುಗಳಿಂದ ರೈತರಿಗೆ ತೊಂದರೆಯಾಗಿದೆ. ದನಗಳಿದ್ದರೆ ತುಂಬ ಗೊಬ್ಬರವೂ ಸಿಕ್ಕುತ್ತಿತ್ತು. ಗೊಬ್ಬರವೇ ಇಲ್ಲದೇ ಹೋದರೆ ಯಾವ ಧಾನ್ಯವನ್ನೂ ಬೆಳೆಯುವುದಕ್ಕೂ ಆಗುವುದಿಲ್ಲ. ಇದನ್ನು ತಾವು ತಿಳಿದುಕೊಂಡಿದ್ದೀರಿ. ರೈತರೂ ತಿಳಿದುಕೊಂಡಿದ್ದಾರೆ. ಅದಕ್ಕಾಗಿ ಹೆಚ್ಚಿನ ಗೋಮಾಳವನ್ನು ಕಲ್ಪಿಸಬೇಕು. ಗ್ರಾಮಾಂತರ ಪ್ರದೇಶದಲ್ಲಿ ಇಂತಿಂತಹ ಗ್ರಾಮಗಳಿಗೆ ಎಷ್ಟು ಗೋಮಾಳವಿರಬೇಕೆನ್ನುವುದನ್ನು ಸರಕಾರದವರು ತನಿಖೆ ನಡೆಸಿ ಎಲ್ಲಾದರೂ ಗೋಮಾಳವನ್ನು ಕೊಟ್ಟಿದ್ದಾರೆಯೇ ಎಂದರೆ ಅದೂ ಕೂಡ ಇಲ್ಲ. ಹೀಗೆ ಗೋಮಾಳವಿಲ್ಲದೇ ಇರುವುದರಿಂದ ನಮ್ಮ ದನಕರುಗಳಿಗೆ ಮೇವಿಗೆ ಹುಲ್ಲು ಸಿಕ್ಕುವುದಕ್ಕೂ ಸಾಧ್ಯವಾಗಿಲ್ಲ. ಹೀಗೆ ದನಗಳಿಗೇ ಹುಲ್ಲು ಸಿಕ್ಕದೇ ಹೋದರೆ ಗೊಬ್ಬರ ಸಿಕ್ಕುವುದಿಲ್ಲ. ಗೊಬ್ಬರವಿಲ್ಲದೆ ಯಾವ ಆಹಾರವನ್ನೂ ಬೆಳೆಯುವಂತಿಲ್ಲ. ನಾನು ಎಷ್ಟೇ ಹೇಳಲಿ, ನೀವು ಎಷ್ಟೇ ಯೋಚನೆ ಮಾಡಿದರೂ ಕೂಡ ದನಗಳಿಗೆ ತಿನ್ನುವುದಕ್ಕೆ ಗೋಮಾಳ ದೊರಕುವುದಕ್ಕೆ ಅವಕಾಶ ಮಾಡದೆ ಹೋದರೆ ಆಹಾರ ಧಾನ್ಯದ ಬೆಳೆಗಳನ್ನು ಹೆಚ್ಚಾಗಿ ಬೆಳೆಯುವುದಕ್ಕೆ ಆಗುವುದಿಲ್ಲ ಎಂಬುದನ್ನು ತಾವು ಖಂಡಿತ ತಿಳಿದುಕೊಳ್ಳಬೇಕು. ಈಗಿನ ರೆವಿನ್ಯೂ ಮಂತ್ರಿಗಳು, ನಾನು ಕೇಳಿದ್ದರಲ್ಲಿ ಮತ್ತು ಅವರಿವರು ಹೇಳುತ್ತಿರುವುದನ್ನು ಕೇಳಿದ್ದರಲ್ಲಿ, ದನಗಳಿಗಾಗಿ ಗೋಮಾಳವಿರಬೇಕೆಂದು ಖಚಿತವಾಗಿ ಅಭಿಪ್ರಾಯವುಳ್ಳವರಾಗಿದ್ದಾರೆಂದು ಕೇಳಿದ್ದೇನೆ. ಆದರೆ ಈಗ ಸಾಗುವಳಿಗೆ ಕೊಟ್ಟಿರತಕ್ಕ ಗೋಮಾಳವನ್ನೆಲ್ಲ ಪುನಃ ವಾಪಸು ತೆಗೆದುಕೊಂಡು ಗೋಮಾಳಕ್ಕಾಗಿ ರಿಸರ್ವ್ ಮಾಡಬೇಕಾದುದು ಅಗತ್ಯ. ಹಾಗೆ ಮಾಡದಿದ್ದರೆ ಖಂಡಿತ ಈ ಆಹಾರದ ಪರಿಸ್ಥಿತಿ ಉತ್ತಮವಾಗುವುದಿಲ್ಲ ಎನ್ನುವುದನ್ನು ಅವರು ಜ್ಞಾಪಕದಲ್ಲಿಟ್ಟುಕೊಳ್ಳಬೇಕು; ಮತ್ತು ಈಗ ತಾವು ಒಂದು ಆರ್ಡರನ್ನು ಮಾಡಿದ್ದೀರಿ. ಅದೇನೆಂದರೆ ಎಲ್ಲೆಲ್ಲಿ ಹಾಹಾಕಾರ ಇದೆಯೋ ಅಲ್ಲಿ ಕ್ಷಾಮ ನಿವಾರಣೆಗಾಗಿ ತಕ್ಕ ಕೆಲಸಗಳನ್ನು ತೆಗೆದುಕೊಂಡು ಅಲ್ಲಿಯ ಜನಗಳಿಗೆ ಸಹಾಯ ಮಾಡಬೇಕೆಂದೇನೋ ಆರ್ಡರನ್ನು ಹೊರಡಿಸಿದ್ದೀರಿ. ಆದರೆ ಆ ಆರ್ಡರು ಬರೀ ಪೇಪರಿನಲ್ಲಿದೆಯೇ ಹೊರತು ಮುಂದೆ ಯಾವ ಕಾರ್ಯಕ್ರಮವೂ ಆಗಿಲ್ಲ. ಏಕೆಂದರೆ, ಈ ರೀತಿಯಾದ ಹಣವನ್ನು ಖರ್ಚು ಮಾಡಬೇಕಾಗಿದ್ದರೆ ಸೆಕ್ರೆಟೇರಿಯಟ್‌ನಿಂದ ಡೆಪ್ಯುಟೀ ಕಮಿಷನರವರಿಗೆ ಈ ಆರ್ಡರು ತಲುಪಿ ಅವರು ಈ ಹಣವನ್ನು ಖರ್ಚು ಮಾಡುವುದಕ್ಕೆ ಅದನ್ನು ಡ್ರಾ ಮಾಡುವ ಆಫೀಸರಿಗೆ ಕಳುಹಿಸಲು ತಾಲ್ಲೂಕು ಆಫೀಸಿಗೆ ಬರುತ್ತದೆ. ಹಾಗೆ ಬಂದು ಆ ಬಿಲ್ಲನ್ನು ಮಾಡಿದ ಮೇಲೆ ಅದನ್ನು ಅಕೌಂಟೆಂಟ್ ಜನರಲ್ ಅವರು ಅಲೋ ಮಾಡಬೇಕಾಗುತ್ತದೆ. ಹೀಗೆ ನಾನಾ ತೊಂದರೆಗಳು ಈ ರೀತಿಯಾದ ಖರ್ಚನ್ನು ಮಾಡಲು ಬರುತ್ತದೆ.

ನೋಡುವುದಕ್ಕೇನೋ ಸರಕಾರದವರೇನೋ ದೊಡ್ಡದಾಗಿ ಇಷ್ಟು ಕೆಲಸವನ್ನು ಮಾಡಿಬಿಟ್ಟಿದ್ದೇವೆಂದು ಹೇಳುತ್ತಾರೆಯೇ ಹೊರತು ಈ ರೀತಿ ಪ್ರೊಸಿಜರಲ್ ಡಿಫಿಕಲ್ಟಿಗಳೊಂದನ್ನೂ ನೋಡುತ್ತಿಲ್ಲ. ಹೀಗೆ ಮಾಡಿಯೂ ಕೂಡ ಎಲ್ಲರ ಅಪ್ರೂವಲ್ಲು ಆಗಿ ಅಕೌಂಟೆಂಟ್ ಜನರಲ್ ಅವರು ಒಪ್ಪದೇ ಹೋದರೆ ಆಗ ಈ ಹಣವನ್ನು ಡ್ರಾ ಮಾಡಿರುವ ಆಫೀಸರಿಗೆ ತೊಂದರೆಯಾಗುತ್ತದೆ. ಒಂದು ವೇಳೆ ಈ ಬಿಲ್ಲನ್ನು ಡ್ರಾ ಮಾಡಿದ ಆಫೀಸರು ಆ ವೇಳೆಗೆ ರಿಟೈರು ಆಗಿದ್ದರೂ ಕೂಡ ಅವರ ಪೆನ್‌ಷನ್ನಿನಲ್ಲೇ ಈ ಹಣವನ್ನು ಹಿಡಿದುಕೊಳ್ಳುತ್ತಾರೆ. ಹೀಗೆ ಹಣವನ್ನು ಕೊಡುವಾಗ ಅನೇಕ ಕಷ್ಟಗಳು ಇದ್ದೇ ಇರುತ್ತವೆ. ಕಾರಣ ಈ ಪ್ರೊಸೀಜರಲ್ ಡಿಫಿಕಲ್ಟಿಗಳನ್ನೆಲ್ಲ ತಾವು ಸ್ವಲ್ಪ ತಿದ್ದುಪಡಿಮಾಡಿ ಜಾಗ್ರತೆ ಹಣವನ್ನು ಒದಗಿಸಬೇಕು. ಮತ್ತು ಹೀಗೆ ಮಾಡಲು ಫೈನಾನ್‌ಷಿಯಲ್ ಎಕ್ಸ್‌ಪರ್ಟುಗಳ ಮತ್ತು ಟೆಕ್ನಿಕಲ್ ಎಕ್ಸ್‌ಪರ್ಟುಗಳ ಸಲಹೆಗಳನ್ನು ಕೇಳಿಕೊಂಡು ಈ ಕೆಲಸಗಳನ್ನು ಮಾಡಬೇಕು; ಮತ್ತು ಜಾಗ್ರತೆಯಾಗಿ ಈ ರೀತಿಯಾದ ಕಷ್ಟಗಳಿರುವ ಕಡೆ ತಾವು ಕೆಲಸ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹೊಸ ಕೆರೆಗಳನ್ನು ಕಟ್ಟುವದರಜೊತೆಗೆ ಹಳೆಯ ಕೆರೆಗಳನ್ನು ಮೊದಲು ರಿಪೇರಿಮಾಡಿಸಬೇಕು. ಈಗ ಇರುವ ಕಾಲುವೆ ರಿಪೇರಿಮಾಡಿ ನೀರು ಒದಗಿಸಿಕೊಡಬೇಕು. ಕನಕಪುರದ ಹತ್ತಿರ ಒಂದು ಕೆರೆ ಇದೆ. ಅಲ್ಲಿ ಎರಡು ಸಾವಿರ ಎಕರೆ ಭೂಮಿಯಲ್ಲಿ ಭತ್ತ ಬೆಳೆಯುತ್ತದೆ. ವರ್ಷದಲ್ಲಿ ಮೂರು ತಿಂಗಳು ಸಹ ನೀರು ದೊರೆಯುವದಿಲ್ಲ. ಅಧಿಕಾರಿಗಳು ಅಲಕ್ಷ್ಯ ಮಾಡಿದ್ದಾರೆ. ನೀರು ಇಲ್ಲದಿದ್ದರೆ ಏನಾಗುತ್ತದೆ ಎಂಬುದನ್ನು ಆಲೋಚನೆ ಮಾಡಬೇಕು. ಇಂಥ ಸನ್ನಿವೇಶವನ್ನು ತಡೆಗಟ್ಟಬೇಕು. ಹಿಂದೆ ಒಮ್ಮೆ ಮಾಡಿದ ತಪ್ಪನ್ನು ಇನ್ನು ಮುಂದೆಯಾದರೂ ಸರಿಪಡಿಸಬೇಕು. ವ್ಯವಸಾಯಗಾರರಿಗೆ ಸುಳ್ಳು ಹೇಳಬಾರದು, ಮೋಸಮಾಡಬಾರದು ಹಾಗೂ ದ್ರೋಹಮಾಡಬಾರದು. ಸತ್ಯದಿಂದ ನಡೆದುಕೊಂಡರೆ ಆಹಾರ ಅಭಾವ ಉಂಟಾಗುವುದಿಲ್ಲ. ಆಹಾರ ಅಭಾವದಿಂದ ತೊಂದರೆಯಾಗದಂತೆ ಮತ್ತು ದೇಶದ ಉದ್ಧಾರಕ್ಕೋಸ್ಕರವಾಗಿ ಮನಃಪೂರ್ವಕವಾಗಿ ಸತ್ಯದಿಂದ ನಡೆದುಕೊಳ್ಳಬೇಕು. ಸುಳ್ಳು ಭರವಸೆಕೊಟ್ಟರೆ ಖಂಡಿತವಾಗಿ ದೇಶಕ್ಕೆ ಒಳ್ಳೆಯದು ಆಗುವುದಿಲ್ಲ; ಮತ್ತು ಆಹಾರ ಪರಿಸ್ಥಿತಿ ಉತ್ತಮಗೊಳ್ಳುವುದಿಲ್ಲ.

*ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ನಮ್ಮ ಸರಕಾರ ರೈತರ ವಿಷಯದಲ್ಲಿ ಉದಾಸೀನಭಾವನೆಯನ್ನು ತಾಳಿದ್ದಾರೆಂದು ಕೆಲವು ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದ್ದನ್ನು ಕೇಳಿ ನನಗೆ ಬಹಳ ವ್ಯಸನವಾಯಿತು. ನಮ್ಮ ಸರಕಾರ ರೈತರಿಗಾಗಿ ಬಹಳ ಕಷ್ಟಪಡುತ್ತಿದೆ. ಅನೇಕ ನೀರಾವರಿ ಯೋಜನೆ, ಅಣೆಕಟ್ಟು ಮುಂತಾದವುಗಳನ್ನು ಮಾಡಿ ರೈತರಿಗೆ ವ್ಯವಸಾಯಕ್ಕೆ ಅನುಕೂಲಮಾಡಿಕೊಡುವುದಕ್ಕೆ ಸರಕಾರ ವಿಶೇಷ ಪ್ರಯತ್ನಪಡುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆ ಮುಗಿದು ಎರಡನೆಯ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗಿದೆ. ಹಾಗೆಯೇ ಮೂರನೆಯ ಪಂಚವಾರ್ಷಿಕ ಯೋಜನೆ ಸಹ ಬರಬಹುದು. ಆದರೆ ಇದರಿಂದ ಏನು ಪ್ರಯೋಜನವಾಗುತ್ತಿದೆ ಎಂಬುದು ಗೊತ್ತಿಲ್ಲ ಎಂದು ಇನ್ನೊಬ್ಬ ಸದಸ್ಯರು ಆಕ್ಷೇಪಮಾಡಿದರು. ನೀರಾವರಿ ಯೋಜನೆಗಳನ್ನು ಮಾಡಿದ್ದರಿಂದ ಸೌಲಭ್ಯ ಉಂಟಾಗಿಲ್ಲವೇ? ನಮ್ಮ ಸರಕಾರ ಮಾಡುತ್ತಿರುವ ಕೆಲಸದಲ್ಲಿ ಯಾವ ಸಂಶಯವನ್ನೂ ಇಟ್ಟುಕೊಳ್ಳುವುದು ಬೇಡ. ಖಂಡಿತವಾಗಿ ನಮ್ಮ ದೇಶ ರಾಮರಾಜ್ಯ ಆಗುತ್ತದೆ. ಆಫೀಸರುಗಳು ಹೇಳಿದ ಹಾಗೆ ಮಂತ್ರಿಗಳು ತೀರ್ಮಾನಮಾಡುತ್ತಾರೆಂದು ಒಬ್ಬ ಸದಸ್ಯರು ಟೀಕಿಸಿದರು. ಆದರೆ ನಮ್ಮ ಮಂತ್ರಿಗಳು ತಿಳಿವಳಿಕೆ ಇಲ್ಲದವರಾಗಿದ್ದಾರೆಯೇ? ಐ.ಎ.ಸ್. ಆಫೀಸರುಗಳಲ್ಲಿ ಸಹ ದೇಶಾಭಿಮಾನವಿಲ್ಲವೇ? ಮಂತ್ರಿಗಳು ಬರೀ ಪ್ರವಾಸಮಾಡುತ್ತಾರೆಂದು ಒಬ್ಬ ಸದಸ್ಯರು ಟೀಕಿಸಿದರು. ಮಂತ್ರಿಗಳು ಪ್ರವಾಸದಲ್ಲಿದ್ದಾಗ ಪರಿಸ್ಥಿತಿಯ ಪ್ರತ್ಯಕ್ಷ ನಿರೀಕ್ಷಣೆ ಮಾಡುವದಿಲ್ಲವೇ? ತಮ್ಮ ಕುಂದುಕೊರತೆಗಳ ಬಗ್ಗೆ ಜನರು ಮಂತ್ರಿಗಳಿಗೆ ಮನವಿಗಳನ್ನು ಕೊಡುವುದಿಲ್ಲವೇ? ಸರಕಾರಿ ಅಧಿಕಾರಿಗಳು ಸಹ ದೇಶಾಭಿಮಾನದಿಂದ ಕೂಡಿದವರಾಗಿದ್ದಾರೆ. ರಾಜ್ಯದಾಡಳಿತೆಯಲ್ಲಿ ಅಧಿಕಾರಿಗಳ ಅಭಿಪ್ರಾಯವನ್ನು ಸಹ ಮಂತ್ರಿಗಳಾದವರು ಕೇಳಿಕೊಳ್ಳಬೇಕಾಗುತ್ತದೆ. ಅವರಲ್ಲಿ ದೇಶಾಭಿಮಾನವಿಲ್ಲವೆಂದು ಹೇಳುವುದನ್ನು ನಾನು ಖಂಡಿಸುತ್ತೇನೆ. ಜನರಲ್ಲಿ ದೇಶಾಭಿಮಾನವಿರುವುದರಿಂದಲೇ ನಮಗೆ ಸ್ವಾತಂತ್ರ ದೊರೆತು ಪ್ರಜಾಪ್ರಭುತ್ವದಾಡಳಿತವನ್ನು ನಡೆಸುವುದಕ್ಕೋಸ್ಕರ ನಾವೂ ನೀವೂ ಸದಸ್ಯರಾಗಿ ಬಂದು ಇಂದು ಈ ಸಭೆಯಲ್ಲಿ ಕುಳಿತುಕೊಂಡಿದ್ದೇವೆ. ನಮಗೆಲ್ಲರಿಗೂ ಗೊತ್ತಿದ್ದಹಾಗೆ ನಮ್ಮ ಸರಕಾರದಲ್ಲಿ ಮತ್ತು ಕೇಂದ್ರ ಸರ್ಕಾರದಲ್ಲಿ ಧೈರ್ಯವಿದೆ, ಶಕ್ತಿ ಇದೆ.

ಈಗ ಚರ್ಚೆ ನಡೆದ ವಿಷಯದ ಬಗ್ಗೆ ಸರ್ಕಾರಕ್ಕೆ ಒಂದೆರಡು ಸಲಹೆಕೊಡಲು ನಾನು ಇಷ್ಟಪಡುತ್ತೇನೆ. ಸಣ್ಣ ಸಣ್ಣ ಕೆರೆಗಳನ್ನು ಜಾಗ್ರತೆ ದುರಸ್ತಿಮಾಡಬೇಕು. ಇದರಿಂದ ಅನುಕೂಲ ಹೆಚ್ಚಾಗುತ್ತದೆ. ಚಿರಗಾಲ ಕಾಮಗಾರಿಗಳನ್ನು ಅಭಾವ ಪ್ರದೇಶದಲ್ಲಿ ಜಾಗ್ರತೆ ಪ್ರಾರಂಭಿಸಿ ಪರಿಹಾರ ಕೊಡಬೇಕು. ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಗ್ರಾಮ ಕೈಗಾರಿಕೆಗಳನ್ನು ಪ್ರಾರಂಭಿಸಬೇಕು. ಹಳ್ಳಿಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚು ಗಮನಕೊಡಬೇಕು. ಇದರಿಂದ ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಅನುಕೂಲವಾಗುವುದು.

ಮಲೆನಾಡಿನ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ, ರೈತರಿಗೆ ಸಕಾಲದಲ್ಲಿ ಗೊಬ್ಬರ ಬೀಜ ಒದಗಿಸಿಕೊಡಲು ಅಲ್ಲಲ್ಲಿ ಡಿಪೋಗಳನ್ನು ತೆರೆಯಬೇಕು. ಕೇಂದ್ರ ಸರ್ಕಾರದ ಸಹಕಾರದಿಂದ ಆಹಾರ ಪರಿಸ್ಥಿತಿಯು ಜಾಗ್ರತೆ ಸುಧಾರಿಸುತ್ತದೆಂದು ನನಗೆ ಭರವಸೆ ಇದೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆಯು ಯಶಸ್ವಿಯಾಗಿ ನಮ್ಮ ದೇಶ ರಾಮರಾಜ್ಯವಾಗುತ್ತದೆಂದು ನಾನು ನಂಬಿದ್ದೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ನಾನು ವಂದನೆಗಳನ್ನು ಅರ್ಪಿಸುತ್ತೇನೆ.

*ಶ್ರೀ ಜಿ. ವೆಂಕಟೇಗೌಡ (ಪಾಳ್ಯಂ).—ಸ್ವಾಮಿ, ಇವತ್ತಿನ ದಿವಸ ನನ್ನ ಮಿತ್ರರಾದ ಅನೇಕ ಸದಸ್ಯರು ಈ ವಿಷಯದ ಬಗ್ಗೆ ಬಹಳ ಅರ್ಥಗರ್ಭಿತವಾಗಿ ಮಾತನಾಡಿದ್ದಾರೆ. ಎಲ್ಲಾ ವಿಷಯಗಳನ್ನೂ ಸ್ಪಷ್ಟಪಡಿಸಿದ್ದಾರೆ. ಇವತ್ತಿನ ದಿವಸ ಈ ಒಂದು ಸಮಸ್ಯೆ ನಮ್ಮ ಮುಂದೆ ಘೋರಾಕಾರವಾಗಿ ನಿಂತಿದೆ. ಈ ಆಹಾರ ಅಭಾವ ಪರಿಸ್ಥಿತಿಯನ್ನು ಸುಧಾರಿಸಲು ಯಾವ ನಿರ್ದಿಷ್ಟಕ್ರಮವನ್ನು ತೆಗೆದುಕೊಳ್ಳಬೇಕು ಎಂಬುದು ಗೊತ್ತಾಗುವುದಿಲ್ಲ. ಆಹಾರ ಪರಿಸ್ಥಿತಿಯು

(ಶ್ರೀ ಜಿ. ವೆಂಕಟೇಗೌಡ)

ಟಿಗ್ಗೆ ಇರವ ಅಂಕಿಅಂಶಗಳನ್ನು ಪರಿಶೀಲನೆ ಮಾಡಿದರೆ, ಅಖಿಲಭಾರತ ದೃಷ್ಟಿಯಿಂದ 1955-56 ಕ್ಕಿಂತಲೂ 1956-57ನೆಯ ವರ್ಷದಲ್ಲಿ ಶೇಕಡಾ 1·7 ರಷ್ಟು ಭತ್ತ ಬೆಳೆಯುವ ಪ್ರದೇಶ ಜಾಸ್ತಿಯಾಗಿದೆ ಎಂದು ಕಂಡುಬರುತ್ತದೆ. ಉತ್ಪನ್ನ ಶೇಕಡಾ 4·8 ರಷ್ಟು ಜಾಸ್ತಿಯಾಗಿದೆ. ಆದರೂ ಕೂಡ ಪರಿಸ್ಥಿತಿ ಸುಧಾರಿಸುವುದಕ್ಕೆ ಗಮನಕೊಟ್ಟಿಲ್ಲವೆಂದು ವಿಷಾದಪಡಬೇಕಾಗಿದೆ.

[MR. SPEAKER in the Chair.]

ನಮ್ಮ ಮಾನ್ಯ ಶ್ರೀ ರಾಚಯ್ಯನವರು ಅನೇಕ ಜನರ ಹತ್ತಿರ ದವಸಧಾನ್ಯವಿದೆ ಎಂದು ಹೇಳಿದರು. ಆದರೂ ಕೂಡ ಕೇಂದ್ರ ಸರ್ಕಾರದವರು ಡಿಸೆಂಬರ್ ತಿಂಗಳ ವರೆಗೆ ಅಕ್ಕಿಯನ್ನು ಸರಬರಾಯಿ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಆರ್ಡರ್ ಹೊರಡಿಸಿರುವುದರಿಂದ ಅದರಿಂದ ಸಮಾಜದಲ್ಲಿ ಎಷ್ಟರಮಟ್ಟಿಗೆ ಪರಿಣಾಮವಾಗುತ್ತದೆ, ಎನ್ನುವುದನ್ನು ನೋಡಬೇಕು. ಸಮಾಜದಲ್ಲಿ ಸ್ವಾರ್ಥಿಗಳು ಇದ್ದಾರೆ. ಅಂತಹವರು ಹೋರ್ಡ್ ಮಾಡಿ ಬೆಲೆ ಹೆಚ್ಚಾಗುವ ಒಂದು ಪರಿಸ್ಥಿತಿ ಉಂಟಾಗುತ್ತದೆ ಯಾರ ಯಾರ ಹತ್ತಿರ ಹೆಚ್ಚಿಗೆ ದವಸಧಾನ್ಯಗಳು ಇವೆಯೋ ಅವು ಸರ್ಕಾರದವರು ನಿಗದಿಮಾಡುವ ನ್ಯಾಯವಾದ ಬೆಲೆಗೆ ದೊರೆಯುವ ಅವಕಾಶ ಇರಬೇಕು. ಅದಕ್ಕೆ ಬೇಕಾದ ನಿಯಮಗಳನ್ನು ಕೂಡಲೇ ಹಾಕಿಕೊಳ್ಳಬೇಕು. ಇವೊತ್ತಿನ ದಿವಸ ದವಸಧಾನ್ಯಗಳನ್ನು ಮಾರ್ಕೆಟ್ಟಿನಲ್ಲಿ ಮಾರುವುದಕ್ಕೆ ಅವಕಾಶಕೊಟ್ಟಿದೆ. ಸರ್ಕಾರದವರು ಸೊಸೈಟಿಗಳನ್ನು ಸ್ಥಾಪಿಸಿ ಅದರಮೂಲಕ ದವಸಧಾನ್ಯಗಳು ಮಾರಾಟವಾಗಬೇಕು. ಇದನ್ನು ಯೋಚನೆಮಾಡಿ ತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕು. ಸಮಾಜದ ಸಹಾಯವನ್ನು ಪಡೆಯಬೇಕು. ಅನ್ನ ಇಲ್ಲದೆ ಇರುವವರು ಅನೇಕರು ಇದ್ದಾರೆ. ನಮ್ಮಲ್ಲಿರುವ ದವಸಧಾನ್ಯಗಳನ್ನು ನಿಗದಿಯಾದ ಬೆಲೆಗೆ ಕೊಡಬೇಕು. ಇದಕ್ಕಾಗಿ ಪ್ರಚಾರ ನಡೆಯಬೇಕು. ಈ ದೃಷ್ಟಿಯಿಂದ ಮಾನ್ಯಮಿತ್ರರು ಹೇಳಿದ ರೀತಿಯಲ್ಲಿ ಕೂಡಲೇ ಒಂದು ಕ್ಷಾಮನಿಧಿಯನ್ನು ಸರ್ಕಾರದವರು ಸ್ಥಾಪನೆಮಾಡಬೇಕು. ಅದಕ್ಕೆ ಮಂತ್ರಿಗಳೂ, ಸದಸ್ಯರೂ ಸಹಕರಿಸಿ ಆದಷ್ಟು ಹಣವನ್ನು ಶೇಖರಿಸಿ ಯಾವ ಯಾವ ಜಿಲ್ಲೆಗಳಲ್ಲಿ ಉತ್ಕಟಾವಸ್ಥೆ ಇದೆಯೋ ಅಲ್ಲಿಗೆ ಪರಿಹಾರ ಒದಗಿಸುವುದು ನಮ್ಮ ಮುಖ್ಯ ಕರ್ತವ್ಯ ಎಂದು ನನ್ನ ಅಭಿಪ್ರಾಯ. ಇದರಿಂದ ಗ್ರಾಮಾಂತರ ಪ್ರದೇಶದಲ್ಲಿ ಸ್ವಲ್ಪಮಟ್ಟಿಗೆ ಸುಧಾರಣೆ ಆಗುವುದಕ್ಕೆ ಸಹಾಯವಾಗುತ್ತದೆ ಎನ್ನುವ ಅಭಿಪ್ರಾಯವನ್ನು ಹೊಂದಿದ್ದೇನೆ. ಈ ರೀತಿ ಸಮಾಜದ ಹಿತವನ್ನು ಬಯಸುವವರಿಂದ ಸಹಾಯವನ್ನು ಪಡೆಯುವ ಕಾರ್ಯಕ್ರಮ ಹಾಕಿಕೊಳ್ಳಬೇಕು. ನಮ್ಮ ಅನೇಕ ಮಿತ್ರರು ಏನೇನುಮಾಡಬೇಕು ಎನ್ನುವುದಕ್ಕೆ ಸಲಹೆ ಕೊಟ್ಟಿದ್ದಾರೆ. ಅದನ್ನು ಜರೂರಾಗಿ ನಡೆಸದೆ ಇದ್ದರೆ ಪರಿಸ್ಥಿತಿ ಹತೋಟಿಗೆ ಬರುವುದಕ್ಕೆ ಸಾಧ್ಯವಾಗುವುವಿಲ್ಲ. ಎಲ್ಲಕ್ಕಿಂತಲೂ ಆಹಾರ ಪ್ರಶ್ನೆ ಮುಖ್ಯ ಮತ್ತು ಮನುಷ್ಯನಿಗೆ ಅವಶ್ಯಕ. ಆದ್ದರಿಂದ ಇದರ ಪೂರೈಕೆಗೆ ಗಮನಕೊಡದಿದ್ದರೆ ಸರ್ಕಾರ ಇದ್ದು ಪ್ರಯೋಜನವಿಲ್ಲ ಎಂದು ವ್ಯಸನದಿಂದ ಹೇಳಬೇಕಾಗುತ್ತದೆ. ಮಾನ್ಯ ಸ್ನೇಹಿತರು ಅನೇಕ ಸಲಹೆಗಳನ್ನು ಹೊರಪಡಿಸುತ್ತಾ ಹೇಳಿದರು. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿಗೆ ಆಗಬೇಕಾದ ಕಾಮಗಾರಿಗಳನ್ನು ಮಾಡಿಸಿದರೆ, ಅದರಿಂದ ಅನೇಕ ಜನಗಳಿಗೆ ಕೆಲಸ ಸಿಕ್ಕುತ್ತದೆ ಪರ್ಚೇಸಿಂಗ್ ಕೆಪ್ಯಾಸಿಟಿ ಉಂಟಾಗುವುದಕ್ಕೆ ಸಾಧ್ಯವಾಗುತ್ತದೆ. ಹೀಗೆ ಮಾಡಿ ಇಂಥ ಪರಿಸ್ಥಿತಿಯನ್ನು ಹದಕ್ಕೆ ತರಬೇಕು ಎಂದು ಸರ್ಕಾರವನ್ನು ಒತ್ತಾಯಮಾಡಿ ಕೇಳಿಕೊಳ್ಳಬೇಕಾಗಿದೆ. ಮಾನ್ಯ ಮಿತ್ರರು ಅನೇಕರು ರೈತರ ವಿಷಯದಲ್ಲಿ ನಿಕೃಷ್ಟಭಾವನೆಯನ್ನು ಕಾಣುತ್ತಿದ್ದೇವೆ ಎಂದು ಟೀಕೆಮಾಡಿದರು. ಅದು ವಾಸ್ತವ ಮತ್ತು ನಿಜವಾದ ಅಂಶ. ರೈತನ ವಿಚಾರದಲ್ಲಿ ಜತ್ತಿ ಸಮಿತಿ ವರದಿ ಬಂದಿದೆ. ಅದನ್ನು ಟೀಕೆಮಾಡುವ ಗೋಜಿಗೆ ಹೋಗುವುದಿಲ್ಲ. ಆದರೂ ಇದು ರೈತನಲ್ಲಿ ಇರುವ ಆಸಕ್ತಿಯನ್ನು ಮೊಟಕುಮಾಡಿದೆ. ಆದಾಯ ನಿಗದಿಮಾಡಬೇಕು, ಉತ್ಪತ್ತಿ ಮಿನಿಮಮ್ ಮಾಡಬೇಕು ಎನ್ನುವ ದೃಷ್ಟಿಯಿಂದಲೇ ಹೋದರೆ ಸಮತಾವಾದ ಸಮಾಜ ಕಟ್ಟುವುದಕ್ಕೆ ಆಗುವುದಿಲ್ಲ. ರೈತನ ಉತ್ಪನ್ನ ಇದರಿಂದ ಕಡಮೆಯಾಗಿ ಹತ್ತು ಪಲ್ಲ ಬೆಳೆಯುತ್ತಿದ್ದವನು ಎರಡು ಪಲ್ಲ ಬೆಳೆಯುವುದಕ್ಕೂ ಸಾಧ್ಯವಾಗುವುದಿಲ್ಲ. ಸರ್ಕಾರದವರು ಪ್ರಾಕ್ಟಿಕಲ್ ಆಗಿ ಏನೇನು ಮಾಡುವುದಕ್ಕೆ ಸಾಧ್ಯವೋ, ರೈತನು ಹೆಚ್ಚಿಗೆ ಉತ್ಪನ್ನ ಮಾಡುವುದಕ್ಕೆ ಮತ್ತು ಆತನಲ್ಲಿ ಆಸಕ್ತಿ ಹುಟ್ಟಿಸುವುದಕ್ಕೆ ಏನೇನು ಮಾಡಬೇಕೋ ಅದಕ್ಕೆಲ್ಲಾ ಸರ್ಕಾರದವರು ಹೆಚ್ಚಿಗೆ ಗಮನವನ್ನು ಕೊಡಬೇಕು. ಅದಕ್ಕಿಂತ ಮುಖ್ಯವಾದ ವಿಷಯ ಬೇರೆ ಇಲ್ಲ. ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

• ಅಧ್ಯಕ್ಷರು.—ಎಲ್ಲಾ ಮೆಂಬರುಗಳಿಗೂ ಮಾತನಾಡುವುದಕ್ಕೆ ಐದು ನಿಮಿಷಕ್ಕೆ ಜಾಸ್ತಿ ಕೊಡುವುದಕ್ಕಾಗುವುದಿಲ್ಲ. ಪ್ರತಿಯೊಬ್ಬರೂ ಐದು ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೇ, ಕ್ಷಾಮಪರಿಹಾರ ವಿಷಯವಾಗಿ ಕೆಲವು ಸೂಚನೆಗಳನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ ಹೇಳಬೇಕಾದರೆ ಹೋದ ವರ್ಷ ಇಂಟಿಗ್ರೇಷನ್ ಆದಮೇಲೆ ಹೈದ್ರಾಬಾದ್ ಕರ್ಣಾಟಕ ಮತ್ತು ಬೊಂಬಾಯಿ ಕರ್ಣಾಟಕದಲ್ಲಿ ವಿಶೇಷ ಕ್ಷಾಮಪ್ರಾಪ್ತಿಯಾಗಿ ಜನಗಳು ಸಮೃದ್ಧಿಯಾಗಿ ಬೆಳೆಯದೆ ಇರುವುದಕ್ಕೆ ಕಾರಣವಾಗಿದೆ. ಈ ವರ್ಷ ಹಳೆಯ ಮೈಸೂರಿಗೆ ಕ್ಷಾಮ ಒದಗಿರುವುದು ನೋಡಿ ಬಹಳ ವ್ಯಸನವಾಗಿದೆ. ಕ್ಷಾಮ ಬರುವುದಕ್ಕೆ ಅನೇಕ ಕಾರಣಗಳಿವೆ. ಮಳೆ ಬಾರದೆ ಇರುವುದು ಮೊದಲನೆಯ ಕಾರಣ. ಇದು ದೇವರ ಲೀಲೆ. ಆದ್ದರಿಂದ ಬೆಳೆ ಬೆಳೆಯುವುದಕ್ಕೆ ಜನಗಳಿಂದ ಸಾಧ್ಯವಿಲ್ಲದೆ ಹೋಗಿದೆ. ಇನ್ನು ಎರಡನೆಯ ವಿಷಯ ಹೇಳಬೇಕಾದರೆ ಚೈನಾ ಮತ್ತು ಇತರ ಪ್ರದೇಶಗಳು ಸ್ವತಂತ್ರವಾಗಿ ಸ್ವಲ್ಪ ದಿವಸಗಳಲ್ಲೇ ತಮ್ಮ ಆಹಾರ ಪರಿಸ್ಥಿತಿಯನ್ನು ಬಹಳ ಮಟ್ಟಿಗೆ ಉತ್ತಮಸ್ಥಿತಿಗೆ ತಂದುಕೊಂಡಿದ್ದಾರೆ. ನಮ್ಮ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಎಷ್ಟೋ ನೀರಾವರಿ ಯೋಜನೆಗಳನ್ನು ಕಟ್ಟಿದ್ದಾಗ್ಯೂ, ಸ್ವಾತಂತ್ರ್ಯ ಬಂದು ಹತ್ತು ವರ್ಷಗಳು ಆದಾಗ್ಯೂ ಕೂಡ ಇವತ್ತಿನವರೆಗೂ ಆಹಾರದ ಪರಿಸ್ಥಿತಿ ಉತ್ತಮಗೊಳಿಸದೆ ಇರುವುದು ನೋಡಿ ಬಹಳ ವ್ಯಸನಪಡಬೇಕಾಗಿದೆ. ಆಹಾರ ಪರಿಸ್ಥಿತಿ ಸುಧಾರಿಸಿಲ್ಲ ಎಂಬುದಕ್ಕೆ ಏನಾದರೂ ಲೋಪದೋಷಗಳು ಇರಬೇಕು. ಲೋಪದೋಷಗಳಿಲ್ಲದಿದ್ದರೆ ಆಹಾರದ ಪರಿಸ್ಥಿತಿ ಈರೀತಿ ಇರುತ್ತಿರಲಿಲ್ಲ ಎಂದು ನನಗೆ ಎನಿಸುತ್ತದೆ. ಲೋಪದೋಷಗಳು ಏನು ಎಂದರೆ ಮೊದಲನೆಯದಾಗಿ ರೈತರಿಗೆ ಉತ್ಸಾಹವಿಲ್ಲ. ಅವನು ಚೆನ್ನಾಗಿ ಗೊಬ್ಬರಹಾಕಿ ಒಡ್ಡು ವಗ್ಯೆರೆಮಾಡಿ ಅಭಿವೃದ್ಧಿಮಾಡಿದ ಭೂಮಿ ಅವನಿಗೆ ಉಳಿಯುತ್ತದೆಯೋ ಇಲ್ಲವೇ ಎನ್ನುವ ಅನುಮಾನ

ಒಂದನೆಯದು. ಎರಡನೆಯದು ಬೆಳೆಯತಕ್ಕ ಮಾಲಿಗೆ ನಿರ್ದಿಷ್ಟವಾದ ಬೆಲೆ ಸಿಕ್ಕಲಾರದೆ ಅವನು ನಿರುತ್ಸಾಹಿಯಾಗಿದ್ದಾನೆ. ಮೂರನೆಯದು ಪದೇ ಪದೇ ಅವನು ಕೊಟ್ಟಂಥ ಹಣವನ್ನು ಸರ್ಕಾರದವರು ತಂದು ಸಿಟಿಗಳನ್ನು ಅಭಿವೃದ್ಧಿಮಾಡಿ ಹಳ್ಳಿಗಳ ಕಡೆಗೆ ಏನೂ ಉತ್ತೇಜನ ಕೊಡದೆ ಇರುವುದು. ನೀವು ಕಂದಾಯಗಳನ್ನು ಸಿಟಿಗಳಲ್ಲೇ ಉಪಯೋಗಿಸಿಕೊಂಡು ಅವುಗಳನ್ನು ಇಂಪ್ರೂವ್‌ಮಾಡಿ ಹಳ್ಳಿಗಳನ್ನು ನಿರ್ಲಕ್ಷ ಮಾಡುತ್ತಿರುವುದು ಕೂಡ ರೈತರಿಗೆ ಒಂದು ಬಗೆಯ ನಿರುತ್ಸಾಹ. ರೈತರನ್ನು ನಿರ್ಲಕ್ಷ್ಯದಿಂದ ನೋಡುವುದ ರಿಂದ ಅವರು ಪಟ್ಟಣಗಳನ್ನು ಸೇರಿ ಭೂಮಿಯು ಬಂಜರಾಗಿ ಬಿಡುತ್ತದೆ. ಸರ್ಕಾರದವರ ಹತ್ತಿರ ಇರುವ ಎಷ್ಟೋ ಲಕ್ಷ ಎಕರೆ ಭೂಮಿಯ ಕಡೆ ಇವತ್ತಿನ ವರೆಗೂ ಸರ್ಕಾರದವರು ಗಮನಕೊಡಲಿಲ್ಲ. ಇದನ್ನು ಅಭಿವೃದ್ಧಿಮಾಡಿ ಜನರಿಗೆ ಹಂಚಬೇಕು. ಆದರೆ ಅದರಿಂದ ಆಹಾರ ಉತ್ಪತ್ತಿ ಹೆಚ್ಚು ಆಗಬಹುದು ಎಂದು ನನ್ನ ಅಭಿಪ್ರಾಯ.

6-30 P.M.

ಆಹಾರದ ಮಟ್ಟವನ್ನು ಹೆಚ್ಚಿಸಬೇಕಾದರೆ, ಸರ್ಕಾರದವರು ರೈತರಿಗೆ ಆದಷ್ಟು ಸೌಲಭ್ಯ ಒದಗಿಸಬೇಕು. ಕೃತಕ ಗೊಬ್ಬರ ಕೊಡುವುದು, ಒಳ್ಳೆಯ ತೆರದ, ಉತ್ತಮವಾದ ಬೀಜಗಳನ್ನು ಸಕಾಲದಲ್ಲಿ ಒದಗಿಸುವುದು, ಸರಿಯಾದ ಎತ್ತುಗಳನ್ನು ಕೊಡುವುದು— ಇಂತಹ ಅನುಕೂಲಗಳನ್ನು ರೈತನಿಗೆ ಮಾಡಿಕೊಡಬೇಕು. ಇದಲ್ಲದೆ, ಸಾಲಗಳು ಮುಂತಾದ ಅನುಕೂಲಗಳು ಅವನಿಗೆ ಸಿಕ್ಕುವ ಹಾಗೆ ಮಾಡಿಕೊಡಬೇಕು. ಈ ಅನುಕೂಲಗಳನ್ನು ಒದಗಿಸಿಕೊಟ್ಟರೆ, ರೈತ ಅವುಗಳನ್ನು ಉಪಯೋಗಿಸಿಕೊಂಡು, ಚೆನ್ನಾಗಿ ಬೆಳೆ ಬೆಳೆದು, ಅವನ ಆರ್ಥಿಕಮಟ್ಟವನ್ನು ಏರಿಸಿಕೊಳ್ಳುತ್ತಾನೆ. ಅವನ ಆರ್ಥಿಕಮಟ್ಟ ಏರಿದಂತೆ, ಅವನು ಭೂಮಿಯನ್ನು ಚೆನ್ನಾಗಿ ಹದಮಾಡಿ, ಹೆಚ್ಚಾಗಿ ಆಹಾರ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಅವನ ಆರ್ಥಿಕಸ್ಥಿತಿ ಏರದಿದ್ದರೆ ಅವನ ಜಮೀನನ್ನು ವೃದ್ಧಿಗೊಳಿಸುವುದಕ್ಕಾಗುವುದಿಲ್ಲ. ಆಹಾರವನ್ನು ಹೆಚ್ಚಿಗೆ ಬೆಳೆಯುವುದಕ್ಕೂ ಅನುಕೂಲವಾಗುವುದಿಲ್ಲ. ಸರ್ಕಾರದವರಿಗೆ ಇನ್ನೊಂದು ಸಲಹೆ ಮಾಡುವುದೇನೆಂದರೆ: ಕಂದಾಯವನ್ನು ದುಡ್ಡಿನ ಮೂಲಕ ತೆಗೆದುಕೊಳ್ಳುವುದು ಬಿಟ್ಟು, ಧಾನ್ಯದ ಮೂಲಕ (ಕೈಂಡ್‌ನಲ್ಲಿ) ವಸೂಲು ಮಾಡಿ, ಸ್ಟೋರ್ ಮಾಡಿಕೊಂಡು ಸ್ಕೇರ್ಸಿಟಿ ಪೀರಿಯಾಗಳಿಗೆ ಸಪ್ಲೈ ಮಾಡಿದರೆ, ಬಹಳ ಒಳ್ಳೆಯದಾಗುತ್ತದೆ. ಬರಗಾಲದ ಕಾಮಗಾರಿಗಳನ್ನು ಸರ್ಕಾರದವರು ಜಾಗ್ರತೆ ಪ್ರಾರಂಭ ಮಾಡಬೇಕು, ಅಪ್ರೋಚ್ ರೋಡುಗಳು, ಹಳ್ಳಿ ರೋಡ್ ರಿಪೇರಿಗಳು, ಟ್ಯಾಂಕ್ ರಿಪೇರಿ ಮುಂತಾದ ಕೆಲಸಗಳನ್ನು ತೆಗೆದುಕೊಂಡು ಜನಗಳಿಗೆ ಕೂಲಿ ಒದಗಿಸಿಕೊಡಬೇಕು ; ಮತ್ತು ಸರಿಯಾದ ಕಾಲದಲ್ಲಿ ಕೂಲಿ ಸಿಕ್ಕುವುದಕ್ಕೆ ಏರ್ಪಾಡು ಮಾಡಬೇಕು. ಏಕೆಂದರೆ, ನನ್ನ ಅನುಭವದಲ್ಲಿ ಬರಗಾಲ ಕಾಮಗಾರಿಗಳಷ್ಟನ್ನೂ ಪಿ. ಡಬ್ಲ್ಯು. ಡಿ. ಯವರಿಗೆ ಒಪ್ಪಿಸುವುದರಿಂದ ಜನರಿಗೆ, ಕೂಲಿಗಾರರಿಗೆ ಬಹಳ ಅನಾನುಕೂಲವಾಗಿದೆ, ಅವರಿಗೆ ಸರಿಯಾದ ಕಾಲದಲ್ಲಿ ಕೂಲಿ ಸಿಕ್ಕದೆ ಬಹಳ ತೊಂದರೆಯಾಗಿರುವುದು ನನ್ನ ಅನುಭವಕ್ಕೆ ಬಂದಿದೆ. ರೆವಿನ್ಯೂ ಡಿಪಾರ್ಟ್‌ಮೆಂಟಿನವರು ಡೈರೆಕ್ಟ್ ಆಗಿ ಕಾಮಗಾರಿಗಳನ್ನು ಸ್ಥಾಪಿಸಿ ಮಾಡಿ, ಹೆಂಗಸರಿಗೂ ಗಂಡಸರಿಗೂ ಸಣ್ಣ ಹುಡುಗರಿಗೂ ಕೆಲಸ ಒದಗಿಸಿ, ಬರಗಾಲದ ಕಷ್ಟವನ್ನು ನಿವಾರಿಸಬೇಕೆಂದು ಹೇಳುತ್ತೇನೆ.

*ಶ್ರೀ ಇ. ನಾರಾಯಣಗೌಡ (ಬಂಗಾರಪೇಟೆ).— ಸ್ವಾಮಿ, ನನಗೆ ಆಹಾರದ ಪರಿಸ್ಥಿತಿಯ ವಿಷಯವಾಗಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ. ನನಗೆ ಕೊಟ್ಟಿರುವ ಐದು ನಿಮಿಷಗಳಲ್ಲಿ ನಮ್ಮ ಜಿಲ್ಲಾ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ವಿವರಿಸಲು ಪ್ರಯತ್ನಿಸುತ್ತೇನೆ.

ನಮ್ಮ ಕೋಲಾರ ಜಿಲ್ಲೆಯಲ್ಲಿ ಮೂರು ನಾಲ್ಕು ವರ್ಷಕ್ಕೊಂದು ಸಲ ಮಳೆ ಅಭಾವದ ಪ್ರಯುಕ್ತ ಕ್ಷಾಮ ತಲೆದೋರುವುದು ಸ್ವಾಭಾವಿಕವಾಗಿದೆ. ಇಂತಹದರಲ್ಲಿ ನಮ್ಮ ಸರ್ಕಾರದವರು ಈ ಜಿಲ್ಲೆಗೆ ಖಾಯಂ ಆಗಿ ಪರಿಹಾರ ನೀಡುವುದರಲ್ಲಿ ಹಿಂದೆ ಉಳಿದಿದ್ದಾರೆಂದರೆ ತಪ್ಪಾಗಲಾರದು. ಎರಡು ತಿಂಗಳ ಹಿಂದೆ ನಮ್ಮ ಜಿಲ್ಲೆಯ ಪರಿಸ್ಥಿತಿಯ ವಿಚಾರವಾಗಿ ನಮ್ಮ ಜಿಲ್ಲೆಯ ಹನ್ನೆರಡು ಜನ ಸದಸ್ಯರು ಮಾನ್ಯ ಮುಖ್ಯ ಮಂತ್ರಿಗಳಿಗೂ, ಇತರ ಮಂತ್ರಿಗಳಿಗೂ ಒಂದು ಮೆಮೊರಾಂಡಮ್ ಅನ್ನು ಕಳುಹಿಸಿರುತಾರೆ. ಈ ಮೆಮೊರಾಂಡಮಿನ ಬಗ್ಗೆ ಸರ್ಕಾರದವರು ಇನ್ನೂ ಲಕ್ಷ್ಯ ತೆಗೆದುಕೊಂಡಿಲ್ಲ. ರೆವಿನ್ಯೂ ಮಂತ್ರಿಗಳು ಹೇಳಿದರು, ಜಿಲ್ಲೆಯಲ್ಲಿ ಪರಿಹಾರ ಕಾರ್ಯಗಳು ಆರಂಭವಾಗಿವೆ, ಮಳೆ ಬಂದದ್ದರಿಂದ ಕೆಲಸಕ್ಕೆ ಜನ ಹೆಚ್ಚಾಗಿ ಬರುತ್ತಿಲ್ಲ ಎಂದು. ಇದು ಸತ್ಯಕ್ಕೆ ದೂರವಾದ ಅಂಶ. ಈವರೆಗೆ ಅವರು ಹೇಳಿರುವ ಹಾಗೆ ಯಾವ ಕೆಲಸವನ್ನೂ ಆರಂಭಿಸಿಲ್ಲ. ಕಳೆದ ತಿಂಗಳಲ್ಲಿ ಸ್ಥಳೀಯ ಅಧಿಕಾರಗಳೊಡನೆ ನಮ್ಮ ಜಿಲ್ಲೆಯ ಪ್ರವಾಸ ಕೈಕೊಂಡಾಗ, ಅಲ್ಲಿ ಭೀಕರ ಪರಿಸ್ಥಿತಿ ಕಾಣುತ್ತಾ ಇತ್ತು. ಎಷ್ಟೋ ಹಳ್ಳಿಗಳಲ್ಲಿ ಬಿತ್ತನೆ ಸಹ ಆಗಿಲ್ಲ. ಮಳೆ ಬಂದದ್ದರಿಂದ ಬೀಜ ಹಾಕಿದರೂ ಕೂಡ, ರೈತನ ಕೈಗೆ ಬೆಳೆ ಬರುವ ಸಂಭವವಿಲ್ಲ. ಇನ್ನು ಮಳೆ ಬಂದರೂ ಕೂಡ, ಭತ್ತದ ಬೆಳೆ ಸುತರಾಮ್ ಆಗುವುದಿಲ್ಲ. ಇಷ್ಟೊಂದು ಭೀಕರ ಪರಿಸ್ಥಿತಿ ಇದ್ದಾಗ್ಯೂ ಕೂಡ, ಮಂತ್ರಿಗಳು ಜಿಲ್ಲಾ ಪ್ರವಾಸ ಕೈಗೊಳ್ಳಲಿಲ್ಲ. ಒಬ್ಬರು ಮಂತ್ರಿಗಳೂ ಪರಿಸ್ಥಿತಿ ಹದಗೆಟ್ಟಿರುವ ಬೆಂಗಳೂರು, ತುಮಕೂರು ಜಿಲ್ಲೆಗಳಲ್ಲಿ ಸಹ ಸಂಚಾರ ಮಾಡಲಿಲ್ಲ. ಸರ್ಕಾರದವರು ವಿಚಿತ್ರವಾದ ಉದಾರತೆ ಇಟ್ಟುಕೊಂಡಿದ್ದಾರೆ! ಕಳೆದ ತಿಂಗಳು ಮಾನ್ಯ ಮಂತ್ರಿಗಳಾದ ಶ್ರೀ ಟಿ. ಮರಿಯಪ್ಪನವರು ಬೇತಮಂಗಲಕ್ಕೆ ಬಂದಿದ್ದರು. ಟಿ. ಬಿ. ಯಲ್ಲಿ ಎರಡು ದಿವಸ ತಂಗಿದ್ದು, ವಾಪಸ್ಸು ಬಂದುಬಿಟ್ಟರು. ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ ಇದ್ದರೂ ಸಂಚಾರ ಮಾಡಲಿಲ್ಲ. ಈ ರೀತಿ ತಿಂಗಳ ಕೊನೆಗೆ ತಮ್ಮ ಟಿ.ಎ. ಲ್ಯಾಪ್ಸ್ ಆಗಬಾರದು ಎಂದು ಪ್ರವಾಸ ಹಾಕಿಕೊಂಡರೆ, ಅದರಿಂದ ಪ್ರಯೋಜನವಿಲ್ಲ. ಮಂತ್ರಿಗಳು ಪರಿಸ್ಥಿತಿಯನ್ನು ಖುದ್ದು ಪರಿಶೀಲನೆಮಾಡಿ, ಪರಿಸ್ಥಿತಿಗೆ ತಕ್ಕಂತೆ ಸೌಕರ್ಯ ಕಲ್ಪಿಸಿ ಕೊಡಬೇಕಾದದ್ದು ನಾಗರಿಕ ಸರ್ಕಾರದ ಕರ್ತವ್ಯ. ಆಹಾರ ಪರಿಸ್ಥಿತಿಯ ವಿಚಾರವಾಗಿ ವಿವರಗಳನ್ನೆಲ್ಲಾ ಹೇಳಬೇಕಾದರೆ ಕೊಟ್ಟಿರುವ ಕಾಲ ಸಾಲದು. ಕೆಲವು ಕಡೆ ಫುಡ್ ಡಿಪೋಗಳನ್ನು ಓಪನ್ ಮಾಡಿದ್ದೀರಿ. ಕೆಲವು ಕಡೆ ಸಹಕಾರ ಸಂಘಗಳ ಮೂಲಕ ಆಹಾರ ಧಾನ್ಯ ಮಾರಾಟ ಮಾಡಿಸುತ್ತಾ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಈ ರೀತಿ ಸಹಕಾರ ಸಂಘಗಳ ಮೂಲಕ ಮಾರಾಟವಾಗುತ್ತಿಲ್ಲ. ಅಕ್ಕಿ ಮತ್ತು ಗೋಧಿ ಮಾರಾಟ ಮಾಡಿಸುತ್ತಾ ಇದ್ದೀರಿ. ಆದರೆ ಕೂಲಿಯವರು ಬರೀ ಅಕ್ಕಿಯನ್ನು ಕೊಂಡುಕೊಂಡು ಜೀವಿಸುವುದಕ್ಕಾಗುವುದಿಲ್ಲ. ರಾಗಿ, ಜೋಳ ಇಂತಹ ಧಾನ್ಯಗಳನ್ನು ಬೇರೆ ಕಡೆಯಿಂದ ತರಿಸಿ ಮಾರಾಟ

(ಶ್ರೀ ಇ. ನಾರಾಯಣಗೌಡ)

ಮಾಡುವುದು ಸರ್ಕಾರದ ಕರ್ತವ್ಯ. ಬಡ್ಜೆಟ್ ಪಾಸ್ ಆಗಿ ಎರಡು ತಿಂಗಳ ಮೇಲಾಯಿತು. ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ಗ್ರಾಂಟು ಇನ್ನೂ ನಮ್ಮ ಜಿಲ್ಲೆಗೆ ಬಂದಿಲ್ಲ. ಜಿಲ್ಲಾಧಿಕಾರಿಗಳನ್ನು ಕೇಳಿದರೆ, ಇನ್ನೂ ನಮಗೆ ಗ್ರಾಂಟ್ ಬಂದಿಲ್ಲ ಎಂದು ಹೇಳುತ್ತಾರೆ. ಮರಾಮತ್ ಇಲಾಖೆಯವರೂ ಅದೇ ರೀತಿ ಹೇಳುತ್ತಾರೆ. ಸರ್ಕಾರದವರು ವಿಚಿತ್ರವಾದ ಬೂಟಾಟಿಕೆ ಬಡ್ಜೆಟ್ ಇಡುತ್ತಾರೆಂದು ಭಾವಿಸೋಣವೇ? ಸಕಾಲಕ್ಕೆ ಹಣ ಕೊಟ್ಟರೆ, ತಾಲ್ಲೂಕಿಗೆ ಬೇಕಾದ ಕೆಲಸ ಕಾರ್ಯಗಳನ್ನು ಜಾಗ್ರತೆಯಾಗಿ ಮಾಡಿ ಮುಗಿಸಬಹುದು. ಬಡ್ಜೆಟ್ ಅಲಾಟ್‌ಮೆಂಟನ್ನು ಫೆಬ್ರುವರಿ ಇಪ್ಪತ್ತಕ್ಕೆ ಕೊಡುವುದು, ಮಾರ್ಚಿ ಒಂದಕ್ಕೆ ಲ್ಯಾಪ್ಸ್ ಆಯಿತು ಎನ್ನುವುದು ಒಂಭತ್ತು ಕೋಟಿ ರೂಪಾಯಿ ಲ್ಯಾಪ್ಸ್ ಮಾಡಿ ಉಳಿತಾಯ ಮಾಡುವ ಅಂತರ್ಯದ ಯೋಚನೆ ಇಟ್ಟುಕೊಂಡಿದ್ದೀರಾ? ನಮ್ಮ ಮಂತ್ರಿಗಳು ಹೇಳಿದರು; ಈಗ ಜನ ಕೂಲಿಗೆ ಬರುತ್ತಾ ಇಲ್ಲ, ಕೆಲಸ ನಿಲ್ಲಿಸಬೇಕಾಗಿ ಬಂದಿದೆ ಎಂದು. ಆದರೆ ನಮ್ಮ ತಾಲ್ಲೂಕಿನಲ್ಲಿ ಈವರೆಗೂ ಕೆಲಸವನ್ನು ಪ್ರಾರಂಭಿಸಿಯೇ ಇಲ್ಲ. ಬಡ ಜನರು ಕೆ. ಜಿ. ಎಫ್.ನಿಂದ ಹದಿನೈದು ಮೈಲಿ ಇರುವ ಕಾಡಿಗೆ ಹೋಗಿ ಮರ ಕಡಿದು, ಕೂಲಿ ಮಾಡಿ, ಜೀವನ ನಡೆಸುತ್ತಿದ್ದಾರೆ. ನೀರಾವರಿ ಕಾಮಗಾರಿಗಳನ್ನು ಹೆಚ್ಚಾಗಿ ಕೈಗೊಳ್ಳಬೇಕು. ನಮ್ಮ ಕೋಲಾರ ಜಿಲೆಯಲ್ಲಿ ಜೀವನದಿಗಳು ಯಾವುವೂ ಇಲ್ಲ. ಸಣ್ಣ ಸಣ್ಣ ಕೆರೆಗಳು ಮಾತ್ರ ಇವೆ. ಆದ್ದರಿಂದ ಬೋರ್‌ವೆಲ್‌ಗಳನ್ನು ಹಾಕಿ ನೀರನ್ನು ಒದಗಿಸುವ ಏರ್ಪಾಡು ಮಾಡಬೇಕು. ಕೆರೆಗಳ ಹೂಳು ತೆಗೆಯುವುದರಿಂದ, ಸಾವಿರಾರು ಜನರಿಗೆ ಕೂಲಿ ಸಿಕ್ಕಹಾಗಾಗುತ್ತದೆ, ಕೆರೆಗಳನ್ನು ಅಭಿವೃದ್ಧಿ ಮಾಡಿದಹಾಗಾಗುತ್ತದೆ. ಸರ್ಕಾರದವರು ಈ ಯೋಜನೆಗಳನ್ನು ತೆಗೆದುಕೊಳ್ಳುತ್ತಾರೆಂದು ಭಾವಿಸುತ್ತೇನೆ.

*ಶ್ರೀ ಜಿ. ಅಣ್ಣಾರಾವ್ (ಅಫಸಲ್‌ಪುರ್).—ಅಧ್ಯಕ್ಷರೆ, ಇಲ್ಲಿಯವರೆಗೂ ಪರಿಸ್ಥಿತಿಯ ವಿಷಯವಾಗಿ ಅಲ್ಪಾವಧಿ ಮತ್ತು ದೀರ್ಘಾವಧಿ ಸೂಚನೆಗಳು ಈ ಮನೆಯ ಮುಂದೆ ಬಂದಿವೆ. ಇಂಗ್ಲೀಷಿನಲ್ಲಿ ಒಂದು ಮಾತು ಹೇಳುತ್ತಾರೆ. "Philosophy bakes no bread" ಎಂದು. ಅಂದರೆ ತತ್ವಜ್ಞಾನಿಯು ಒಂದು ರೊಟ್ಟಿ ಸಹ ಹುಟ್ಟಿಸುವುದಕ್ಕೆ ಸಹಾಯಕನಲ್ಲ ಎಂದು. ಮತ್ತೊಂದು ವಾಕ್ಯವಿದೆ. 'Man cannot live by bread alone ಎಂದು' ಮನುಷ್ಯನು ಬರೀ ರೊಟ್ಟಿ ತಿಂದು ಜೀವಂತನಾಗಿರುವುದಿಲ್ಲ. ಇವೆರಡು ಮಾತುಗಳನ್ನೂ ತೂಗಿ ನೋಡಿದರೆ, ಇವುಗಳು ಅನ್ನದ ಮಹತ್ವವನ್ನು ವಿಶೇಷವಾಗಿ ಹೇಳಿವೆ. ತತ್ವಜ್ಞಾನಿಯೇ ಸಾಲದು, ಅನ್ನವೂ ಬೇಕು. ಅನ್ನ ಸಿಕ್ಕದೇ ಹೋದರೆ, ಅನ್ನವೇ ಒಂದು ಕ್ರಾಂತಿಯ ಸೇನಾಪತಿಯಾಗಿ ಪರಿಣಮಿಸುತ್ತದೆ. ಯಾವ ದೇಶದಲ್ಲಿ ಅನ್ನ ಸಿಕ್ಕುವುದಿಲ್ಲವೋ, ಅಲ್ಲಿ ಕ್ರಾಂತಿ ಬರುವುದು ನಿಶ್ಚಯ ಎಂಬ ಮಾತನ್ನು ಒತ್ತಿ ಹೇಳಬೇಕಾದ ಕಾರಣವಿಲ್ಲ. ಆಚಾರ್ಯ ವಿನೋಬ ಭಾವೆಯವರು ಒಂದು ಕಡೆ ಹೇಳಿದ್ದಾರೆ: "ಮೊದಲನೆಯದಾಗಿ ಹಸಿದವರಿಗೆ,, ಅನ್ನವಿಲ್ಲದೆ ಇರುವವರಿಗೆ ಪರಿಹಾರ ಒದಗಿಸಬೇಕು, ಆಮೇಲೆ ದುಃಖಪೀಡಿತ ಜನರಿಗೆ ಸಹಾಯ ಒದಗಿಸಬೇಕು. ಮೂರನೆಯದಾಗಿ ಯಾರು ತೊಂದರೆಯಲ್ಲಿದ್ದಾರೆಯೋ ಅವರಿಗೆ ಪರಿಹಾರ ಒದಗಿಸಬೇಕು" ಎಂದು. ಈ ಮೂರು ಮಾತುಗಳಲ್ಲಿ, ಹಸಿವು ಎಲ್ಲಿದೆಯೋ ಅಲ್ಲಿಗೆ ನಾವು ಮೊದಲು ಗಮನ ಕೊಡಬೇಕು ಎಂಬ ಮಾತ ಎಲ್ಲರಿಗೂ ಗೊತ್ತಿದೆ.

ಇವತ್ತಿನ ದಿವಸ ಆಹಾರ ಪರಿಸ್ಥಿತಿಯ ವಿಷಯದ ಮೇಲೆ ಅಲ್ಪಾವಧಿ ಪ್ರಶ್ನೆಗಳು ಎಷ್ಟೋ ಬಂದಿವೆ. ಅದನ್ನು ನಾನು ಪುನಃ ಪುನಃ ಹೇಳಬೇಕಾಗಿಲ್ಲ. ಆದರೆ ಇವತ್ತು ಸರ್ಕಾರದ ಮೇಲೆ ಬರೀ ಅವರು ಹಾಗೆ ಮಾಡಲಿಲ್ಲ, ಹೀಗೆ ಮಾಡಲಿಲ್ಲ ಎಂದು ಹೇಳುತ್ತಾರೆ. ಆದರೆ, ರಾಗಿ ಜೋಳ ಬೆಳೆಯುವ ಫ್ಯಾಕ್ಟರಿ ನಮ್ಮಲ್ಲಿಲ್ಲ. ಮೊದಲನೆಯದಾಗಿ ನಮ್ಮಲ್ಲಿ ಭೂಮಿ ಎಷ್ಟು ಜನಸಂಖ್ಯೆ ಎಷ್ಟು, ಅಲ್ಲಿನ ಉತ್ಪತ್ತಿ ಎಷ್ಟು—ಈ ರೀತಿ ಮೂರು ಭಾಗವಾಗಿ ವಿಂಗಡಿಸಿದರೆ, ಅದರ ಮಹತ್ವವನ್ನು ಅರಿಯಬಹುದು. ನಮ್ಮ ದೇಶದಲ್ಲಿ ಒಟ್ಟು ಭೂಮಿ 81 ಕೋಟಿ ಎಕರೆಯಷ್ಟಿದೆ; ನಮ್ಮಲ್ಲಿ ಜನಸಂಖ್ಯೆ 1951ನೆಯ ಇಸವಿಯಲ್ಲಿ 36 ಕೋಟಿ, ಇದರಿಂದ ಪರ್‌ಕ್ಯಾಪಿಟಾ ಭೂಮಿ ಎಷ್ಟು ಬರುತ್ತದೆ ಅಂದರೆ 2-25 ಎಕರೆಗಳು. ಅಂದರೆ 225 ಸೆಂಟ್ಸ್ ಬರುತ್ತದೆ. 2-25 ಎಕರೆಯಲ್ಲಿ ನಾವು ಕೆಲವನ್ನು ವಜಾ ಮಾಡಬೇಕು. ಗುಡ್ಡಗಳ ಪ್ರದೇಶ, ಬಂಜರು ಭೂಮಿ ಎಲ್ಲಾ ಇರುತ್ತವೆ. ಪ್ರತಿಯೊಬ್ಬರಿಗೂ ಪರ್‌ಕ್ಯಾಪಿಟಾ 97 ಸೆಂಟ್ಸ್ ಬೀಳುತ್ತದೆ. ಹಿಂದೂಸ್ಥಾನದಲ್ಲಿ ಈ ಸಮಸ್ಯೆ ಬಹಳ ಹೆಚ್ಚಿನದು. ಪಾಪ್ಯುಲೇಷನ್ ಪ್ರಕಾರ ಭೂಮಿ ನಮ್ಮಲ್ಲಿ ಎಷ್ಟಿದೆಯೆಂಬ ಪ್ರಶ್ನೆ ಉದ್ಭವವಾಗುತ್ತದೆ. ನಮ್ಮಲ್ಲಿ ಜನಸಂಖ್ಯೆ ಜಾಸ್ತಿ ಇದೆ. ಇವತ್ತು ವಸ್ತುತಃ ನೋಡಬೇಕಾದರೆ ಜನಸಂಖ್ಯೆ ಹೆಚ್ಚುತ್ತಾ ಹೋಗುತ್ತಾ ಇದೆ. ಹುಟ್ಟಿಗೆ ಕಂಟ್ರೋಲ್ ಎಂಬುದೇ ಇಲ್ಲ. ಅದಕ್ಕಾಗಿ ಜನಸಂಖ್ಯೆ ಹೆಚ್ಚಾಗಿದೆ. ಭೂಮಿ ಕಡಮೆಯಾಗಿದೆ. ಇಂಟೆನ್ಸೀವ್ ಕಲ್ಟಿವೇಷನ್ ಎಕ್ಸ್‌ಟೆನ್ಸೀವ್ ಕಲ್ಟಿವೇಷನ್ ಎಂದು ಎರಡು ಭಾಗಗಳಿವೆ. ಭೂಮಿ ಮಾತ್ರ ಕಡಮೆ ಇದೆ. ನಾವು ಇಡೀ ಜಗತ್ತನ್ನೆಲ್ಲಾ ತೆಗೆದುಕೊಂಡರೆ, ಲ್ಯಾಂಡ್ ಪರ್‌ಕ್ಯಾಪಿಟಾ 351 ಸೆಂಟ್ಸ್. ಪ್ರತಿಯೊಬ್ಬರಿಗೂ ಮೂರು ಅಥವಾ 3½ ಎಕರೆ ಭೂಮಿ ಬರುತ್ತದೆ. ಅದರಲ್ಲಿ ಸಾಗುವಳಿಗೆ ಯೋಗ್ಯವಾದಂಥ ಲ್ಯಾಂಡ್ 126 ಸೆಂಟ್ಸ್ ಎಂದು ಹೇಳುತ್ತೇನೆ. ಇಡೀ ಜಗತ್ತಿನಲ್ಲಿಯೇ ಲೆಕ್ಕ ಹಾಕಿದರೆ, ಅಮೇರಿಕಾ ದೇಶದಲ್ಲಿ 741 ಸೆಂಟ್ಸ್. ಅಲ್ಲಿ ಏಳು ಎಕರೆ ಪರ್‌ಕ್ಯಾಪಿಟಾ ಬೀಳುತ್ತದೆ. ನಮ್ಮ ದೇಶದ ಪರಿಸ್ಥಿತಿಯನ್ನು ತೆಗೆದುಕೊಂಡರೆ, 1891ನೆಯ ಇಸವಿಯೊಳಗೆ 109 ಸೆಂಟ್ಸ್ ಸಾಗುವಳಿ ಭೂಮಿ ಇತ್ತು. ಅಂದರೆ ಪರ್‌ಕ್ಯಾಪಿಟಾ ಒಂದು ಎಕರೆಯೆಂದು ಹೇಳಬಹುದು. 1951ನೆಯ ಸೆನ್ಸಸ್ ಪ್ರಕಾರ 84 ಸೆಂಟ್ಸ್ ಬಂದಿದೆ. ಅಂದರೆ ಕಲ್ಟಿವೇಷನ್ ಎಷ್ಟು ಕಡಿಮೆ ಆಗಿದೆಯೆಂದು ಗೊತ್ತಾಗುತ್ತದೆ. ಪಾಪ್ಯುಲೇಷನ್ ಹೆಚ್ಚುತ್ತಿದೆ, ಕಲ್ಟಿವೇಷನ್ ಕಡಮೆಯಾಗುತ್ತಿದೆ. 109 ಸೆಂಟ್ಸ್‌ನಿಂದ 84 ಸೆಂಟ್ಸ್‌ಗೆ ಬಂದಿದೆ. ಇದೇ ಪ್ರಕಾರ ಪಾಪ್ಯುಲೇಷನ್ ವಿಷಯ ತೆಗೆದುಕೊಂಡರೆ ನಾವು ನೋಡಬಹುದು. ನಮ್ಮಲ್ಲಿ ಪಾಪ್ಯುಲೇಷನ್ ಡೆನ್ಸಿಟಿ ಎಷ್ಟಿದೆ ಎಂದರೆ ಪರ್ ಸ್ಕ್ವೇರ್ ಮೈಲ್ 304 ಇದೆ. ಯು.ಎಸ್.ಎ. 50, ಯು. ಕೆ. 545, ಫ್ರಾನ್ಸ್ 202, ಚೈನಾ 153, ಜಪಾನ್ 601, ಇಟಲಿ 410—ಈ ಪ್ರಕಾರ ಹೋಲಿಸಿ ನೋಡಿದರೆ, ನಮ್ಮ ಹಿಂದೂಸ್ಥಾನದಲ್ಲಿ ಭೂಮಿ ಎಷ್ಟು ಕಡಿಮೆ ಇದೆ ಎಂಬುದನ್ನು ತಿಳಿಯಬಹುದು. ನಮ್ಮಲ್ಲಿ 304 ಪರ್ ಸ್ಕ್ವೇರ್ ಮೈಲ್ ಇರುವುದರಿಂದ ಪಾಪ್ಯುಲೇಷನ್ ಎಷ್ಟು ಬೆಳೆದಿದೆಯೆಂಬುದನ್ನು ಅರಿಯಬಹುದು. ಲ್ಯಾಂಡ್ ಕಡಮೆಯಾಗಿದೆ. ಪ್ರಾಡ್ಯೂಸ್‌ನಲ್ಲಿ ಮೈಸೂರು ಸರ್ಕಾರದ ಅಂಕಿ ಅಂಶಗಳನ್ನು ನೋಡಿದರೆ, ಇಲ್ಲಿ ಶೇ. 48 ಭಾಗ ಹೆಚ್ಚಾಗಿದೆ. ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆದಿದ್ದಾರೆಂದು

ಅಂಕಿ ಅಂಶಗಳು ತೋರಿಸುತ್ತಿವೆ. ಅದೇ ಪ್ರಮಾಣ ದಲ್ಲಿ ಪಾಪ್ಯುಲೇಷನ್ ಎಷ್ಟು ಹೆಚ್ಚಾಗಿದೆ ಎಂಬುದನ್ನು ಕಂಡುಹಿಡಿಯಲಿಲ್ಲ. ಶೇ. 48 ಭಾಗ ಹೆಚ್ಚುತ್ತಿದೆ. ಇಲ್ಲದಿದ್ದರೆ ಬರಗಾಲ ಪರಿಸ್ಥಿತಿ ಬರುತ್ತಿರಲಿಲ್ಲ; ಮತ್ತು ಒಂದು ವರ್ಷ ಮಳೆ ಬಾರದೆ ಹೋದರೆ ನಮ್ಮ ಜನರ ಹಾಹಾಕಾರ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ. ಆದರೆ ನಾನು ಅಂಕಿ ಅಂಶಗಳು ಸರಿಯಿಲ್ಲವೆಂದು ಹೇಳುವುದಿಲ್ಲ. ಇವತ್ತಿನ ದಿವಸ ಬರೀ ಅಂಕಿ ಅಂಶಗಳ ಮೇಲೆ ನಾವು ನಿರ್ಧಾರ ಮಾಡಿದರೆ, ಈ ಪ್ರಶ್ನೆ ಬಗೆಹರಿಯುವುದಿಲ್ಲ. ಅದಕ್ಕಾಗಿ ಮೊದಲನೆಯದಾಗಿ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಸರ್ಕಾರದವರು ಯೋಗ್ಯವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಜನಸಂಖ್ಯೆ ಹೆಚ್ಚಾಗುತ್ತಾ ಹೆಚ್ಚಾಗುತ್ತಾ ಲ್ಯಾಂಡ್ ಹೆಚ್ಚಾಗುವುದಿಲ್ಲ. ಇದ್ದ ಲ್ಯಾಂಡ್ ಅಲ್ಲಿಯೇ ಇರುತ್ತದೆ. ಬೆಳೆಸುವ ಶಕ್ತಿ ಎಷ್ಟಿದೆಯೋ ಅದಕ್ಕಿಂತ ಹೆಚ್ಚು ಬೆಳೆಸುವುದಕ್ಕೆ ಸಾಧ್ಯವಿಲ್ಲ. ಫ್ಯಾಮಿಲಿ ಪ್ಲಾನಿಂಗ್ ವಿಷಯವಾಗಿ ಇತರ ಸದಸ್ಯರು ಸೂಚನೆ ಕೊಟ್ಟಿದ್ದಾರೆ. ಆದ್ದರಿಂದ ಫ್ಯಾಮಿಲಿ ಪ್ಲಾನಿಂಗನ್ನು ಸರ್ಕಾರದವರು ಕೂಡಲೇ ಕೈಗೊಳ್ಳಬೇಕು. ಅದಕ್ಕೋಸ್ಕರ ಪ್ರೊಪಗಾಂಡ ಮಾಡಬೇಕು. ಒಬ್ಬ ವ್ಯಕ್ತಿ ಅಥವಾ ಒಂದು ಸೊಸೈಟಿಯಿಂದ ಈ ಕಾರ್ಯವಾಗುವುದಿಲ್ಲ. ಸರ್ಕಾರದವರು ಇದಕ್ಕೆ ಪೂರ್ಣ ಗಮನಕೊಡಬೇಕು. 1961ನೆಯ ಇಸವಿಯಲ್ಲಿ 85 ಮಿಲಿಯನ್ ಟನ್ನಿನಷ್ಟು ಆಹಾರ ಧಾನ್ಯ ಬೆಳೆಯುತ್ತೇವೆಂದು ಹೇಳುತ್ತಾರೆ. ಈಗ 70 ಮಿಲಿಯನ್ ಟನ್ನಿನಷ್ಟು ಬೆಳೆಯುತ್ತಿದ್ದಾರೆ. ಇನ್ನೂ 15 ಮಿಲಿಯನ್ ಟನ್ನಿನಷ್ಟು ಹೆಚ್ಚಿಗೆ ಬೆಳೆಯಬಹುದು ಎಂದು ಅಂಕಿ ಅಂಶಗಳಿಂದ ತಿಳಿದುಬರುತ್ತದೆ. ಇವತ್ತಿನ ದಿವಸ ತುಂಗಭದ್ರಾ ಪ್ರಾಜೆಕ್ಟಿನ ಮೇಲೆ ಮೈಸೂರು ಸರ್ಕಾರದ ಬುಲೆಟಿನನ್ನು ನೋಡಿದರೆ, 1961ನೆಯ ಇಸವಿಗೆ ಐದು ಲಕ್ಷ ಎಕರೆಯಷ್ಟು ನೀರಾವರಿ ಭೂಮಿಯನ್ನು ಪಡೆಯಬಹುದು ಎಂದು ಗೊತ್ತಾಗುತ್ತದೆ. ಆದರೆ ಅದನ್ನು ಡೆವಲಪ್ ಮಾಡುವವರು ಯಾರು ಎಂಬ ಪ್ರಶ್ನೆ ಈಗ ಬರುತ್ತದೆ. ಅದನ್ನು ಡೆವಲಪ್ ಮಾಡಬೇಕಾದರೆ ಅದಕ್ಕೆ ಫೀಡರ್ ಚಾನೆಲ್ಸ್ ಬೇಕಾಗುತ್ತದೆ. ಬರೀ ನೀರು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆಯೇ ಹೊರತು ಅವರಿಗೆ ಬೇಕಾದ ಭೂಮಿಯನ್ನು ಕೊಡುತ್ತಿಲ್ಲ. ಈಗ ದೊಡ್ಡ ದೊಡ್ಡ ಯೋಜನೆಗಳನ್ನು ಸರ್ಕಾರದವರು ಮಾಡುತ್ತಿದ್ದಾರೆ. ನೀರು ದುರುಪಯೋಗವಾಗದ ಹಾಗೆ ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು. ಒಕ್ಕಲಿಗರಿಗೆ ಸಾಲಕೊಡುವ ಕಾಲಕ್ಕೆ ಬೆಳೆಯುವ ಜನರಿಗೆ ಸಹಾಯ ಹೇಗೆ ಒದಗಿಸಬೇಕೆಂಬುದನ್ನು ಯೋಚನೆ ಮಾಡಬೇಕು. ಈ ಸಮಯದಲ್ಲಿ ನನ್ನ ಸೂಚನೆ ಇಷ್ಟೆ. ಜನರಿಗೆ ಸರ್ಕಾರದವರು ಕ್ರೆಡಿಟ್ ಸಹಾಯ ಮಾಡಬೇಕು. ಆ ರೀತಿ ಕ್ರೆಡಿಟ್ ಸಹಾಯವನ್ನು ಇನ್ನೂ ನಮ್ಮ ಸರ್ಕಾರದವರು ಮಾಡುತ್ತಿಲ್ಲ. ಎಲ್ಲಿಯವರೆಗೆ ರೈತರಿಗೆ ಸರ್ಕಾರದವರು ಕ್ರೆಡಿಟ್ ಸಹಾಯವನ್ನು ಕೊಡುವುದಿಲ್ಲವೋ ಅಲ್ಲಿಯವರೆಗೆ ಅವರ ಪ್ರಶ್ನೆ ಬಗೆಹರಿಯುವುದಿಲ್ಲ. ಈ ಲೆಕ್ಕದಿಂದ ನೋಡಬೇಕು. ಕೆಲವು ಸಂಸಾರಗಳಲ್ಲಿ ದುಡಿಮೆ ಮಾಡುವ ಜನಕ್ಕಿಂತ ಅವರನ್ನು ಅವಲಂಬಿಸಿರತಕ್ಕ ಜನರು ಹೆಚ್ಚಾಗಿರುತ್ತಾರೆ. ಕೆಲವು ಸಂಸಾರಗಳಲ್ಲಿ 100 ಜನ ದುಡಿಮೆಗಾರರಿದ್ದರೆ ಡಿಪೆಂಡೆಂಟ್ಸ್ 150 ಜನರೂ ಇನ್ನು ಕೆಲವು ಸಂದರ್ಭಗಳಲ್ಲಿ 250 ಜನರು ಕೂಡ ಇರುತ್ತಾರೆ. ಹೀಗೆ ಸಂಪಾದಿಸತಕ್ಕವರು ಕಡಮೆಯಿದ್ದು ತಿನ್ನತಕ್ಕ ಮಂದಿ ಹೆಚ್ಚಾಗಿರುತ್ತಾರೆ. ಇವರಿಗೆ ಸರ್ಕಾರ ಸಹಾಯ ಮಾಡುತ್ತಿರುವ ಮಾರ್ಗಗಳಲ್ಲೈಕಿ ಸಾಲ ಕೊಡತಕ್ಕದ್ದೊಂದು ಮಾರ್ಗ. ಆದರೆ ಈ ದಿವಸ ಬ್ಯಾಂಕ್ ಮತ್ತು ಸೊಸೈಟಿಗಳ ಮೂಲಕ ರೈತಾಪಿವರ್ಗಕ್ಕೆ ದೀರ್ಘ ಕಾಲಾವಧಿಯ ಮತ್ತು ಅಲ್ಪಕಾಲಾವಧಿಯ ಸಾಲಗಳೆಂದು ಕೊಡಲಾಗುತ್ತದೆ. ಆದರೆ ಹೀಗೆ ಅವರಿಗೆ ಕೊಡತಕ್ಕ ಸಾಲ ಸದ್ವಿನಿಯೋಗಕ್ಕಾಗಿ ಖರ್ಚಾಗುತ್ತಿದೆಯೋ ಅಥವಾ ಅದನ್ನು ದುರ್ವಿನಿಯೋಗಕ್ಕೆ ಖರ್ಚುಮಾಡುತ್ತಿದ್ದಾರೆಯೋ ಎಂಬುದನ್ನು ಆಗಿಂದಾಗ್ಗೆ ಮೇಲಧಿಕಾರಿಗಳು ತನಿಖೆ ನಡೆಸಿ ನೋಡುತ್ತಿರಬೇಕು. ಹೀಗೊಂದು ಸೂಪರ್‌ವಿಜನ್ ಇಲ್ಲದೆ ರೈತರಿಗೆ ಕೊಡತಕ್ಕ ಸಾಲದಿಂದ ಅವರಿಗೆ ಲಭಿಸಬೇಕಾದ ಅನುಕೂಲ ದೊರೆಯುತ್ತಿಲ್ಲ. ಇದಕ್ಕಾಗಿ ನಾನು ಸರ್ಕಾರಕ್ಕೆ ಸಲಹೆಮಾಡುವುದೇನೆಂದರೆ ಸರ್ಕಾರದವರು ಈ ಸಾಲಗಳನ್ನು ಮಂಜೂರುಮಾಡುವಾಗ ಸಾಕಷ್ಟು ಸೆಕ್ಯೂರಿಟಿಯನ್ನು ಅವರಿಂದ ಪಡೆಯಲೇಬೇಕು. ಹಾಗೊಂದು ನಿರ್ಬಂಧ ಇಟ್ಟು ಜನರಿಗೆ ಧಾರಾಳವಾಗಿ ಸಾಲಗಳನ್ನು ಕೊಡಿ. ಹೀಗೆ ತಾವು ಯಾವ ಒಂದು ಯೋಜನೆಯನ್ನೇ ಜಾರಿಗೆ ತರುವುದಾದರೂ ಅದನ್ನು ಬ್ಯಾಂಕ್ ಮೂಲಕವೇ ಮಾಡಬೇಕೆಂದು ಸಲಹೆಮಾಡಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಚರ್ಚೆಗೆ ಬಂದಿರತಕ್ಕ ವಿಚಾರ ದೇಶದಲ್ಲಿ ಇದು ಇರುವ ಆಹಾರ ಪರಿಸ್ಥಿತಿಗೆ ಸಂಬಂಧಿಸಿದ್ದಾಗಿದೆ. ಈ ವಿಚಾರ ದಿನೇ ದಿನೇ ಹೆಡಂನೂತಾಕಾರತಾಳುತ್ತಿದ್ದಂತೆ ಕಾಣುತ್ತಿದೆ. ಈ ಬಗ್ಗೆ ನಾವು ಆಲೋಚನೆಮಾಡಿ ನೋಡಿದ್ದದಾದರೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವ್ಯವಸಾಯಗಾರರ ಸಂಖ್ಯೆ ಶೇಕಡ 25 ರಷ್ಟಿದ್ದು ಅದು ಶೇಕಡ 75ರಷ್ಟು ಜನರಿಗೆ ಆಹಾರಸಾಮಗ್ರಿಗಳನ್ನು ಒದಗಿಸುತ್ತಿದೆ. ನಮ್ಮ ಭಾರತದ ವಿಚಾರ ತೆಗೆದುಕೊಂಡರೆ ಇಲ್ಲಿ ವ್ಯವಸಾಯಗಾರರ ಸಂಖ್ಯೆ ಶೇಕಡ 75 ಇದ್ದು ನಮ್ಮ ಭರತಖಂಡದಲ್ಲಿ ಎಲ್ಲೋ ಕೇವಲ 18—20 ಪರ್ಸೆಂಟ್ ಜನರು ಮಾತ್ರ ವ್ಯವಸಾಯ ಮಾಡದೆ ಬೇರೆ ಜೀವನೋಪಾಯಗಳ ವೃತ್ತಿಯಲ್ಲಿರುತ್ತಾರೆ. ಹೀಗಿದ್ದರೂ ನಮ್ಮ ದೇಶದ ವ್ಯವಸಾಯಗಾರರು ಶೇಕಡ 75 ರಷ್ಟಿದ್ದರೂ ಈ ಶೇಕಡ 18—20 ಷ್ಟು ಜನಗಳಿಗೆ ಸಾಕಷ್ಟು ಆಹಾರಧಾನ್ಯಗಳನ್ನೊದಗಿಸಲು ಸಾಧ್ಯವಾಗುತ್ತಿಲ್ಲವೆಂದರೆ ನಮ್ಮ ವ್ಯವಸಾಯಪದ್ಧತಿಯಲ್ಲೇ ಏನೋ ಒಂದು ದೊಡ್ಡ ಲೋಪದೋಷವಿರಲೇಬೇಕೆಂದು ಕಾಣುತ್ತದೆ. ನಮಗೆ ಸ್ವರಾಜ್ಯ ಬರುವ ಮುನ್ನ ದೇಶದಲ್ಲಿ ಈ ಆಹಾರಪರಿಸ್ಥಿತಿ ಯಾವರೀತಿ ಇತ್ತೋ ಈಗಲೂ ಅದೇ ರೀತಿಯಲ್ಲಿದೆ. ಈ ದಿವಸ ನಮಗೆ ಹೊಸ ರಾಜ್ಯ ಬೇರೆ ಬಂತು. 12 ಜನ ಮಂತ್ರಿಗಳಿದ್ದಾರೆ. ಆದರೆ ಪ್ರತಿಯೊಬ್ಬರಿಗೂ ಜೀವ ಉಳಿಸಿಕೊಳ್ಳಬೇಕಾದರೆ ಆಹಾರ, ಗಾಳಿ, ಬೆಳಕು ಮತ್ತು ನೀರು ಇವುಗಳು ಬೇಕೇಬೇಕು. ಆದರೆ ಈ ಹೊತ್ತು ಜನರಿಗೆ ಗಾಳಿ, ಬೆಳಕು ಮತ್ತು ನೀರು ಇವು ಹೇಗೆ ಪುಕ್ಕಟ್ಟೆಯಾಗಿ ಸಿಕ್ಕುತ್ತವೋ ಹಾಗೆ ಈ ಆಹಾರ ಸಿಕ್ಕುತ್ತಿಲ್ಲ. ಈ ದಿವಸ ದೇಶಾದ್ಯಂತವೂ ಇಂಥ ಒಂದು ಆಹಾರದ ಭೀಕರ ಪರಿಸ್ಥಿತಿ ಉಂಟಾಗಲು ಮುಖ್ಯ ಕಾರಣವೇನೆಂದರೆ ಈ ಬಗ್ಗೆ ಸರ್ಕಾರದವರು ಈವರೆಗೂ ಒಂದು ಸರಿಯಾದ ಯೋಜನೆಯನ್ನು ಸಿದ್ಧಪಡಿಸಿಲ್ಲ. ಅನೇಕ ವಿಚಾರದಲ್ಲಿ ಎಲ್ಲಕ್ಕಿಂತಲೂ ಮಿಗಿಲಾದ ಈ ಆಹಾರ ಸಮಸ್ಯೆಯನ್ನು ಬಿಡಿಸಲು ಸರ್ಕಾರದಲ್ಲಿ ಇದಕ್ಕೆ ಒಬ್ಬ ಪ್ರತ್ಯೇಕ ಮಂತ್ರಿಗಳ ಬೇಕಾದದ್ದು ಅತ್ಯಗತ್ಯ. ಹೀಗೆ ಒಬ್ಬ ಪ್ರತ್ಯೇಕ ಮಂತ್ರಿಗಳಿದ್ದು ಜನರಿಗೆ ದಿನವಹಿ ಬೇಕಾಗತಕ್ಕ

(ಶ್ರೀ ಟಿ. ಹನುಮಯ್ಯ)

ವಸ್ತುಗಳೇನು, ಅವುಗಳೆಲ್ಲಾ ಜನರಿಗೆ ಸರಿಯಾಗಿ ದೊರೆಯುತ್ತಿವೆಯೋ ಇಲ್ಲವೋ ಎನ್ನುವುದನ್ನು ಪರಿಶೀಲನೆ ನಡೆಸುತ್ತಿರಬೇಕು. ದೇಶದಲ್ಲಿ ಜನರಿಗೆ ಅತ್ಯಗತ್ಯವಾಗಿ ಬೇಕಾಗಿರುವಂಥ ಆಹಾರ ಸಾಮಗ್ರಿಗಳನ್ನು ಶೇಖರಣೆ ಮಾಡುತ್ತಿರಬೇಕು. ಈ ಕೆಲಸಗಳೇ ಒಬ್ಬ ಮಂತ್ರಿಗಳಿಗೆ ಸಾಕಾಗುವಷ್ಟಾಗುತ್ತವೆ. ಆದರೆ ಈ ಈ ವಿಚಾರಗಳನ್ನು ಸರ್ಕಾರದವರು ಈವರೆಗೂ ಕಡೆಗಣ್ಣಿಂದ ಕಾಣುತ್ತ ಬಂದುದರಿಂದಲೇ ಈ ದಿವಸ ದೇಶದಲ್ಲಿ ಶೇಕಡ 75-80ರಷ್ಟು ಜನ ವ್ಯವಸಾಯದ ಬದುಕಿನಲ್ಲಿ ತೊಡಗಿದ್ದು ಈ ದೇಶದಲ್ಲಿರತಕ್ಕ ಜನರಿಗೆ ವರ್ಷದಲ್ಲಿ ಸರಿಯಾಗಿ ಮೂರು ತಿಂಗಳಿಗಾಗುವಷ್ಟು ಕೂಡ ಆಹಾರವಿಲ್ಲದಂತಾಯಿತು. ಈಗಾಗಲೇ ಭಾರತದಲ್ಲಿ ಅನೇಕ ರಾಜ್ಯಗಳಲ್ಲಿ ಭೂ ಸುಧಾರಣೆ ಜಾರಿಗೆ ಬಂದಿದೆ. ಸೀಲಿಂಗ್ ಲಿಮಿಟ್ ಜಾರಿಗೆ ಬಂದಿದೆ. ಆದರೆ ನಮ್ಮ ರಾಜ್ಯಕ್ಕಿನ್ನೂ ಬರಲಿಲ್ಲ. ಈ ದಿವಸ ಗ್ರಾಮಾಂತರ ಪ್ರದೇಶದಲ್ಲಿ ವಾಸಮಾಡುತ್ತಿರುವ ಜನರಲ್ಲಿ ಅನೇಕರಿಗೆ ಉಳಲು ಜಮೀನಿಲ್ಲ. ಅವರು ಆಹಾರ ಬೆಳೆಯಲು ಅವಕಾಶವಿಲ್ಲ. ಈ ದಿವಸ ಅನೇಕ ಜನ ಭೂಮಾಲೀಕರಾಗಿದ್ದರೂ, ಅವರೆಲ್ಲ ಹೆಸರಿಗೆ ಮಾತ್ರ ಜಮೀನ್ದಾರರೇ ಹೊರತು ಬೆಳೆ ಬೆಳೆಯುವುದಕ್ಕಲ್ಲ. ಅವರೆಲ್ಲರೂ ಇತ್ತ ಕಡೆ ಲೆಕ್ಕಕ್ಕೆ ಜಮೀನ್ದಾರರಾಗಿದ್ದರೂ ಅತ್ತ ಕಡೆ ವಿದ್ಯಾವಂತರಾಗಿ ಯಾವ ದೇಶದಲ್ಲೋ ಮಂತ್ರಿಗಳಾಗಿಯೋ ವಕೀಲರಾಗಿಯೋ ಅಥವಾ ಬೇರೆ ಏನಾದರೊಂದು ಉದ್ಯೋಗದಲ್ಲೋ ನಗರಗಳಲ್ಲಿದ್ದುಬಿಡುತ್ತಾರೆ. ಕೆಲವರು ಲಂಡನ್‌ಗೆ ಹೋಗಿ ಅಲ್ಲೇ ಉಳಿದುಬಿಟ್ಟಿದ್ದಾರೆ. ಆದಾಗ್ಯೂ ಅವರನ್ನು ಇಲ್ಲಿ ಜಮೀನ್ದಾರರೆಂದು ಪರಿಗಣಿಸಬೇಕಾಗಿದೆ. ಇದು ಸರಿಯಾದುದಲ್ಲ. ಯಾವ ಯಾವ ಪ್ರದೇಶದಲ್ಲಿ ಯಾರ್ಯಾರು ಏನೇನು ಕೆಲಸಮಾಡಬೇಕು ಎಂಬುದನ್ನೀಗ ನಾವು ಮೊದಲು ಪರಿಶೀಲನೆ ಮಾಡಬೇಕಾಗಿದೆ. ಈ ದಿವಸ ಹೆಸರಿಗೆ ಜಮೀನ್ದಾರರಾಗಿರುವ ಅನೇಕ ಜನರು ತಮ್ಮ ದೇಶವನ್ನೇ ಬಿಟ್ಟು ಬೇರೆ ದೇಶಗಳಿಗೆ ಹೋಗಿದ್ದಾರೆ. ಅಂಥ ಜನರಿಗೆಲ್ಲಾ ನಾವೀಗ ಗಿರಣಿಗಳಲ್ಲಿ ತಯಾರಿಸಿದ ಅಕ್ಕಿಯನ್ನು ಸರಬರಾಯಿಮಾಡಲು ಸಾಧ್ಯವಾಗುತ್ತಿಲ್ಲ. ಆದರೆ ಈ ದಿವಸ ವ್ಯವಸಾಯವನ್ನೇ ನಂಬಿಕೊಂಡಿರುವ ಜನರು ಗ್ರಾಮಾಂತರ ಪ್ರದೇಶಗಳಲ್ಲಿ ಬೇಕಾದಷ್ಟಿದ್ದಾರೆ. ಆದರೆ ಅವರಿಗೆ ವ್ಯವಸಾಯಮಾಡಲು ಸ್ವಂತ ಭೂಮಿ ಇಲ್ಲ. ಯಾರು ಈ ದಿವಸ ವ್ಯವಸಾಯ ಮಾಡದೆ ಅನ್ಯ ಉದ್ಯೋಗಗಳಲ್ಲಿ ನಿರತರಾಗಿದ್ದಾರೋ ಅಂಥವರೇ ಬಹಳ ಮಂದಿ ಜಮೀನ್ದಾರರಾಗಿರುವಾಗ ಈ ಆಹಾರದ ಬಿಕಟ್ಟು ಹೇಗೆ ಪರಿಹಾರವಾಗುತ್ತದೆ? ಆದರೆ ಈಗತಾನೆ ಮಾನ್ಯ ಅಣ್ಣಾರಾಯರು ಅನೇಕ ಅಂಕಿ ಅಂಶಗಳನ್ನು ಕೊಟ್ಟು ಅನೇಕ ವಿಚಾರ ಹೇಳಿದರು. ಆದರೆ ನಾನೀಗ ಆ ಅಂಕಿ ಅಂಶಗಳ ಗೋಜಿಗೆ ಹೋಗುವುದಿಲ್ಲ. ಆದರೆ ಇತ್ತೀಚಗೆ ನನಗೆ ತಿಳಿದಮಟ್ಟಿಗೂ ವರ್ಷಂಪ್ರತಿ ಜಮೀನ್ದಾರರ ಸಂಖ್ಯೆಯೇನೋ ಜಾಸ್ತಿಯಾಗುತ್ತಲೇ ಇದೆ. ಆದರೆ ಈ ಪೈಕಿ ಎಷ್ಟು ಜನ ಬೆಳೆಯನ್ನು ತೆಗೆಯುತ್ತಿದ್ದಾರೆಂಬುದನ್ನು ಯಾರೂ ಆಲೋಚನೆ ಮಾಡಿಲ್ಲ. ದೇಶದಲ್ಲಿ ಇತ್ತೀಚೆಗೆ ಜಪಾನ್ ಮಾದರಿ ಭತ್ತದ ವ್ಯವಸಾಯ ನಡೆಸಬೇಕೆಂದು ನಾವೆಲ್ಲರೂ ಮಾತನಾಡುತ್ತಿದ್ದೇವೆ. ಹೀಗೆ ಮಾಡಿದರೆ ಎಕರೆಯಲ್ಲಿ 40 ಪಲ್ಲ ಭತ್ತ ಬೆಳೆಯಬಹುದೆಂದು ಇಲಾಖೆಯವರು ಹೇಳುತ್ತಾರೆ. ಆದರೆ ಎಲ್ಲೋ ಹಾಗೊಬ್ಬರು ಎಕರೆಗೆ 40 ಪಲ್ಲ ಭತ್ತ ಬೆಳೆದಿದ್ದರೂ ಬೆಳೆಯಬಹುದು.

ಆದರೆ ಕೆಲವು ಸಂದರ್ಭಗಳಲ್ಲಿ ನಾನೂ ನೋಡಿದ್ದೇನೆ: ಎಕರೆಯಲ್ಲಿ 30 ಪಲ್ಲ ಭತ್ತ ಬೆಳೆದಿದ್ದರೆ 40 ಪಲ್ಲ ಎಂದು ಲೆಕ್ಕ ತೋರಿಬಿಡುತ್ತಾರೆ. ಇಂಥ ನಿದರ್ಶನಗಳೂ ಕೂಡ ಅನೇಕ ಇವೆ. ಆದರೆ ಅವರ ಒಂದು ವೇಷಭೂಷಣಗಳಲ್ಲಿ ಈ ಪದ್ಧತಿಯು ಮರೆಯಾಗಿ ಹೋಗುತ್ತದೆ. ಎಲ್ಲೋ ಒಂದು ಕಡೆಯಲ್ಲಿ ಜಪಾನ್ ಮೆಥಡನಲ್ಲಿ ಎಕರೆಗೆ 40 ಪಲ್ಲ ಭತ್ತ ಬಂದಿತೆಂದು ತೋರಿಸಿದರು. ಆದರೆ ಹಾಗೆ ನಿಜಾಂಶವನ್ನು ಮರೆಮಾಚಿ ಸುಳ್ಳು ಲೆಕ್ಕ ಕೊಡುವುದು ಸರಿಯಾದದ್ದಲ್ಲ. ಆದರೆ ನಿನ್ನೆ ಮೊನ್ನೆಯಿಂದೀಚೆಗೆ ಮಳೆ ಅಲ್ಲಲ್ಲೇ ಸ್ವಲ್ಪ ಆಗುತ್ತಿದೆ. ಇದರಿಂದಲೇ ಜನರೆಲ್ಲ ಸಂತುಷ್ಟರಾಗಿದ್ದಾರೆಂದು ಸರ್ಕಾರದವರು ಖಂಡಿತ ಭಾವಿಸಬಾರದು. ಜನರ ಪರಿಸ್ಥಿತಿಯು ನಿರಾಶವೇನೆಂಬುದನ್ನು ಕಂಡುಹಿಡಿದು ಆ ಅಂಕಿ ಅಂಶಗಳನ್ನು ಸಂಗ್ರಹಿಸತಕ್ಕದ್ದು ಅತ್ಯವಶ್ಯಕ. ನಾವು ಇಷ್ಟೆಲ್ಲಾ ಬಾಯಿನಲ್ಲಿ ಡೌಲು ಹೇಳಿಕೊಳ್ಳುತ್ತಿರುವಾಗ ದೇಶದಲ್ಲಿ ಕ್ಷಾಮ ಪರಿಸ್ಥಿತಿಯುಂಟಾಗಿರುವುದನ್ನು ನೋಡಿದರೆ ಎಲ್ಲರಿಗೂ ಆಶ್ಚರ್ಯವಾಗುತ್ತದೆ. ಪಾಶ್ಚಾತ್ಯ ದೇಶದಲ್ಲಿ ವ್ಯವಸಾಯದಲ್ಲಿ ನಿರತರಾಗಿರತಕ್ಕವರ ಸಂಖ್ಯೆ 100ಕ್ಕೆ 20 ರಷ್ಟಿದ್ದರೂ ಅಲ್ಲ ದೇಶದಲ್ಲಿರತಕ್ಕವರೆಲ್ಲಾ ಸುಖವಾಗಿ ಉಂಡು ಹೊರಗಡೆಗೂ ಸಹ ಅವರೀಗ ಆಹಾರಧಾನ್ಯಗಳನ್ನು ಕಳುಹಿಸಿಕೊಡುತ್ತಿದ್ದಾರೆ. ಆದರೆ ನಮಗೆ ಇಲ್ಲಿ ಸರಿಯಾಗಿ ಉಣ್ಣಲಿಕ್ಕೇ ಇಲ್ಲದಿರುವಾಗ ನಾವಿನ್ನು ಹೊರಗಡೆ ಕಳುಹಿಸಲು ಎಂದಿಗಾದರೂ ಸಾಧ್ಯವೇ? ಸರ್ಕಾರದವರು ದೇಶದಲ್ಲಿ ಕ್ಷಾಮ ಪರಿಸ್ಥಿತಿಯುಂಟಾಗಿದೆ, ಅದನ್ನು ನಿವಾರಣೆ ಮಾಡಬೇಕೆಂಬ ಉದ್ದೇಶದಿಂದ ಅಲ್ಲಲ್ಲೇ ಕೆಲವು ಕಾಮಗಾರಿಗಳನ್ನು ನಡೆಸಲು ಜನರಿಗೆ ಕೂಲಿ ದೊರೆಯತಕ್ಕ ಒಂದು ಏರ್ಪಾಡನ್ನು ಮಾಡಲು ಈಗ ಎರಡು ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಹೇಳಿದ್ದಾರೆ. ಈ ಮೊಬಲಗನ್ನು ದೇಶಕ್ಕೆಲ್ಲ ಹಂಚಿದರೆ ಒಂದೊಂದು ಹಳ್ಳಿಗೆ 5,000 ರೂಪಾಯಿ ಸಹ ಬರುವುದಿಲ್ಲ. ಈ ಹೊತ್ತು ರೂಪಾಯಿಗೆ ಒಂದು ಸೇರು ಪ್ರಕಾರ ಅಕ್ಕಿ ಜನರಿಗೆ ಸಿಕ್ಕುತ್ತಿಲ್ಲ. ಹೀಗಾಗಿ ಆಹಾರ ಧಾನ್ಯವನ್ನು ಕೊಳ್ಳಲು ಜನರಿಗೆ ಶಕ್ತಿ ಇಲ್ಲ. ಜನರ ಕೈಯಲ್ಲಿ ದುಡ್ಡಿಲ್ಲ. ಈ ಹಿಂದೆ ಯುದ್ಧ ನಡೆಯುತ್ತಿದ್ದಾಗ ರೂಪಾಯಿಗೆ ಮೂರು ಸೇರು ಪ್ರಕಾರ ದೊರೆಯುತ್ತಿದ್ದಂಥ ಅಕ್ಕಿ ಈ ದಿನ ರೂಪಾಯಿಗೆ ಒಂದು ಸೇರಿಗಿಳಿದಿದೆ. ಜನರಿಗೆ ಕೂಲಿಕೆಲಸ ಇಲ್ಲದಿದ್ದರೆ ಅವರ ಕೈಲಿ ದುಡ್ಡಿರಲು ಸಾಧ್ಯವೇ ಇಲ್ಲ. ಹೀಗೆ ಹಳ್ಳಿಯ ಜನರು ಈಹೊತ್ತು ಅನ್ನ-ನೀರಿಗೆ ಕಣ್ಣು ಕಣ್ಣು ಬಿಡುತ್ತಾ ಕುಳಿತಿರುವಾಗ ಇಲ್ಲಿ ಸರ್ಕಾರದವರು ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿ, ಅನಂತರ ಅದು ಮೆಟ್ಟಿಲು ಮೆಟ್ಟಿಲಾಗಿ ಇಳಿದು ತಾಲ್ಲೂಕ್ ಅಮಲ್ದಾರರ ಕೈಗೆ ಈ ಹಣ ಹೋಗುವಷ್ಟರಲ್ಲಿ ಆ ಬಡಪಾಯಿಗಳ ಗತಿ ಏನಾಗಬೇಕು? ಈಗಾಗಲೇ ಸರ್ಕಾರದವರು ಒಂದು ಪಂಚವಾರ್ಷಿಕಯೋಜನೆಯನ್ನು ಮುಗಿಸಿದರು. ಇನ್ನೊಂದು ನಡೆಯುತ್ತಿದೆ. ಬಾಯಲ್ಲಿ ಸಾವಿರ ಹೇಳುತ್ತಿದ್ದಾರೆ. ಆದರೆ ಕಾರ್ಯರೂಪದಲ್ಲಿ ಏನೂ ಪ್ರಯೋಜನವಾಗುತ್ತಿಲ್ಲ. ಎಲ್ಲವೂ ಬರಿ ಕಾಲಹರಣೆಯಲ್ಲೇ ಹಣ ವ್ಯರ್ಥವಾಗಿ ಹೋಗುತ್ತಿದೆ. ಇದಕ್ಕೆ ಮೂಲಕಾರಣ ಸರ್ಕಾರದ ಮೆಷಿನರಿ ಏನಿದೆಯೋ ಅದು ಈ ದಿವಸ ಮಂತ್ರಿಮಂಡಲಕ್ಕೆ ಹೊಂದಿಕೊಂಡು ಕೆಲಸಮಾಡುತ್ತಿಲ್ಲ. ಮೇಲಧಿಕಾರಿಗಳಿಗೂ ಕೆಳಗಿನ ಅಧಿಕಾರಿಗಳಿಗೂ ಹೊಂದಾಣಿಕೆಯಿಲ್ಲ. ಹೀಗಾಗಿ ಇವರಿಗೆ ಯಾರಿಗೂ ಈಹೊತ್ತು ದೇಶದಲ್ಲಿರತಕ್ಕ ರೈತರ ಬಡತನ ಸ್ಥಿತಿಗತಿ ಹೀನಾಗಿರುತ್ತವೆ ಎಂಬುದನ್ನು

ತಿಳಿಯಲು ಮನಸ್ಸಿಲ್ಲ. ಯಾವಾಗ ಸರ್ಕಾರದವರು ಕೂಲಂಕಷವಾಗಿ ನಿಜಾಂಶಗಳನ್ನು ಪರಿಶೀಲನೆ ಮಾಡುತ್ತಿಲ್ಲವೋ ಆಗ ಈ ಕಷ್ಟನಷ್ಟಗಳೆಲ್ಲಾ ಆಗಲೀ ವ್ಯವಸಾಯ ಬೆಳೆಯುವ ಜನರಿಗೆ ಜಮೀನಿಲ್ಲ ಜಮೀನಿರತಕ್ಕವರು ವ್ಯವಸಾಯ ಮಾಡುತ್ತಿಲ್ಲ.

7 P. M.

ಆದುದರಿಂದ ಸರಕಾರದಲ್ಲಿ ನಾನು ಬಿನ್ನಹ ಮಾಡುವುದು ಏನೆಂದರೆ, ಇಂಡಿಯಾ ದೇಶದಲ್ಲಿ ceiling limit ಬಂದಿದೆ. ಇನ್ನೂ ನಮ್ಮ ಮೈಸೂರು ದೇಶದಲ್ಲಿ ಈ ceiling limit ಇಲ್ಲ. ಹೆಚ್ಚಿನ ಬೆಳೆಯನ್ನು ಬೆಳೆಯಬೇಕು ಎಂದು ಹೇಳುತ್ತಿರುವಾಗ ಬೆಳೆ ಬೆಳೆಯಲು ಜಮೀನೇ ಇರುವುದಿಲ್ಲ, ಆದುದರಿಂದ ಉತ್ಪನ್ನ ಹೇಗಾಗುತ್ತದೆ. ಈ ವಿಷಯಗಳನ್ನೆಲ್ಲ ಸರಕಾರ ಕೂಲಂಕಷವಾಗಿ ಯೋಚನೆಮಾಡಿ ಜನಗಳಿಗೆ ಇರುವ ಕಷ್ಟವನ್ನು ಪರಿಹಾರ ಮಾಡತಕ್ಕದ್ದು ಬಹಳ ಅಗತ್ಯವೆಂದು ಹೇಳಿ ನಾನು ನನ್ನ ಈ ಎರಡು ಮಾತುಗಳನ್ನು ಹೇಳಿ ಮುಗಿಸುತ್ತೇನೆ.

*ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಮಾನ್ಯ ಅಧ್ಯಕ್ಷರೇ, ಇಷ್ಟೊಂದು ಹೊತ್ತು ಕುಳಿತು ಕಾದಿದ್ದಕ್ಕೆ ಮಾನ್ಯ ಅಧ್ಯಕ್ಷರು ನನಗೆ ಮಾತಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ವಂದನೆಗಳು.

ದೇಶದಲ್ಲಿ ಆಹಾರದ ಅಭಾವ ಮತ್ತು ಕ್ಷಾಮ ಪರಿಸ್ಥಿತಿ ನಾಲ್ಕು ಜಿಲ್ಲೆಗಳಲ್ಲಿವೆ ಎಂದು ಮಾನ್ಯ ಸಚಿವರು ನಿನ್ನೆ ದಿವಸ ಹೇಳಿದರು. ಆದರೆ ಇತ್ತೀಚಿಗೆ ನೋಡಿದರೆ ನಿಜವಾಗಿಯೂ ಉಳಿದ ಕಡೆಗಳಲ್ಲಿಯೂ ನೋಡಿದರೆ ಕ್ಷಾಮದ ಪರಿಸ್ಥಿತಿಯಿರುವುದು ನಮಗೆ ಕಾಣುತ್ತದೆ. ಆದರೆ ಸಾಮಾನ್ಯವಾಗಿ ಏನೋ ಒಂದು ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ಕ್ಷಾಮವಿದೆ ಎಂದು ಹೇಳಿ ಅದಕ್ಕಾಗಿ ಹೆಚ್ಚಿನ ಯೋಚನೆಪಡಬೇಕಾಗಿಲ್ಲವೆಂದು ಹೇಳುವುದನ್ನು ನೋಡಿ ನಮಗೆ ತುಂಬ ಶೋಚನೀಯವಾಗಿ ಕಾಣುತ್ತದೆ. ಒಂದು ಸಾರಿ ನಮ್ಮ ಮಾನ್ಯ ಅಗ್ರಿಕಲ್ಚರಲ್ ಮಿನಿಸ್ಟರು ಕೆಲವು ಕಡೆ ಭಾಷಣ ಮಾಡಿದರು, "ಈ ಆಹಾರದ ಅಭಾವವನ್ನು ಹೋಗಲಾಡಿಸಲು ತರಕಾರಿಯನ್ನು ಜಾಸ್ತಿಯಾಗಿ ಬೆಳೆಯಿರಿ, ಸೊಪ್ಪನ್ನು ಬೆಳೆಯಿರಿ ಮತ್ತು ಇದರಿಂದ ಆಹಾರದ ಅಭಾವ ನೀಗುತ್ತದೆ" ಎಂದು ಹೇಳಿದರು. ಹಾಗೆ ನಮ್ಮ ಜನಗಳು ಈಗ ಸೊಪ್ಪು ತಿನ್ನುವ ಹೊತ್ತು ಬಂದಿದೆ. ಹಾಗೆ ಮೊನ್ನೆ ಕೂಡ ಮಾನ್ಯ ಅಗ್ರಿಕಲ್ಚರ್ ಮಿನಿಸ್ಟರು ಭಾಷಣವನ್ನು ಒಂದು ಕಡೆ ಮಾಡಿದ್ದನ್ನು ನಾನು ಪೇಪರ್‌ನಲ್ಲಿ ನೋಡಿದೆ. ಅವರು ಹೇಳಿದ ಹಾಗೆ ಇನ್ನು ಸೊಪ್ಪು ತಿನ್ನುವ ಕಾಲ ಬಂತಲ್ಲ ಎಂದು ನಾನು ವಿಷಾದಪಡಬೇಕಾಗಿದೆ. ಏಕೆಂದರೆ ಮನುಷ್ಯನಿಗೆ ಬೇಕಾಗಿರುವುದು ಆಹಾರ, ಬಟ್ಟೆ, ನೀರು ಮತ್ತು ಗಾಳಿ. ಇವು ಬಹು ಪ್ರಾಮುಖ್ಯವಾದುವು ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಅಭಾವವಿದ್ದರೆ ವ್ಯವಸಾಯವನ್ನು ಮಾಡಿ ಹೆಚ್ಚಿನ ಬೆಳೆಯನ್ನು ಬೆಳೆದು ಸಹಾಯ ಮಾಡಬಹುದು ಎಂದು ಕೆಲವರು ಹೇಳಿದರು. ಅವರು ಹಾಗೆ ಹೇಳಿದರೆ ನಮ್ಮ ಮಂತ್ರಿಗಳು ಶಕ್ತಿಗೂಡಿ ಮತ್ತು ಪುಷ್ಟಿಕರವಾಗಿರುವುದಕ್ಕೆ ಹುಲ್ಲು, ಸೊಪ್ಪು ಇವುಗಳನ್ನು ಬೆಳೆಯಬೇಕೆಂದು ಹೇಳಿರುವುದನ್ನು ನೋಡಿ ನನಗೆ ಬಹಳ ವಿಷಾದವಾಗಿದೆ. ಆದರೆ ನಾನೇನೂ ಅವರನ್ನು ಆಕ್ಷೇಪಿಸುತ್ತಿಲ್ಲ. ರೈತರಿಗೆ ಸಾಲವಾಗಿ ವ್ಯವಸಾಯ ಕಾರ್ಯಗಳಿಗೆ ದುಡ್ಡು ಕೊಡುವಾಗ ಸಾಕಷ್ಟು ಜಾಗ್ರತೆಯಾಗಿ ಮತ್ತು ಸರಿಯಾಗಿ ಕೊಡುತ್ತಿಲ್ಲ. ಸರಕಾರವೇನೋ ಆರ್ಡರು ಮಾಡಿ ಜನಗಳಿಗೆ ಅನುಕೂಲವಾಗುವಂತೆ ಮಾಡುತ್ತಾರೆ. ಆದರೆ ಆ ಆರ್ಡರು ಸಕಾಲದಲ್ಲಿ ಅವರ ಕೈಗೆ ಸಿಕ್ಕದೆ ಜನಗಳಿಗೆ ಬಹಳ ತೊಂದರೆಯಾಗುತ್ತಿದೆ. ಆದುದರಿಂದಾಗಿ ಈಗಿರತಕ್ಕ ಮಂತ್ರಿಮಂಡಲದ ಆಡಳಿತ ಚೆನ್ನಾಗಿ ನಡೆಯುತ್ತಿಲ್ಲವೆನ್ನುವುದೇ ನಮಗೆ ಯೋಚನೆಯಾಗಿದೆ. ಈಗ ಸರಕಾರದಲ್ಲಿ ಆಡಳಿತ ಹೇಗಿದೆ ಎಂದರೆ 'ಇಮ್ಮೀಡಿಯೆಟ್'' ಎಂದಿದ್ದರೂ ಎಷ್ಟೋ ತಿಂಗಳ ದ ಮೇಲೆ ಸರಕಾರದಲ್ಲಿ ಆರ್ಡರು ಆಗುತ್ತದೆ. ಅದರಿಂದಾಗಿ ಆಯಾಯಾ ಡಿಪಾರ್ಟುಮೆಂಟುಗಳು ಸುಸೂತ್ರವಾಗಿ ಎಷ್ಟು ಸುಲಲಿತವಾಗಿ ಕೆಲಸಮಾಡುವುದಕ್ಕಾಗದೆ ಅನೇಕ ವೇಳೆ ಸಾವಕಾಶ ಆಗಿ ಜನಗಳಿಗೆ ತುಂಬ ತೊಂದರೆಯಾಗುತ್ತಿದೆ. ಅದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಾನು ಮೊನ್ನೆ ದಿವಸ ನಮ್ಮ ಜಿಲ್ಲೆಯಲ್ಲಿರುವ ಬಸವಾಪಟ್ಟಣದ ಹೋಬಳಿಯ ಕೆಲವು ಗ್ರಾಮಗಳನ್ನು ನೋಡಿದೆ. ಅಲ್ಲಿ ಕ್ಷಾಮವಿರುವುದು ಚೆನ್ನಾಗಿ ತಿಳಿಯುತ್ತದೆ. ಪರಿಸ್ಥಿತಿ ಹಾಗಿಲ್ಲ ಎಂದು ಯಾರಾದರೂ ಹೇಳಿದರೆ ನಾನು ಅವರಿಗೆ ಶರಣಾಗತನಾಗುತ್ತೇನೆ. ಹಾಗೆಯೇ ನಮ್ಮ ವ್ಯವಸಾಯ ಸಚಿವರ ಕಾನ್ಸಿಟ್ಯೂಯನ್ಸಿಗೆ ಸೇರಿದ ಹೊನ್ನಾಳಿ ತಾಲ್ಲೂಕಿನಲ್ಲಿ ಸಾಸವೆಹಳ್ಳಿ ಹೋಬಳಿ ಪ್ರದೇಶದಲ್ಲಿ ಕೆಲವು ಗ್ರಾಮಗಳಲ್ಲಿ ಇವತ್ತಿಗೂ ಕ್ಷಾಮದ ಪರಿಸ್ಥಿತಿಗೆ ಸಿಕ್ಕಿ ಜನಗಳು ತೊಂದರೆ ಪಡುತ್ತಿದ್ದಾರೆ. ಆ ಕಡೆ ಬಂದು ನೋಡಿ. ಧಾನ್ಯವೂ ಕೂಡ ಬೆಳೆದಿಲ್ಲ. ಇದನ್ನು ಪರೀಕ್ಷಿಸಬೇಕಾದರೆ ನನ್ನೊಡನೆ ಅಧಿಕಾರಿಗಳು ಬರಲಿ, ಆಗ ಅವರೂ ಇದನ್ನು ನೋಡಬಹುದು. ನಮ್ಮ ಮಂತ್ರಿಗಳೇನೋ ಟೂರುಗಳನ್ನು ಮಾಡುತ್ತಿರುತ್ತಾರೆ ಮತ್ತು ಟಿ. ಎ. ಯನ್ನು ತೆಗೆದುಕೊಳ್ಳುತ್ತಾರೆ. ಹಾಗೆ ಟಿ. ಎ. ತೆಗೆದುಕೊಳ್ಳಲಿ, ನಾವೇನೂ ಬೇಡವೆನ್ನುವುದಿಲ್ಲ. ಆದರೆ ಕೆಲಸವನ್ನು ಸಮರ್ಪಕವಾಗಿ ಮಾಡಬೇಕು ಮತ್ತು ಅವರು ಟಿ. ಎ. ತೆಗೆದುಕೊಳ್ಳುವುದಕ್ಕೂ ಅವರ ಆತ್ಮ ಒಪ್ಪಬೇಕು. ಇವೊತ್ತಿನ ಪರಿಸ್ಥಿತಿಯಲ್ಲಿ ಆಗಾಗ್ಗೆ ಇಂತಹ ಸ್ಥಳಗಳಿಗೆ ಭೇಟಿಯನ್ನು ಮಂತ್ರಿಗಳು ಕೊಟ್ಟು ಪರಿಶೀಲನೆಮಾಡಿ ಜನಗಳಿಗಿರುವ ತೊಂದರೆಯನ್ನು ಆದಷ್ಟು ಕಡಿಮೆ ಮಾಡಬೇಕು. ಹಾಲಿ ನಮ್ಮ ತಾಲ್ಲೂಕಿನಲ್ಲಿರುವ ಬಸವಾಪಟ್ಟಣದ ಕೆಲವು ಭಾಗಗಳಲ್ಲಿ ಆಹಾರದ ಅಭಾವದ ಪರಿಸ್ಥಿತಿ ಆಗಿ ಕ್ಷಾಮ ತಲೆದೋರಿದೆ. ಸರಕಾರದ ಅಧಿಕಾರಿಗಳು ಬೇಕಾದರೆ ನಾಳೆಯೇ ಹೋಗಿ ಪರಿಶೀಲಿಸಿದರೆ ನಿಜ ಎನ್ನುವುದು ಗೊತ್ತಾಗುತ್ತದೆ. ಬಾಕಿ ಇಲಾಖೆಗಳಲ್ಲಿ ಎಷ್ಟೋ ಹಣವನ್ನು ವೇಸ್ಟಾಗಿ ಖರ್ಚು ಮಾಡುತ್ತಿದ್ದಾರೆ. ಇಂತಹ ಕ್ಷಾಮಕ್ಕೆ ತುತ್ತಾಗಿರುವ ಭಾಗಗಳಿಗೆ ಹೋಗಿ ಒಂದು ಸ್ಪೆಷಲ್ ಇನ್ಸ್‌ಪೆಕ್ಷನ್ನನ್ನು ಮಾಡಿ ಅದರ ಬಗ್ಗೆ ಒಂದು ರಿಪೋರ್ಟನ್ನು ಸರಕಾರಕ್ಕೆ ಕೊಟ್ಟು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ನಮ್ಮ ರೈತರಿಗೆ ಮುಖ್ಯವಾಗಿರುವುದು ಮಳೆ. ಅದರಲ್ಲಿಯೂ ಉತ್ತರ, ಹಸ್ತ, ಚಿತ್ತ ಮತ್ತು ಸ್ವಾತಿ ಈ ಮಳೆಗಳಿಗಾಗಿ ಕಾಯುತ್ತಿರುತ್ತಾರೆ. ಇಂತಹ ಮಳೆಗಳು ಬಂದರೆ ಬೆಳೆಯನ್ನು ಬೆಳೆಯಲು ಅವರಿಗೆ ಅನುಕೂಲವಾಗುತ್ತದೆ. ಈ ರೈತಾಪಿ ಜನಗಳಿಗೆ ಇಂತಹ ಮುಖ್ಯವಾದ ಮಳೆಗಳೇ ಬಾರದೇ ಹೋದರೆ ಅವರಿಗೆ ವ್ಯವಸಾಯ ಮಾಡುವುದಕ್ಕೆ ಹೇಗೆ ಆಗುತ್ತದೆ? ಮಳೆಯೇ ಬಾರದೇ ಹೋದರೆ ರಾಗಿಯನ್ನು ಹೇಗೆ ಬೆಳೆಯುವುದಕ್ಕಾಗುತ್ತದೆ? ಇದನ್ನೆಲ್ಲ ನೀವೇ ಯೋಚಿಸಬೇಕು. ಇವತ್ತು ಇಂತಹ ಬಡಜನಗಳ ಸ್ಥಿತಿಯನ್ನು ಹೇಳುವುದಕ್ಕೆ ನಮಗೆ ಬಹಳ ಸಂಕಟವಾಗಿದೆ. ಮಂತ್ರಿಗಳು ಟೂರನ್ನು ಮಾಡಲಿ, ಟಿ.ಎ. ಯನ್ನು ತೆಗೆದುಕೊಳ್ಳಲಿ. ಹೀಗೆ ಟೂರನ್ನು ಮಾಡುವಾಗ ಕ್ಷಾಮವಿರುವ ಪ್ರದೇಶ

(ಶ್ರೀ ಕೊಂದೂರು ರುದ್ರಪ್ಪ)

ಗಳಿಗೆ ಹೋಗಿ ಅಲ್ಲಿರುವ ಸ್ಥಿತಿಗಳನ್ನೆಲ್ಲ ನೋಡಿಕೊಂಡು ಬಂದು ಏನು ಕಾರ್ಯಗಳಾಗಬೇಕು, ಏನು ರಿಲೀಫ್ ಕಾಮಗಾರಿಗಳಾಗಬೇಕು ಮತ್ತು ರೈತರಿಗೆ ಯಾವ ರೀತಿಯ ಉತ್ತೇಜನ ಕೊಡಬೇಕು ಎಂಬುದನ್ನು ನೋಡಬೇಕು. ಆಹಾರ ಪದಾರ್ಥಗಳನ್ನು ಬೆಳೆಯಲು ಸಾಲವನ್ನಾದರೂ ರೈತರಿಗೆ ಕೊಟ್ಟು ಸಹಾಯಮಾಡಬೇಕು. ಇದರಿಂದ ಮುಖ್ಯವಾಗಿ ಬೇಕಾಗಿರುವ ರಾಗಿ, ಜೋಳ ಇವುಗಳನ್ನು ಬೆಳೆಯಲು ಅನುಕೂಲವಾಗುತ್ತದೆ. ರೈತರಲ್ಲಿ ಆಹಾರ ಬೇಕಾದಷ್ಟಿದೆ, ಆದರೆ ಆ ಧಾನ್ಯಗಳನ್ನು ಮಾರಾಟ ಮಾಡಲು ಮತ ಕಟ ಒಳಗೆ ತರುತ್ತಿಲ್ಲ ಎಂದು ಕೆಲವರು ಹೇಳಿದರು. ಹೀಗೆ ಮಿತಿ ಮೀರಿದ ಸ್ಟಾಕು ಇದೆ ಎಂದು ತಿಳಿದುಬಂದಿದ್ದರೆ ಅಂತಹವರಿಗೆ ಬೇಕಾದರೆ ಸನಿಷವೆಂಟು ಬೇಕಾದರೂ ಕೊಡುವುದಾಗಿದ್ದರೆ ಕೊಡಿ. ಏಕೆಂದರೆ ನಾನು ನೋಡಿದಂತೆ ಹೀಗೆ ಹೆಚ್ಚಿನ ಧಾನ್ಯಗಳಿದ್ದರೆ ಬ್ಲಾಕ್ ಮಾರ್ಕೆಟ್ಟು ವ್ಯಾಪಾರಕ್ಕೆ ಅನುಕೂಲವಾಗುತ್ತದೆ. 50 ರೂಪಾಯಿ ಪಲ್ಲಕ್ಕೆ ಇದ್ದರೆ ನೂರು ರೂಪಾಯಿಗಳವರೆಗೆ ಏರಿ ಹೋಗುತ್ತದೆ. ಇದರಿಂದ ದಿನಸಿಯ ಧಾರಣೆಗಳೆಲ್ಲ ಜಾಸ್ತಿಯಾಗಿ ಹೋಗುತ್ತವೆ. ಆದುದರಿಂದ ನಾನು ಸೂಚನೆ ಕೊಡುವುದು ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳು ಕ್ಷಾಮವಿರುವ ಪ್ರದೇಶಗಳಿಗೆ ಹೋಗಿ ಟೂರು ಮಾಡಬೇಕು. ಇದರಿಂದ ಟಿ. ಎ. ಹೆಚ್ಚಾದರೂ ಚಿಂತೆಯಿಲ್ಲ. ಹೀಗೆ ಟೂರನ್ನು ಮಾಡಿ ಅಲ್ಲಿರುವ ಜನಗಳ ಕಷ್ಟವನ್ನು ನೋಡಿ ಅವರಿಗೆ ತಕ್ಕಷ್ಟು ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಹೀಗೆ ಮುಂದಿನ ಸೆಷನ್ನಿನ ಹೊತ್ತಿಗಾದರೂ ಈ ಅಭಾವವಿರುವ ಪ್ರದೇಶಗಳಿಗೆ ಹೋಗಿ ನಮ್ಮ ಜನಗಳಿಗೆ ಸಹಾಯ ಮಾಡಬೇಕೆಂದು ಕೋರುತ್ತೇನೆ. ದೇಶದಲ್ಲಿ ಈ ಹಾಹಾಕಾರವಿರುವ ಕಡೆಗಳಲ್ಲಿ ಸ್ವಲ್ಪ ಮಟ್ಟಿಗಾದರೂ ಅವಕಾಶ ಮಾಡಿಕೊಂಡು ಪ್ರವಾಸ ಮಾಡಬೇಕಾದದು ಬಹಳ ಅಗತ್ಯ. ಈ ರೀತಿಯಾಗಿರುವ ಪರಿಸ್ಥಿತಿ ಎಲ್ಲೆಲ್ಲಿದೆಯೋ ಅಲ್ಲಿಗೆ ನಮ್ಮ ಮುಖ್ಯಮಂತ್ರಿಗಳು, ಪಿ.ಡಬ್ಲ್ಯು.ಡಿ. ಮಂತ್ರಿಗಳು, ಹಣಕಾಸಿನ ಸಚಿವರು ಎಲ್ಲರೂ ಟೂರನ್ನು ಮಾಡಿದರೆ ನಷ್ಟವೇನೂ ಆಗುವುದಿಲ್ಲ. ಆದರೆ ಎಲ್ಲರೂ ಒಟ್ಟಿಗೆ ಒಂದೇ ಕಡೆಗೆ ಹೋಗಬಾರದು ಅಷ್ಟೆ. ಈಗ ನೀವು ಕಡಲೆ ಕೊಬ್ಬರಿ ಕಾಯಿ ಹಂಚಿದಂತೆ ಎರಡು ಲಕ್ಷ ರೂಪಾಯಿಗಳನ್ನು ಹಂಚಿದರೆ ದೇಶ ಉದ್ಧಾರವಾಗುತ್ತದೆಯೋ ಎನ್ನುವುದನ್ನು ತಾವು ಆಲೋಚನೆ ಮಾಡಬೇಕು. ನಾನು ಆಗಾಗ್ಗೆ ಈ ಪರಿಸ್ಥಿತಿಯ ಬಗ್ಗೆ ಹೇಳುತ್ತಿದ್ದರೂ ಕೂಡ ಅಂತಹ ಪರಿಸ್ಥಿತಿಯೇನೂ ಕಾಣುವುದಿಲ್ಲ ಎಂದು ಹೇಳುವುದು ಬಹಳ ಶೋಚನೀಯವಾಗಿದೆ. ಅದನ್ನು ಕೇಳಿ ನನಗೆ ಬಹಳ ವ್ಯಥೆಯೂ ಆಗುತ್ತದೆ. ಇದು ದೊಡ್ಡ ಸಮಸ್ಯೆ. ಆದಕಾರಣ ಈ ರೀತಿಯಾದ ಒಳ್ಳೆಯ ಕೆಲಸಗಳನ್ನು ಮಾಡಲು ದೇವರು ಸಾಕಷ್ಟು ಶಕ್ತಿಯನ್ನು ತಮಗೆ ಕೊಡಲಿ ಎಂದು ನಾನು ತಮ್ಮಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಚಾಮಯ್ಯ (ಪಾಂಡವಪುರ).—ಸ್ವಾಮಿ, ಈ ಸಭೆಯಲ್ಲಿ ನಿನ್ನೆಯಿಂದಲೂ ಕ್ಷಾಮ ಮತ್ತು ಆಹಾರ ಪರಿಸ್ಥಿತಿಯ ಬಗ್ಗೆ ಬಹಳ ಚರ್ಚೆ ನಡೆದಿದೆ. ಅನೇಕ ಸದಸ್ಯರು ಮಾತನಾಡುತ್ತ ಆಹಾರ ಹೆಚ್ಚಿಗೆ ಬೆಳೆಯುವುದಕೋಸ್ಕರ ಅನೇಕ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಕೆರೆ ಕಟ್ಟೆಗಳ ನಿರ್ಮಾಣ ಮಾಡಬೇಕು, ಕೆರೆಗಳನ್ನು ರಿಪೇರಿ ಮಾಡಬೇಕು, ಹೊಸ ಕೆರೆಗಳನ್ನು ಕಟ್ಟಬೇಕು ಎಂದು ಹೇಳಿದ್ದಾರೆ. ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಪೂರ್ತಿ ಮಾಡುವುದಕ್ಕೆ 10-15 ವರ್ಷಗಳು ಹಿಡಿಯುತ್ತವೆ. ಆದುದರಿಂದ ಅವುಗಳಿಂದ ಪ್ರತಿಫಲ ಬೇಗ ಸಿಕ್ಕುವುದಿಲ್ಲ. ಆದುದರಿಂದ ಮೈನರ್ ಮತ್ತು ಮೇಜರ್ ಕೆರೆಗಳನ್ನು ದುರಸ್ತಿ ಮಾಡುವುದಕ್ಕೆ ಸರಕಾರ ಪ್ರಯತ್ನ ಪಡಬೇಕು. ಪ್ರತಿಫಲ ಬೇಗ ದೊರೆಯುವಂತೆ ಮಾಡಬೇಕು. ಅಲ್ಲದೆ ಹೆಚ್ಚು ಆಹಾರ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ರೈತರಿಗೂ ಸಹ ಅನುಕೂಲವಾಗುತ್ತದೆ. ಮಳೆ ಇಲ್ಲದೆ ರಾಗಿ, ಜೋಳದ ಫಸಲು ಸಿಕ್ಕಿಲ್ಲ. ಈಗ ರಾಗಿ ಸಿಕ್ಕುವುದಿಲ್ಲ. ಈ ಕಾರಣದ ಮೂಲಕ ಮುಂದಿನ ವರ್ಷ ಬಹಳ ಕಷ್ಟ ಅನುಭವಿಸಬೇಕಾಗುತ್ತದೆ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಹತ್ತು ವರ್ಷಗಳಾದವು. ಆಹಾರ ಒದಗಿಸುತ್ತೇವೆಂದು ವಾಗ್ದಾನ ಮಾಡುತ್ತಿದ್ದಾರೆಯೇ ಹೊರತು ಈ ಬೇಜವಾಬ್ದಾರಿ ಸರಕಾರ ಜನರಿಗೆ ಅನ್ನ ಒದಗಿಸಿಲ್ಲ. ದೇಶದಲ್ಲಿ ಅನ್ನದ ಕೊರತೆ ಇರಬಾರದು. ಅಧಿಕಾರಕ್ಕೆ ಬಂದು ಹತ್ತು ವರ್ಷಗಳಾದರೂಕೂಡ ಆಹಾರದ ಕೊರತೆ ಹೋಗಿಲ್ಲ. ಅನೇಕ ಪ್ಲಾಟ್‌ಫಾರಮ್ಮಿನ ಮೇಲೆ ಬರೀ ವಾಗ್ದಾನ ಮಾಡಿದ್ದಾರೆ. ಜನರು ಮಾತ್ರ ತೊಂದರೆ ಪಡುತ್ತಿದ್ದಾರೆ. ಆದಕಾರಣ ಆಹಾರದ ಕೊರತೆಯ ಬಗ್ಗೆ ಗಮನ ಕೊಡಬೇಕು.

ಇನ್ನು ವ್ಯವಸಾಯ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸಕಾಲದಲ್ಲಿ ಗೊಬ್ಬರ, ಉತ್ತಮ ಬೀಜ ರೈತರಿಗೆ ತಲುಪುವಂತೆ ಏರ್ಪಾಡು ಮಾಡಬೇಕು. ಜಪಾನೀ ಪದ್ಧತಿಯಿಂದ ಭತ್ತ ಬೆಳೆಯುವುದು ಬಂದಿದೆ. ಈ ಪದ್ಧತಿಯನ್ನು ಉಪಯೋಗಿಸಲು ಅಧಿಕಾರಿಗಳಿಗೆ ಹೇಳಬೇಕು, ರೈತರಿಗೆ ಪರಿಹಾರವನ್ನು ಕೊಡುತ್ತಾರೆಯೇ ಎಂಬುದನ್ನು ನೋಡಬೇಕು. ಮಳೆ ಬಂದುಬಿಟ್ಟರೆ, ರಾಗಿ ಬೆಳೆ ಬರುತ್ತದೆ ಎಂದು ಹೇಳಿಬಿಟ್ಟರೆ ಅದು ನಿಜಕ್ಕೂ ದೂರವಾದುದು. ಮಳೆ ಇಲ್ಲದ ಮೂಲಕ ಬೆಳೆ ಒಣಗಿ ಹೋಗಿದೆ. ದೇಶದಲ್ಲಿ ಈಗ ಆಹಾರದ ಕೊರತೆ ಇಲ್ಲವೇ? ದನಗಳಿಗೆ ಬೇಕಾಗುವ ಹುರಳಿ ಬೆಳೆದರೆ ಏನೂ ಪ್ರಯೋಜನವಾಗುವುದಿಲ್ಲ. ಹಳ್ಳಿಗಳಲ್ಲಿ ಆಹಾರ ಧಾನ್ಯಗಳ ಡಿಪೋ ಏರ್ಪಾಡು ಮಾಡಿದ್ದಾರೆಯೇ? ಹಳ್ಳಿಗಳಲ್ಲಿಯ ಜನರಿಗೆ ಆಹಾರ ಒದಗಿಸದೆ ಇರುವುದು ನ್ಯಾಯವೇ ಎಂದು ಪ್ರಶ್ನೆ ಮಾಡುತ್ತೇನೆ. ನಮ್ಮ ರಾಜ್ಯದ ಎರಡು ಕೋಟಿ ಜನರಿಗೆ ಸಕಾಲದಲ್ಲಿ ಆಹಾರ ಒದಗಿಸುವಂತೆ ಸರಕಾರ ಏರ್ಪಾಡು ಮಾಡಬೇಕು. ಆಹಾರದ ಕೊರತೆಯನ್ನು ಹೋಗಲಾಡಿಸಬೇಕು ಎಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಇ. ಪುಂಡಲೀಕಪ್ಪ (ಕುಷ್ಟಗಿ).—ಮಾನ್ಯ ಅಧ್ಯಕ್ಷರೇ, ಈ ದಿವಸ ಆಹಾರದ ವಿಷಯದಲ್ಲಿ ಸಾಕಷ್ಟು ಚರ್ಚೆಯಾಗಿದೆ. ನಾನು ಇದೇ ವಿಷಯದಲ್ಲಿ ಒಂದೆರಡು ವಿಷಯಗಳ ಬಗ್ಗೆ ಹೇಳಬಯಸುತ್ತೇನೆ. ಆಹಾರದ ಬಗ್ಗೆ ಕೊಡುವ ಅಂಕಿ ಸಂಖ್ಯೆಗಳು ಸರಿಯಾಗಿ ಇರುವುದಿಲ್ಲ. ಆಹಾರದ ಪರಿಸ್ಥಿತಿ ಸುಧಾರಿಸಿಲ್ಲ. ಹಳ್ಳಿಗಳಲ್ಲಿ ಗ್ರಾಮಾಧಿಕಾರಿಗಳು ಮನೆಯಲ್ಲಿಯೇ ಕುಳಿತುಕೊಂಡು ಆಹಾರದ ಪರಿಸ್ಥಿತಿಯ ಬಗ್ಗೆ ಅಂಕಿ ಸಂಖ್ಯೆಗಳನ್ನು ದೇವರು ಅವರಿಗೆ ಏನು ಬುದ್ಧಿ ಕೊಡುತ್ತಾನೆಯೋ ಅದರಂತೆ ಏನನ್ನಾದರೂ ಬರೆದು ಕೊಟ್ಟುಬಿಡುತ್ತಾರೆ. ಆದಕಾರಣ ಅವು ಸರಿಯಾಗಿಲ್ಲ. ಹೈದ್ರಾಬಾದ್ ಕರ್ನಾಟಕದ ಪ್ರದೇಶದಲ್ಲಿ ಅಣೆವಾರಿ ಪದ್ಧತಿ ಸರಿಯಾಗಿಲ್ಲ. ಆದ್ದರಿಂದ ಅಣೆವಾರಿ ಸರಿಯಾಗಿ ಆಗುವುದಿಲ್ಲ. ಹೋದಸಲ ರೆವೆನ್ಯೂ ಮಂತ್ರಿಗಳು ಗಂಗಾವತಿ ತಾಲ್ಲೂಕಿಗೆ ಬಂದಾಗ್ಗೆ ನಮ್ಮಲ್ಲಿ ಸಾಕಷ್ಟು ಬೆಳೆ ಬಂದಿಲ್ಲವೆಂದು ತಿಳಿಸಲಾಯಿತು. ಆದರೆ ಅವರು ಕೆಳಗಿನ ಅಧಿಕಾರಿಗಳು ಎಂಟಾಣೆ ಪೀಕ ಬಂದಿದೆ ಮತ್ತು ರಿಕಾರ್ಡು ಆರೀತಿ ಇದೆ ಎಂದು

ಉತ್ತರ ಕೊಟ್ಟರು. ಆದರೆ ನಿಜವಾದ ಪರಿಸ್ಥಿತಿ ಸರಿಯಾಗಿಲ್ಲ. ಅಣೆವಾರಿ ರಿಪೋರ್ಟು ಮಾಡುವ ಪದ್ಧತಿ ಸರಿಯಾಗಿಲ್ಲ. ಹಳ್ಳಿಗಳಲ್ಲಿ ಪಂಚಜನರ ಸಮಕ್ಷಮ ಅಣೆವಾರಿ ಮಾಡಬೇಕು. ಇದನ್ನು ಒತ್ತಾಯ ಪೂರ್ವಕವಾಗಿ ಹೇಳಬಯಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಬರಗಾಲ ಪರಿಸ್ಥಿತಿಯಿದೆ. ಅಲ್ಲಲ್ಲಿ ಕೆಲವು ಪರಿಹಾರ ಕಾಮಗಾರಿಗಳನ್ನು ನಮ್ಮ ಸರಕಾರ ವರು ಪ್ರಾರಂಭ ಮಾಡಿದ್ದಾರೆ. ರಸ್ತೆಯ ರಚನೆಯ ಕೆಲಸ ತೆಗೆದು ಕೊಂಡಿದ್ದಾರೆ. ನಾನು ಈ ಬಗ್ಗೆ ಗುಲ್ಬರ್ಗಾ ಕಮಿಷನರೊಡನೆ ವಿಚಾರ ಮಾಡಿದ್ದೆ. ಕೆರೆ, ರಸ್ತೆ ಕೆಲಸದ ಸಲುವಾಗಿ 40 ಸಾವಿರ ರೂಪಾಯಿ ಮಂಜೂರು ಮಾಡುತ್ತೇವೆಂದು ಹೇಳಿದ್ದರು. ಇಷ್ಟು ಹಣ ಒಂದು ರಸ್ತೆಯ ರಚನೆಗೆ ಖರ್ಚಾಗಬಹುದು. ನಮ್ಮ ತಾಲ್ಲೂಕಿನಲ್ಲಿ ಒಂದು ಎಕರೆ ನೀರಾವರಿ ಇಲ್ಲ. ಬಿಜಾಪುರ ಜಿಲ್ಲಾ ಮತ್ತು ನಮ್ಮ ತಾಲ್ಲೂಕಿನ ಪರಿಸ್ಥಿತಿ ಒಂದೇ ರೀತಿಯಾಗಿ ಇದೆ. ನಮ್ಮ ತಾಲ್ಲೂಕಿನಲ್ಲಿ ಬರಗಾಲ ಪರಿಸ್ಥಿತಿ ಬಹಳ ಉತ್ಕಟವಾಗಿದೆ. ಪರಿಹಾರ ಕಾಮಗಾರಿಗಳನ್ನು ನಿಲ್ಲಿಸದೆ, ಮುಂದುವರಿಸಿಕೊಂಡು ಬರಬೇಕು ಎಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಪ್ರತಿವರ್ಷ ಬೆಳೆಗಳು ಸಾಕಷ್ಟು ಚನ್ನಾಗಿ ಬರುವುದಿಲ್ಲ. ಈ ವರ್ಷ ಉತ್ತರೀ ಮಳೆಯು ಆಗಿದ್ದರೆ ಉತ್ತಮ ಆಗುತ್ತಿತ್ತು. ಕಾಳು ಆಗುವ ವೇಳೆಯಲ್ಲಿ ಮಳೆ ಹೋಯಿತು. ಇದರಿಂದ ಶೇಂಗಾ ಬೆಳೆ ಕೂಡ ಹೋಯಿತು. ಮಾಗಿ ಮತ್ತು ಉತ್ತರೀ ಮಳೆಯಾಗ ಬೇಕಾಗಿತ್ತು.

ಆದರವೇಳೆ ಮಳೆ ಆಗದೆ ಬೆಳೆಗಳೆಲ್ಲಾ ಕಂದಿ ಹೋಗಿ ನಿಂತುಬಿಟ್ಟಿವೆ. ಉತ್ತರೆ ಮಳೆ ಆಗಲಿಲ್ಲ. ಈ ವರ್ಷ ರೋಡಿನ ಕೆಲಸ ಶುರು ಮಾಡಿದ್ದಾರೆ. 30 ಸಾವಿರ ರೂಪಾಯಿ ಖರ್ಚು ಆಗಿ ಕೆಲಸ ಮುಗಿಯುಯುತ್ತಾ ಬಂದಿದೆ. ಸರ್ಕಾರಕ್ಕೆ ಈ ಕೆಲಸವನ್ನು ಇನ್ನೂ ಕೆಲವು ದಿವಸ ಮುಂದುವರಿಸಬೇಕು ಎಂದು ಜನರು ಅರ್ಜಿ ಕಳುಹಿಸಿ ಕೊಟ್ಟಿದ್ದಾರೆ. ಈ ವರ್ಷದ ಮಟ್ಟಿಗೆ ಇದಷ್ಟು ಕೆಲಸಗಳನ್ನು ತೆಗೆದುಕೊಂಡು ಮುಂದುವರಿಸಬೇಕು.

ಎರಡನೆಯ ವಿಷಯ. ನಮ್ಮ ತಾಲ್ಲೂಕಿನೊಳಗೆ ಇಲ್ಲಿಯವರೆಗೂ ಯಾವ ನೀರಾವರಿ ಯೋಜನೆಗಳನ್ನೂ ತೆಗೆದುಕೊಂಡಿಲ್ಲ. ಇಲ್ಲಿ ಕೇವಲ ನಾಲ್ಕು ಕೆರೆಗಳಿವೆ. ಈ ವರ್ಷ ಈ ಕೆರೆಗಳ ಕೆಲಸವನ್ನು ಸರ್ಕಾರದವರು ಮಾಡಿಸಬೇಕೆಂದು ಅಲ್ಲಿಯ ಜನರು ಬೇಡಿಕೊಂಡಿದ್ದಾರೆ. ಅದನ್ನು ಮಾಡುತ್ತೇವೆಂದು ಯಾವ ಉತ್ತರವೂ ಬಂದಿಲ್ಲ. ನಮ್ಮ ತಾಲ್ಲೂಕಿನೊಳಗೆ ಈ ಕೆರೆಗಳ ಕೆಲಸವನ್ನು ಕೂಡಲೇ ತೆಗೆದುಕೊಳ್ಳಬೇಕು. ನಿರಾವರಿಗೆ ಹೆಚ್ಚು ಅನುಕೂಲಮಾಡಿಕೊಟ್ಟರೆ ಆಹಾರ ಹೆಚ್ಚು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಇಲ್ಲಿ ಬರಗಾಲ ಹೆಚ್ಚುತ್ತಾ ಇದೆ. ಕುಷ್ಟಗೀ-ಶ್ರಾದಿಗುಪ್ಪೆ ರೋಡಿಗೆ ದುಡ್ಡು ಸ್ಯಾಂಕ್ಷನ್ ಆಗಿದೆ. ಆದರೆ ಕೆಲಸ ಆರು ತಿಂಗಳಿಂದ ನಿಲ್ಲಿಸಿಬಿಟ್ಟಿದ್ದಾರೆ. ಸೂಪರಿಂಟೆಂಡಿಂಗ್ ಇಂಜಿನಿಯರ್ ಯರಮರಸರವರು ನಮ್ಮ ತಾಲ್ಲೂಕಿಗೆ ಭೇಟಿ ಕೊಟ್ಟಾಗ್ಗೆ ಈ ವಿಷಯ ತಿಳಿಸಿದ್ದೆ. ಅವರು ಈಗ ತೀವ್ರ ಕೆಲಸ ಶುರುಮಾಡುತ್ತೇವೆಂದು ಹೇಳಿದ್ದರು. ಇನ್ನೂ ಮಾಡಿಲ್ಲ. ಅಲ್ಲಿ ಕೆಲಸ ಶುರು ಮಾಡಿದರೆ ಬಡ ಕೂಲಿಗಾರರಿಗೆ ಅನುಕೂಲವಾಗುತ್ತದೆ. ಆದ್ದರಿಂದ ಕೆಲಸ ಶುರುಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ವಕ್ಕಲುತನ ಖಾತೆಯ ವಿಷಯದಲ್ಲಿ ಗೊಬ್ಬರ ಮತ್ತು ಬೀಜಗಳನ್ನು ಅವರು ಸರಿಯಾಗಿ ಒದಗಿಸುವುದಿಲ್ಲ ಎಂಬುದು ನನ್ನದು ಕಂಪ್ಲೇಂಟ್ ಇದೆ. ಈ ವಿಚಾರದಲ್ಲಿ ಕೆಳಗಿನ ಅಧಿಕಾರಿಗಳು ಸರಿಯಾಗಿ ಕೆಲಸಮಾಡುತ್ತಾ ಇಲ್ಲ ಎಂದು ಮಂತ್ರಿಗಳನ್ನು ಭೇಟಿಮಾಡಿ ಹೇಳಿದೆ. ಕೂಡಲೆ ಇಲ್ಲಿಂದ ವೈರ್ ಹೋಯಿತು. ಅದು ಹೋದನಂತರ ಅಲ್ಲಿಗೆ ಗೊಬ್ಬರ ಹೋಯಿತು. ಕೆಳಗಿನ ಅಧಿಕಾರಿಗಳು ವೇಳೆ ವೇಳೆಗೆ ಸರಿಯಾಗಿ ಕೆಲಸ ಮಾಡುವುದಕ್ಕೆ ನಮ್ಮ ಮಂತ್ರಿಗಳು ಸರಿಯಾಗಿ ಮಾರ್ಗದರ್ಶನ ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ತಾಲ್ಲೂಕಿನೊಳಗೆ ಅಗ್ರಿಕಲ್‌ಚರಲ್ ಆಫೀಸಿನಲ್ಲಿ ಎಳೆಂಟು ಮಂದಿ ಇದ್ದಾರೆ. ಆದರೂ ಆ ತಾಲ್ಲೂಕಿನಲ್ಲಿ ವಕ್ಕಲುತನ ಖಾತೆ ಇದೆಯೋ ಇಲ್ಲವೋ ಎಂದು ಸಂಶಯ ಬಂದಿದೆ. ಅವರು ಹಳ್ಳಿಗಳಿಗೆ ಹೋಗುವುದೇ ಇಲ್ಲ. ಲೈಬ್ರರಿ, ಕ್ಲಬ್ಬುಗಳಿಗೆ ಹೋಗುತ್ತಿರುತ್ತಾರೆ. ನಮ್ಮ ಕಷ್ಟಗಳನ್ನು ಎಷ್ಟು ಬರೆದುಕೊಂಡರೂ ಯಾರಲ್ಲಿ ಹೇಳಿದರೂ ಏನೂ ನಿವಾರಣೆ ಆಗುತ್ತಾ ಇಲ್ಲ. ಎಲ್ಲಿ ಹೇಳಿಕೊಳ್ಳಬೇಕು ? ನಮ್ಮ ಆಹಾರಪರಿಸ್ಥಿತಿ ದೇಶದ ಪರಿಸ್ಥಿತಿ ವಕ್ಕಲುತನದ ಖಾತೆಯನ್ನು ಅವಲಂಬಿಸಿದೆ. ಅದು ಉನ್ನತ ಮಟ್ಟದಲ್ಲಿ ಕೆಲಸಕಾರ್ಯಗಳನ್ನು ಮಾಡಬೇಕು. ಆದ್ದರಿಂದ ತಾಲ್ಲೂಕು ಅಗ್ರಿಕಲ್‌ಚರಲ್ ಆಫೀಸುಗಳಲ್ಲಿ ಕೆಲಸವನ್ನು ಸರಿಯಾಗಿ ಮಾಡುವುದಕ್ಕೆ ಹೇಳಬೇಕು ಎಂದು ನಮ್ಮ ಮಂತ್ರಿಗಳಿಗೆ ವಿನಯಪೂರ್ವಕವಾಗಿ ಮತ್ತು ನಮ್ರಭಾವದಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಕೊನೆಯದಾಗಿ ಒಂದು ಮಾತು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಹಿಂದಿನ ವರ್ಷ ಬೆಳೆಯಿಲ್ಲ. ಈ ವರ್ಷ ಬಹಳತೊಂದರೆ ಆಗುವ ಸಂಭವವಿದೆ. ಅದರ ಸಲುವಾಗಿ ಜನಗಳು ಬಹಳ ತೊಂದರೆಗೆ ಒಳಗಾಗಿದ್ದಾರೆ. ಮುಂದೆ ಇದಕ್ಕೂ ಹೆಚ್ಚಿಗೆ ತೊಂದರೆಬರುತ್ತದೆ. ನಮ್ಮ ತಾಲ್ಲೂಕಿಗೆ ಮಂತ್ರಿಗಳು ಬರುವುದಿಲ್ಲ. ವರ್ಷಕ್ಕೊಮ್ಮೆ ಅಥವಾ ಎರಡು ವರ್ಷಕ್ಕೆ ಬರುತ್ತಾರೆ. ಆದ್ದರಿಂದ ಅಲ್ಲಿನ ಪರಿಸ್ಥಿತಿ ಅವರಿಗೆ ಗೊತ್ತಾಗುವುದಿಲ್ಲ. ಮಾನ್ಯ ಅರ್ಥ ಸಚಿವರು ನಮ್ಮಲ್ಲಿಗೆ ಬಂದು ಅಲ್ಲಿಯ ವಿಷಯಗಳನ್ನು ನೋಡಿಕೊಂಡು ಬಂದಿದ್ದಾರೆ. ರೆವಿನ್ಯೂ ಮಂತ್ರಿಗಳೂ ನಮ್ಮ ತಾಲ್ಲೂಕಿಗೆ ಭೇಟಿಕೊಟ್ಟು ಅಲ್ಲಿಯ ಪರಿಸ್ಥಿತಿ ತಿಳಿದುಕೊಂಡು ಏನು ಮಾಡುವುದು ಯೋಗ್ಯವಿದೆ ಎಂದು ಕಾಣುತ್ತದೋ ಅದನ್ನು ಮಾಡಿರಿ. ನಿಮ್ಮ ಕೆಳಗಿನ ಆಫೀಸರ ರಿಪೋರ್ಟ್ ತೆಗೆದುಕೊಂಡು ಮಾನ್ಯ ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ನೀವೇ ಸ್ವತಃ ಬಂದು ವಿಚಾರಮಾಡಿಕೊಂಡು ಅನುಕೂಲ ಮಾಡಿಕೊಡಬೇಕು. ಈ ವರ್ಷದ ಮಟ್ಟಿಗೆ ತೀವ್ರವಾಗಿ ಬರಗಾಲದ ಕಾಮಗಾರಿಗಳಿಗೆ ಇನ್ನಷ್ಟು ದುಡ್ಡು ಕೊಡಬೇಕು ಎಂದುಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯು ನಮ್ಮ ದೇಶಕ್ಕೆ ಉತ್ತರದಕಡೆ ಸೀಡೆಡ್ ಡಿಸ್ಟ್ರಿಕ್ಟಿಗೆ ಲಗತ್ತು ಆದ ಪ್ರದೇಶ ಎಂದು ತಮಗೆಲ್ಲರಿಗೂ ತಿಳಿದೇ ಇದೆ. ಸೀಡೆಡ್ ಡಿಸ್ಟ್ರಿಕ್ಟಿನಲ್ಲಿ ಯಾವಾಗಲೂ ಕ್ಷಾಮ ಉಂಟಾಗಿ ಜನಗಳು ಪರಿತಪಿಸುತ್ತಿದ್ದಾರೆ. ಎನ್ನುವುದನ್ನು ತಾವೆಲ್ಲಾ ಕೇಳಿದ್ದೀರಿ. ಕೋಲಾರ ಜಿಲ್ಲೆಯವರಾದ ನಾವೂ ಕೂಡ ಇಂಥ ಕಷ್ಟದಿಂದ ದೂರವಾಗಿಲ್ಲ. ಪದೇ ಪದೇ ಕ್ಷಾಮ ಬೇನೆಯಿಂದ ಬೇಯುತ್ತಿದ್ದೇವೆ. ಕಳೆದ ಕ್ಷಾಮದಲ್ಲಿ ನಾವು ಪಟ್ಟಂಥ ಕಷ್ಟವನ್ನು ಮತ್ತೆ ನೆನೆಸಿಕೊಳ್ಳುವುದಾದರೆ ಹೃದಯ ಕಂಪನವಾಗುತ್ತದೆ. ಅಷ್ಟೊಂದು ಕಷ್ಟವನ್ನು ನಾವು ಅನುಭವಿಸಿದೆವು. ಇಂಥ ಪರಿಸ್ಥಿತಿಯಲ್ಲಿ ಕ್ಷಾಮ ಮತ್ತೆ ಪ್ರಾಪ್ತವಾದರೆ ಸರ್ಕಾರಕ್ಕೆ ಮತ್ತಷ್ಟು ಕಷ್ಟವಾಗುತ್ತದೆ. ಸಂಸ್ಥಾನದ ಅನೇಕ ಪ್ರದೇಶಗಳು

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಕ್ಷಾಮಕ್ಕೆ ಈಡಾಗುವುದಕ್ಕೆ ಪ್ರಾರಂಭವಾಗಬೇಕಾದರೆ ಕೋಲಾರದವರಾದ ನಮ್ಮ ಪಾಡೇನು ಎಂದು ಹೆದರಿಕೆಯಾಗುತ್ತದೆ. ನಿಜ, ತಾತ್ಕಾಲಿಕವಾಗಿ ಮಳೆಯಾಗಿದೆ. ಆದರೆ ಆ ಮಳೆಯ ದೆಸೆಯಿಂದ ಪರಿಸ್ಥಿತಿ ಸುಧಾರಿತವಾಗುತ್ತದೆ ಅಥವಾ ಸುಧಾರಿಸಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ರೀತಿ ಯಾರಾದರೂ ತಿಳಿದಿದ್ದರೆ ಅದು ಕೇವಲ ಭ್ರಾಂತಿ ಎಂದು ಹೇಳಬೇಕಾಗಿದೆ. ಮಳೆಯ ಅಭಾವದಿಂದ ಕ್ಷಾಮದ ಕೂಗು ಎದ್ದಿದೆ; ಮತ್ತು ಅದು ಜನಗಳಲ್ಲಿ ಕಳವಳವನ್ನು ಉಂಟು ಮಾಡಿದೆ ಎಂಬುದು ಎಲ್ಲರೂ ಒಪ್ಪತಕ್ಕ ವಿಷಯ. ಕಳೆದ ವರ್ಷದಲ್ಲಿ ಅನೇಕರು ಅಲ್ಪ ಸ್ವಲ್ಪವನ್ನು ಬೆಳೆದ ಕಾರಣ ಈ ವರ್ಷದಲ್ಲಿ ತಮ್ಮ ಜೀವನ ಯಾತ್ರೆ ನಡೆಸುತ್ತಿದ್ದಾರೆ. ಈ ವರ್ಷ ಸಾವೆ, ನವಣೆ, ವಗೈರೆ ಏನೂ ಕೂಡ ಬೆಳೆಯದೆ ಅಗ್ರಿಕಲ್‌ಚರಲ್ ಅಪರೇಷನ್ಸ್ ಇಲ್ಲದೆ ಇರುವ ಕಾರಣ ಕೂಲಿ ಮಾಡುವ ಜನಗಳಿಗೆ ಕೂಲಿ ಸಿಕ್ಕದೆ ಅವರ ಜೀವನ ಯಾತ್ರೆ ನಡೆಸುವುದೇ ಬಹಳ ಕಷ್ಟವಾಗಿದೆ. P.W.D. ಕೆಲಸಗಳಿಗೆ ಎಷ್ಟು ಮಟ್ಟಿಗೆ ಅಲಾಟ್‌ಮೆಂಟ್ ಕೊಟ್ಟಿದ್ದಾರೆಂದು ಸರ್ಕಾರದವರೇ ತಿಳಿದುಕೊಳ್ಳಬಹುದು. ಒಟ್ಟಿಗೆ ಹೇಳುವುದಾದರೆ P.W.D. ಕಾಮಗಾರಿಗಳು ಕಳೆದ ವರ್ಷ ಯಾವ ಒಂದು ಮಟ್ಟದಲ್ಲಿ ನಡೆಯುತ್ತಿತ್ತೋ ಆ ಮಟ್ಟದಲ್ಲಿ ನಡೆಯುತ್ತಿಲ್ಲ ಎಂದು ಹೇಳಿದರೆ ಉತ್ಪ್ರೇಕ್ಷೆಯಲ್ಲ. ಅಂದ ಮೇಲೆ ಕೂಲಿಯಿಂದ ಜೀವನ ಮಾಡುವವರ ಪಾಡು ಬಹಳ ಕಷ್ಟವಾಗಿದೆ. ಮಳೆಯ ಅಭಾವದಿಂದ ಧಾರಣಿವಾಸಿಗಳು ದಿನೇ ದಿನೇ ಏರಿಬಿಟ್ಟು ಅರೆಹೊಟ್ಟೆಯಲ್ಲಿ ಜೀವನ ಮಾಡುವ ಪರಿಸ್ಥಿತಿ ಒದಗಿದೆ. ಇಂಥ ಕಷ್ಟ ಪರಿಸ್ಥಿತಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಏನು ಕೆಲಸ ಪ್ರಾರಂಭಿಸಿದ್ದಾರೋ ಅವುಗಳಿಗೆ ಕೂಲಿ ಜನ ಬರುತ್ತಿಲ್ಲ ಎಂದು ಹೇಳಿದರೆ ನಿಜವಾಗಿಯೂ ಮನಸ್ಸು ಬಹಳ ನೋಯುತ್ತದೆ. ಗಾಂಧೀಜಿಯವರ ಅನುಯಾಯಿಗಳು ಆಡಳಿತ ಮಾಡುವ ಕಾಲದಲ್ಲಿ ನಮ್ಮ ದೇಶದ ಪರಿಸ್ಥಿತಿ ಏನಾಗಿದೆ ಎಂಬುದನ್ನು ನೋಡಬೇಕು. ಕಡೆಗೆ ಒಂದು ಮಾತನ್ನು ಬಿನ್ನವಿಸಿಕೊಳ್ಳುತ್ತೇನೆ. ಯಾವ ಅಧಿಕಾರಿಯೇ ಆಗಲಿ ಕಷ್ಟವನ್ನು ಮರೆ ಮಾಚದೆ ಇರತಕ್ಕ ವಾಸ್ತವಾಂಶಗಳನ್ನು ಸರ್ಕಾರದ ಗಮನಕ್ಕೆ ತಂದು ಪ್ರಜೆಗಳ ಕಷ್ಟವನ್ನು ನಿವಾರಿಸಬೇಕಾಗಿದೆ. ಹಿಂದೆ ಇದ್ದ ಸರ್ಕಾರಿ ಅಧಿಕಾರಿಗಳು ವಿಷಯಗಳನ್ನು ಮುಚ್ಚಿಕೊಳ್ಳುತ್ತಿದ್ದರು. ಪ್ರಾಣ ಹೋಗುತ್ತಿದ್ದರೂ, ಇಲ್ಲ, ತಮಾಷೆಗೋಸ್ಕರ ಸತ್ತಿದ್ದಾರೆ ಎಂದು ಸರ್ಕಾರಕ್ಕೆ ವರದಿ ಕಳುಹಿಸುತ್ತಿದ್ದರು. ಈಗಲೂ ಕೂಡ ಜಿಲ್ಲೆಯ ಜವಾಬ್ದಾರಿಯನ್ನು ಹೊತ್ತಿರತಕ್ಕ ಐ. ಸಿ. ಎಸ್. ಆಫೀಸರುಗಳು ವಾಸ್ತವಾಂಶಗಳನ್ನು ಮರೆಮಾಚಿ ಸರ್ಕಾರಕ್ಕೆ ಸುಳ್ಳು ವರದಿಯನ್ನು ಮಾಡುತ್ತಾರೆಂದರೆ ನಿಜವಾಗಿಯೂ ವ್ಯಥೆ ಪಡಬೇಕಾಗುತ್ತದೆ. ಇಂಥ ವರದಿಗಳನ್ನು ಸರ್ಕಾರದವರು ಒಪ್ಪಬಾರದು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದುವರೆಗೆ ಯಾವ ಕಾಮಗಾರಿಯನ್ನೂ ಪರಿಹಾರದ ನಿಧಿಯಿಂದ ಪ್ರಾರಂಭಿಸಿಲ್ಲ. ಯಾವಾಗ ಪ್ರಾರಂಭಿಸುತ್ತಾರೆಂದು ಜನರು ಹಾತೊರೆಯುತ್ತಿದ್ದಾರೆ. ಅವನ್ನು ಪ್ರಾರಂಭಿಸಲು ಅವಕಾಶವಿದೆ, ಪ್ರಮೇಯವಿದೆ ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಎರಡನೆಯದ ಅಧಿಕಾರಿಗಳಿಗೆ ದಯಾ ದಾಕ್ಷಿಣ್ಯ ಇರಬೇಕು. ಕೋಲಾರದ ಬಡ ನಾನ್-ಗೆಜೆಟೆಡ್ ಆಫೀಸರುಗಳು ಸಂಬಳ ಸಾಲದು ಎಂದು ಮೊರೆಯಿಟ್ಟರು. ಅವರಿಗೆ ದೊಡ್ಡ ಮನಸ್ಸು ಮಾಡಿ ಸರ್ಕಾರದವರು ಪರಿಹಾರ ನೀಡಿದರು, ದೇವರು ವರ ಕೊಟ್ಟರೂ ಪೂಜಾರಿ ವರಕೊಟ್ಟಿಲ್ಲ ಎನ್ನುವ ಹಾಗೆ ಡೆಪ್ಯುಟಿ ಕಮೀಷನರವರು, ರೆವಿನ್ಯೂ ಇಲಾಖೆಯಲ್ಲಿ ಇನ್ನೂ ಅಲೋಕೇಷನ್ ಸ್ಯಾಂಕ್ಷನ್ ಮಾಡಿಲ್ಲ. ಡಿಸ್ಟ್ರಿಕ್ಟ್ ಆಫೀಸು, ತಾಲ್ಲೂಕು ಆಫೀಸ್‌ಗಳ ಕಡೆ ನಾವು ಹೋದರೆ, ಅಲೋಕೇಷನ್ ಆಗಿಲ್ಲ. ಇಲಾಖೆಯವರು ತಡಮಾಡಿದ್ದಾರೆ ನಮಗೆ ಯಾರಿಗೂ ಪರಿಹಾರ ಬರಲಿಲ್ಲ ಎಂದು ನೌಕರರು ಹೇಳುತ್ತಾರೆ. ಕೋಲಾರ ಜಿಲ್ಲೆಯ ಡೆಪ್ಯುಟಿ ಕಮೀಷನರಿಂದ ಪ್ರತ್ಯೇಕ ಹುಕುಂ ಸಾದರು ಆಗಬೇಕು ಎಂಬುದು ನನಗೆ ಅರ್ಥವಾಗಿಲ್ಲ. ಹೀಗಿರುವಲ್ಲಿ ದೇವರು ವರ ಕೊಟ್ಟರೂ ಪೂಜಾರಿ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಇದನ್ನು ಪರಿಶೀಲಿಸಬೇಕು ಎಂದು ಹೇಳುತ್ತೇನೆ. ಕ್ಷಾಮ ವಿಚಾರಕ್ಕೆ ಬಂದಾಗ ಪರಿಸ್ಥಿತಿ ಬಹಳ ಕಠಿಣವಾಗಿದೆ ಎಂದು ಹೇಳಬೇಕಾಗಿದೆ. ಪರಿಸ್ಥಿತಿ ಬಹಳ ಕಟುತರವಾಗಿದೆ. ಈಗ ಎರಡು ಮೂರು ದಿವಸದಿಂದ ಕೊಂಚ ಮಳೆ ಆಗಿದೆ. ಆಗಿದ್ದರೂ ಸಹ, ಈಗಾಗಲೇ ರಾಗಿ ಪೈರು ಬಹಳ ಮಟ್ಟಿಗೆ ಒಣಗಿ ಹೋಗಿದೆ; ಬರತಕ್ಕ ಎಲ್ಲಾ ಮಳೆಗಳು ಬಂದರೂ, ನಾಲ್ಕು ಆಣೆ ಬೆಳೆ ಆದರೆ ಜಾಸ್ತಿ. ಅನೇಕ ಖುಷ್ಕಿ ಜಮೀನುಗಳು ಹಾಗೂ ತರೀಜಮೀನುಗಳು ಇನ್ನೂ ಬೀಳು ಬಿದ್ದಿವೆ. ಹುರುಳಿ ಬಿತ್ತನೆಗೆ ಸಹ ಕಾಲ ಮೀರಿ ಹೋಗಿದೆ. ಹೀಗಿರುವಾಗ ಆ ಜಮೀನುಗಳಿಗೆ ಕಂದಾಯ ಹೇಗೆ ಕೊಡುವುದಕ್ಕಾಗುತ್ತದೆ ? ಕಂದಾಯ ರಿಮಿಷನ್ ಮಾಡಬೇಕು.

7-30 P.M.

ಈ ಅಹಾರದ ಅಭಾವ ತಾತ್ಕಾಲಿಕವಾಗಿ ಡಿಪೋಗಳನ್ನು ತೆಗೆದಮಾತ್ರದಿಂದಲೇ ನಿವಾರಣೆಯಾಗುವುದಿಲ್ಲ. ಈ ಅಭಾವದ ಪರಿಣಾಮಗಳನ್ನು 18 ತಿಂಗಳಕಾಲ ನಾವು ಅನುಭವಿಸಬೇಕಾಗುತ್ತದೆ. ಆದಕಾರಣ 18 ತಿಂಗಳ ಕಾಲಾವಧಿಯನ್ನು ಗಮನದಲ್ಲಿಟ್ಟುಕೊಂಡು, ಅದಕ್ಕೆ ಅನುಗುಣವಾಗಿ ಪರಿಹಾರವನ್ನು ನಮಗೆ ಒದಗಿಸಬೇಕು. ಹೆಚ್ಚಿಗೆ ಡಿಪೋಗಳನ್ನು ತೆಗೆಯಬೇಕು, ಹೆಚ್ಚಾಗಿ ರಾಗಿ ಸಪ್ಲೈ ಮಾಡಬೇಕು. ಜನರಿಗೆ ಕೂಲಿ ಒದಗಿಸಬೇಕು. ಈ ಸಂದರ್ಭದಲ್ಲಿ ಹೋದಸಲ ಕ್ಷಾಮದ ಕಹಿನೆನಪು ಬರುತ್ತದೆ. ಗಜ ಕೆಲಸಕ್ಕೆ 12 ಆಣೆ ಎಂದು ನಿಗದಿ ಮಾಡಿದ್ದಾರೆ. ಮಧ್ಯವರ್ತಿಗಳು ಬಡ ಜನಗಳ ಹತ್ತಿರ ಆರು ಗಜ ಕೆಲಸ ಮಾಡಿಸಿಕೊಂಡು, ಒಂದು ರೂಪಾಯಿ ಅವರಿಗೆ ಕೊಡುತ್ತಾರೆ. ಹೀಗೆ ಲಾಭ ಬೇರೆಯವರಿಗೆ ಹೋಗಬಾರದು. ಸರ್ಕಾರ ಇನ್ನುಮೇಲಾದರೂ, ಬಡವನಿಗೆ, ಕೆಲಸಮಾಡಿದಂಥವನಿಗೆ, ನೇರವಾಗಿ ಸಹಾಯ ಮಾಡತಕ್ಕಂಥ ವ್ಯವಸ್ಥೆ ಮಾಡಲಿ. ಇದು ತಾತ್ಕಾಲಿಕ ಪರಿಹಾರ. ಕೆರೆಗಳನ್ನೆಲ್ಲಾ ದುರಸ್ತು ಮಾಡಿ. ಕೆರೆಗಳನ್ನು ದುರಸ್ತು ಮಾಡಿದರೆ ತಾನೆ, ಮಳೆಬಂದರೆ ಪ್ರಯೋಜನವಾಗುತ್ತದೆ ! ಕೋಲಾರ ಜಿಲ್ಲೆಯಲ್ಲಿ ಅರವತ್ತು ಅಡಿ ಆಳ ತೋಡಿದರೂ ಬಾವಿಯಲ್ಲಿ ನೀರು ಬರುವುದಿಲ್ಲ. ಬೋರ್‌ವೆಲ್‌ಗಳನ್ನು ತೆಗೆದು ನೀರನ್ನು ಒದಗಿಸುವ ಏರ್ಪಾಡನ್ನು ಪರಿಹಾರ ಕಾರ್ಯದಲ್ಲಿ ಸೇರಿಸಬೇಕು.

ಕೊನೆಯದಾಗಿ, ವ್ಯವಸಾಯ ನಮ್ಮ ದೇಶದ ಮುಖ್ಯ ಜೀವನ, ಪ್ರಕೃತಿ ವ್ಯತ್ಯಾಸದಿಂದ ಆಗಾಗ್ಗೆ ಬರುವ ಕಷ್ಟವನ್ನು ತಪ್ಪಿಸುವುದಕ್ಕೆ ಕೈಗಾರಿಕೆಗಳನ್ನು ಹೆಚ್ಚಾಗಿ ಮಾಡಿಕೊಟ್ಟು, ಶಾಶ್ವತವಾದ ಪರಿಹಾರವನ್ನು ಮಾಡಿಕೊಡಬೇಕು.

Sri B. BASAVALINGAPPA (Bangalore South).—How long are we sitting.

Sir? I think the Minister may require some time to reply.

Sri M. P. PATIL.—I will require about half-an-hour.

Mr. SPEAKER.—The reply would be postponed.

Sri D. T. SEETHARAMA RAO (Bhadravathi).—Shall we take it that the Assembly would meet tomorrow?

Mr. SPEAKER.—No, no; the reply will be given on the next meeting day.

Sri L. S. VENKAJI RAO.—When are we meeting again?

Mr. SPEAKER.—We will decide just now.

Sri B. K. PUTTARAMIYA.—Sir, this is not the time to discuss that point.

Sri H. M. CHANNABASAPPA.—How long are we sitting?

Mr. SPEAKER.—Up to 8. The Minister will reply when we reassemble.

*ಶ್ರೀ ಎಂ. ಕೆ. ಬಸವೇಗೌಡ (ಕೃಷ್ಣರಾಜಪೇಟೆ).—ಅಧ್ಯಕ್ಷರೆ, ಆಹಾರದ ವಿಚಾರದಲ್ಲಿ ನಿನ್ನೆಯಿಂದ ವಿಫಲವಾದ ಚರ್ಚೆಯಾಗಿದೆ. ನಾನು ಮಾತನಾಡುವುದೇ ಬಹಳ ವಿರಳ. ಈ ಮಧ್ಯೆ ಅನೇಕ ಇಂಟರಪ್‌ಷನ್‌ಗಳು ಶುರು ಆಗುತ್ತಾ ಇವೆ. ನಮ್ಮ ದೇಶ ಸ್ವತಂತ್ರವಾಗಿಲ್ಲದಿರುವಾಗ ನಾವೆಲ್ಲಾ ಈ ರೀತಿ ಭಾವಿಸಿಕೊಂಡಿದ್ದೆವು; "ರಾಜ್ಯ ನಮಗೆ ಬಂದ ಮೇಲೆ, ನಮಗೆ ನಮ್ಮ ದಾರಿದ್ರ್ಯವನ್ನು ಹೋಗಲಾಡಿಸುವ ಸಾಮರ್ಥ್ಯ ಬರುತ್ತದೆ; ಇರುವ ಅಭಾವ ಹೋಗಲಾಡಿಸಿ, ಜೀವನ ಮಟ್ಟ ಉತ್ತಮಗೊಳಿಸಬಹುದು" ಎನ್ನುವ ಮನೋಭಾವದಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಸ್ವಾತಂತ್ರ್ಯವನ್ನು ಗಳಿಸಿದೆವು. ಈಗ ಸ್ವಾತಂತ್ರ್ಯ ಬಂದು ಹತ್ತು ವರ್ಷಗಳಾದರೂ, ದೇಶದಲ್ಲಿ ಅನೇಕ ಸ್ಕೀಮುಗಳೂ, ಯೋಜನೆಗಳೂ ಆಗಿದ್ದರೂ, ನಮ್ಮ ಆಹಾರ ಅಭಾವ ಇನ್ನೂ ನೀಗಿಲ್ಲವಲ್ಲಾ ಎನ್ನುವಂಥ ಕೊರತೆ ನಮ್ಮಲ್ಲೆಲ್ಲಾ ಉದ್ಭವಿಸಿದೆ. ಇದಕ್ಕೆ ಕಾರಣ ಇಷ್ಟೆ. ನಾವು ನಮ್ಮ ನಿಗವನ್ನೆಲ್ಲಾ ಹೆಚ್ಚಿಗೆ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಿಗೆ ಕೊಟ್ಟಿದ್ದೇವೆ. ಸಣ್ಣಪುಟ್ಟ ಕೆರೆ ಕಟ್ಟೆಗಳನ್ನು ಕಟ್ಟಿ, ಅಲ್ಲಲ್ಲಿ ಭತ್ತ ಬೆಳೆಯುವುದಕ್ಕೆ ಅವಕಾಶ ಮಾಡಿದ್ದೇವೆ. ಈಗ ಸಕಾಲದಲ್ಲಿ ಮಳೆ ಆಗದೆ, ಅಕಾಲದಲ್ಲಿ ಮಳೆ ಬರುವ ಸಂಭವ ಜಾಸ್ತಿ ಆಗಿದೆ. ಈಗ ಸ್ವಾತಿ, ವಿಶಾಖ ಮಳೆ ಹೇರಳವಾಗಿ ಆಗಿ, ನೀರು ಹರಿದು ಸಮುದ್ರಗಳಿಗೆ ಸೇರಿ ಹೋಗುತ್ತಿದೆ. ಇಂತಹ ಮಳೆನೀರನ್ನೆಲ್ಲಾ ಸಣ್ಣಪುಟ್ಟ ಕೆರೆಗಳಲ್ಲಿ ಕೂಡಿಟ್ಟುಕೊಂಡರೆ, ಆಗಾಗ್ಗೆ ಸೊಪ್ಪು, ಆಹಾರಪದಾರ್ಥಗಳನ್ನು ಬೆಳೆಯುವುದಕ್ಕೆ ಸಹಾಯವನ್ನು ಮಾಡಿಕೊಂಡಹಾಗಾಗುತ್ತದೆ. ಕೆಲವು ಕೈತೋಟಗಳನ್ನು ಮಾಡಿಕೊಳ್ಳುವುದಕ್ಕೆ ಹಿಂದೆ, ಇಂಗ್ಲೀಷರು ಬರುವುದಕ್ಕೆ ಮುಂಚೆ, ಸಮಾಜ ಮತ್ತು ಸರ್ಕಾರಗಳು ಈ ಪದ್ಧತಿಗಳನ್ನು ಇಟ್ಟುಕೊಂಡು, ಕೆರೆ ಕಟ್ಟೆಗಳನ್ನು ಕಟ್ಟಿ, ದೇಶದಲ್ಲಿ ಕ್ಷಾಮ ಬಂದಾಗ ಕ್ಷಾಮ ನಿವಾರಣೆಗೆ ಈ ಅವಕಾಶಗಳನ್ನೆಲ್ಲಾ ಉಪಯೋಗಿಸಿಕೊಳ್ಳುತ್ತಾ ಇದ್ದರು. ಕೆರೆಗಳನ್ನು ಕಟ್ಟುತ್ತಾ ಇದ್ದರು ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟಿಕೊಂಡು, ದೇಶದಲ್ಲಿ ಒದಗತಕ್ಕಂಥ ಕ್ಷಾಮ ನಿವಾರಣೆ ಮಾಡಿಕೊಳ್ಳುತ್ತಾ ಇದ್ದರು. ಈವಾಗ ಹಾಗೆ ಮಾಡುತ್ತಾ ಇಲ್ಲ. ಈಗಿರತಕ್ಕಂಥ ಕೆರೆ ಕಟ್ಟೆಗಳನ್ನು ದುರಸ್ತು ಮಾಡದೆ, ನಮ್ಮ ಕೆರೆ ಕಟ್ಟೆಗಳೆಲ್ಲಾ ಬತ್ತಿ ಹೋಗಿವೆ. ಆದ್ದರಿಂದ ವರ್ಷೇ ವರ್ಷೇ ತಲೆದೋರುವ ಕ್ಷಾಮವನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರದಲ್ಲಿ ಒಂದು ಫೋರ್ಟ್‌ಫೋಲಿಯವನ್ನು ಏರ್ಪಡಿಸಬೇಕು. ಈಗ ಕೊಡುತ್ತಿರುವ ಎರಡು ಮೂರು ಲಕ್ಷರೂಪಾಯಿ ಅಲ್ಲದೆ, ಸಾಧ್ಯವಾದಷ್ಟು ಹಣವನ್ನು ಹೆಚ್ಚಾಗಿ ಇಟ್ಟುಕೊಂಡು, ಪ್ರತಿವರ್ಷವೂ ಕ್ಷಾಮ ನಿವಾರಣೆ ಕಾರ್ಯವನ್ನು ತೆಗೆದುಕೊಳ್ಳಬೇಕಾಗಿದೆ. ಆವಾಗಲೇ ಶಾಶ್ವತವಾಗಿ ಈ ಕ್ಷಾಮವನ್ನು ನಿವಾರಣೆ ಮಾಡದಕ್ಕೆ ಸಾಧ್ಯ. 1,2,3, ಲಕ್ಷ ರೂಪಾಯಿನಿಂದ ಮಾಡತಕಂಥ ಈ ತಾತ್ಕಾಲಿಕ ಏರ್ಪಾಡಿನಿಂದ ನಿವಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ.

ಇನ್ನೊಂದು ವಿಚಾರ. ಈ ಕಂಟ್ರೋಲನ್ನು ತೆಗೆದು ಹಾಕಿಬಿಟ್ಟೆವು; ಯಾರು ಬೇಕಾದರೂ ಆಹಾರ ದವಸವನ್ನು ದಾಸ್ತಾನು ಇಟ್ಟುಕೊಳ್ಳಬಹುದು; ಮತ್ತು ಕೊಂಡುಕೊಳ್ಳಬಹುದು. ಸರ್ಕಾರದವರು ದಿನಸಿ ಸಾಮಾನುಗಳನ್ನೆಲ್ಲಾ ಕೊಂಡುಕೊಂಡು ದಾಸ್ತಾನು ಮಾಡಬೇಕು; ಅವುಗಳನ್ನು ಜನಗಳಿಗೆ ಮಾರಾಟ ಮಾಡಬೇಕು. ಈ ವರ್ತಕರುಗಳಿಗೆ ದವಸಗಳನ್ನು ಕೊಂಡುಕೊಳ್ಳುವುದಕ್ಕೆ ಅವಕಾಶಕೊಡದೆ, ಸರ್ಕಾರದವರೇ ಪ್ರತಿವರ್ಷವೂ ರೈತರು ಮಾರತಕ್ಕಂಥ ದಿನಸಿಗಳನ್ನು ಕೊಂಡುಕೊಂಡು, ಸೊಸೈಟಿಗಳ ಮೂಲಕ ಮಾರಿಸುವ ಪ್ರಯತ್ನ ಮಾಡಬೇಕು. ಸುಗ್ಗಿ ಕಾಲಗಳಲ್ಲಿ ವರ್ತಕರು ಬ್ಯಾಂಕ್ ಸಂಬಂಧ ಬೆಳೆಸಿಕೊಂಡು, ರೈತರು ಕಷ್ಟಿಗೆ ಬೆಳೆದ ಆಹಾರವನ್ನು ಕೊಂಡುಕೊಂಡು, ಸ್ಟಾಕ್ ಮಾಡಿಬಿಡುತ್ತಾರೆ. ಆ ಸ್ಟಾಕ್‌ಗಳನ್ನೆಲ್ಲಾ ಕೂಡಿ ಎಂದು ಹೇಳಿದರೆ, ಅಷ್ಟು ಧರ್ಮಬುದ್ಧಿ ಅವರಿಗೆ ಇರುವುದಿಲ್ಲ. ಅವರು ಲಾಭಗಳಿಸುವ ಉದ್ದೇಶದಿಂದ ಅಭಾವ ಪರಿಸ್ಥಿತಿಯನ್ನು ತಯಾರು ಮಾಡುತ್ತಾರೆ. ದವಸಗಳನ್ನು ವರ್ತಕರು ಕೊಂಡುಕೊಳ್ಳುವುದಕ್ಕೆ ಅವಕಾಶ ಕೊಡದೆ, ಕೋ-ಆಪರೇಟೀವ್ ಸೊಸೈಟಿಗಳನ್ನು ಹೆಚ್ಚಿಸಿ ವೃದ್ಧಿಗೊಳಿಸಿ. ಹಿಂದೆ ಈ ಮಲ್ಟಿಪರ್‌ಪಸ್ ಕೋ-ಆಪರೇಟೀವ್ ಸೊಸೈಟಿ ಎಂದು ಮಾಡಿದ್ದರಲ್ಲಾ, ಆ ಸೊಸೈಟಿಗಳನ್ನು ಇವತ್ತಿನ ದಿವಸ ರೂಢಿಸಿ, ಹುರುಪುಗೊಳಿಸಿ. ಈ ಸೊಸೈಟಿಗಳು ಹುರುಪುಗೊಂಡರೆ, ದೇಶದ ಆರ್ಥಿಕ ಸಮಸ್ಯೆ ಬಗೆಹರಿಯುವುದಕ್ಕೆ ಸಹಾಯವಾಗುತ್ತದೆ. ಆದ್ದರಿಂದ ಈ ಸೊಸೈಟಿಗಳು ಅಭಿವೃದ್ಧಿ ಆಗಬೇಕು. ಸರ್ಕಾರದವರು ಆಹಾರದ ಪದಾರ್ಥಗಳನ್ನು ಕೊಂಡು, ಆಹಾರದ ಪದಾರ್ಥಗಳನ್ನು ಸೊಸೈಟಿಗಳ ಮೂಲಕವೇ ದೇಶದಲ್ಲಿ ಮಾರಾಟ ಮಾಡಿಸಬೇಕು. ಎರಡನೆಯದಾಗಿ, ನಾನು ಮಂಡ್ಯ ಡಿಸ್ಟ್ರಿಕ್ಟಿನಿಂದ ಬಂದಿರತಕ್ಕವನು. ಅಲ್ಲಿ ಎರಡು ಹೊಳೆಗಳು ಹರಿಯುತ್ತವೆ. ಒಂದು ಹೇಮಾವತಿ, ಇನ್ನೊಂದು ಕಾವೇರಿ. ಅಲ್ಲಿ ಒಂದು ಅಣೆಕಟ್ಟು ಸಹ ಇದೆ. ಅದು ಕೃಷ್ಣರಾಜಸಾಗರ. ಆದರೂ ನಮ್ಮ ಪರಿಸ್ಥಿತಿ ಹೇಗಿದೆಯೆಂದರೆ, ಯಾವ ಕಷ್ಟವೇ ಬರಲಿ, ನೀರಿನ ಅಭಾವ ಎಂಥಾದ್ದೇ ಬರಲಿ, ನಾವು ನಮ್ಮ ನೀರನ್ನು ಕೂಡಿಹಾಕಿಕೊಳ್ಳುವ ಸ್ಥಿತಿಯಲ್ಲಿಲ್ಲ. ಏಕೆಂದರೆ ಮದ್ರಾಸ್ ಮತ್ತು ಮೈಸೂರು ಸರ್ಕಾರಕ್ಕೆ ಒಂದು ಕರಾರು ಆಗಿ ನಮ್ಮ ದೇಶದಲ್ಲಿ ಹುಟ್ಟತಕ್ಕ ಹೊಳೆಗಳ ನೀರನು ನಾವು ಸ್ಟಾಕ್ ಮಾಡುವ ಹಾಗಿಲ್ಲ. ನಾವು ಸಾಕಾದಷ್ಟು ನೀರನ್ನು ಇಟ್ಟುಕೊಳ್ಳುವುದಕ್ಕೆ ಅನುಕೂಲವಿಲ್ಲದೆ ಒಂದು ಕರಾರು ಕಟ್ಟಳೆಯನ್ನು ಹಾಕಿಕೊಂಡಿದ್ದೇವೆ. ನಮ್ಮ ದೇಶದಲ್ಲಿ ಹೊಳೆಗಳಿಂದ ವ್ಯವಸಾಯಕ್ಕೆ ಎಷ್ಟು ಬೇಕೋ ಅಷ್ಟು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಒಂದು ಅವಕಾಶವನ್ನು

(ಶ್ರೀ ಎಂ. ಕೆ. ಬೊಮ್ಮೇಗೌಡ)

ಸರ್ಕಾರದವರು ಕಲ್ಪನೆಮಾಡಿಕೊಡಬೇಕೆಂದು ನನ್ನ ಸಲಹೆ. ಹೇಮಾವತಿನದಿ ಹಾಸನ ಮತ್ತು ಮಂಡ್ಯ ಜಿಲ್ಲೆಗಳ ಮೂಲಕ ಹರಿಯುತ್ತದೆ. ಅಲ್ಲಿ ಅಲ್ಪ ಖರ್ಚಿನಲ್ಲಿ ಸಾವಿರಾರು ಎಕರೆ ಜಮೀನನ್ನು ವ್ಯವಸಾಯ ಮಾಡಬಹುದು. ನಾವು ಸರ್ಕಾರದವರನ್ನು ಕೇಳಿದರೆ ಮದ್ರಾಸ್ ಸರ್ಕಾರದವರೊಡನೆ ನಾವು ಕರಾರು ಮಾಡಿಕೊಂಡಿದ್ದೇವೆ, ಆದ್ದರಿಂದ ನೀರನ್ನು ತೆಗೆದುಕೊಳ್ಳುವುದಕ್ಕೆ ನಮಗೆ ಹಕ್ಕು ಇಲ್ಲವೆಂದು ಹೇಳುತ್ತಾರೆ ದಯವಿಟ್ಟು ಆ ಕರಾರನ್ನು ತೆಗೆದುಹಾಕಿ ನಮಗೆ ನೀರನ್ನು ಒದಗಿಸುವುದಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಬೇಕೆಂದು ಸರ್ಕಾರದವರನ್ನು ಈ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

Sri D. DEVARAJ URS (Hunsur).—I move for closure, Sir.

Sri B. G. KHOT (Sadalga).—I support the closure motion, Sir.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ರಿಪ್ಲೈಗೆ ಇನ್ನೊಂದು ದಿವಸ ಇಟ್ಟುಕೊಳ್ಳಬೇಕು. ಇದು ಬಹಳ ಅಗಾಧವಾದ ಸಮಸ್ಯೆ. ಅಷ್ಟು ಸುಲಭವಾದ ಸಮಸ್ಯೆಯಲ್ಲ. ಮುಂದಿನ ಅಧಿವೇಶನ ಸಾಧಾರಣವಾಗಿ 17ನೆಯ ತಾರೀಖು ಸೇರಬಹುದು ಎಂಬುದಾಗಿ ನನಗೆ ಕೇಳಿಸಿತು. ಒಂದು ದಿವಸ ಪೂರ್ತಿಯಾಗಿ ಈ ವಿಷಯ ಚರ್ಚೆಯಾಗಿದ್ದರೂ ಇನ್ನೊಂದು ದಿವಸವಲ್ಲ ಅರ್ಧ ದಿನವಾದರೂ ಇತರ ಸದಸ್ಯರಿಗೆ ಅವಕಾಶ ಕೊಡಲು ಈ ಚರ್ಚೆಯನ್ನು ಮುಂದುವರಿಸಬೇಕು. ಅನಂತರ ಮಂತ್ರಿಗಳು ರಿಪ್ಲೈಮಾಡಲಿ.

Sri D. DEVARAJ URS.—I have already moved a closure motion and it has got to be put to the House.

Mr. SPEAKER.—That closure motion will have to be first agreed to by me and then will rise the question of putting it to the House.

Sri L. S. VENKAJI RAO.—There are other speakers who want to speak and the Speaker has promised to give them chances. Before putting the closure motion, that must be considered, Sir.

Mr. SPEAKER.—I now understand that there are nine members desiring to speak. We will have to take it up at the next session.

Sri H. M. CHANNABASAPPA.—I would submit a word and it is this. Now the debate pertains to the food situation and famine situation in the State. I would like to hear from the Government as to what arrangement they are making in order to allay fears in the minds of members and also to overcome difficulties that are confronting us; and the Speaker was pleased to say that the Government would reply 15 days hence. That would take away all the force. Therefore, I would suggest that the Government may be pleased to make a statement as to what proposals they have in order to meet the situation. That will give us a good lot of satisfaction.

Mr. SPEAKER.—Does it mean that I should not give chances to other members who want to speak? After all the Hon'ble Members cannot have both ways. If members should be given further chances, it naturally means that the Hon'ble Minister cannot speak today.

Sri H. M. CHANNABASAPPA.—It is left to the Speaker, Sir, I only expressed my anxiety to hear the Government.

Mr. SPEAKER.—Either we must hear the members or we must hear the Minister. We cannot have both ways. After all, nine members are standing up to speak. There may be some more members who want to take part in the debate. If the debate is adjourned to the next day, all members will express their views and the Hon'ble Minister can give a reply.

*Sri D. DEVARAJ URS.—When a closure motion is moved, it is also for the Speaker to use his discretion in the matter whether sufficient debate on the subject matter has taken place. That is left to the Chair. The Chair cannot plead helplessness simply because several members want to express their opinion. If in the Chair's opinion, the subject has not been sufficiently discussed, of course, there is meaning in prolonging the debate and asking the Minister to reply when we meet next. If the Chair feels that there is sufficient discussion in the matter, we can as well close the debate and I request the Government to give us their reply, Sir.

Mr. SPEAKER.—I am not going to take away the chances of any member. That is why I am now proposing that some other time may be allotted for this subject. After all, we are meeting soon and we will allot some time for this subject. Hon'ble Members who want to take part will take part in the debate and the Hon'ble Minister will reply afterwards. Since it is not merely the food situation but also the famine situation in the State, I am

not going to deprive members of their chances to speak, because Hon'ble Members may have so many things to say on the food and famine situation; I am not going to stifle the debate. This debate will be postponed. Since it is high time, other members may take their chances next time we meet.

PUBLIC ACCOUNTS COMMITTEE AND ESTIMATES COMMITTEE.

Election Results.

Mr. SPEAKER.—Before we adjourn, I prefer to make the following announcement.

At the Elections held to the Public Accounts Committee and the Estimates Committee, the following Members have been declared elected.

Public Accounts Committee.

1 Sri C. S. Hulkoti
2 Smt. Nagaratnamma Hiremut
3 Sri M. M. J. Sadyojathappiah
4 Sri K. Venkataramana Gowda
5 Sri P. G. Sidhanti
6 Sri F. X. Denis Pinto
7 Sri R. G. Kamath
8 Sri Mali Mariappa
9 Sri M. S. Patil
10 Sri Manjappa Ullal
11 Sri C. M. Arumugham
12 Sri B. D. Nayak

Estimates Committee.

1 Sri A. Muniyappa
2 Sri Y. Veerappa
3 Sri M. N. Naganoor
4 Sri K. L. Narasimhaiya
5 Sri B. T. Murnal
6 Sri K. V. Byre Gowda
7 Sri J. H. Shamsuddin
8 Sri K. G. Patil
9 Sri Mallappa Kollur
10 Sri A. R. Badri Narayan
11 Sri J. Venkatappa
12 Sri B. S. Shankarappa

Business of the House.

ಶ್ರೀ ಎಸ್. ಆರ್. ರಾಮಯ್ಯ (ಹೊಸಕೋಟೆ).—ಒಂದು ವಿಚಾರ, ನಾವು ಇಲ್ಲಿ ಬಾಯಿ ಚಪಲಕ್ಕೆ ಮಾತನಾಡಬೇಕೆಂದು ಬಂದಿಲ್ಲ. ಕ್ಷಾಮ ಪರಿಸ್ಥಿತಿ ಬಂದಿದೆ. ಆ ಬಗ್ಗೆ ನಾನು ಮಾತನಾಡಬೇಕೆಂದು ನಿಂತಿದ್ದರೂ ಪೋಸ್ಟ್‌ಪೋನ್ ಮಾಡುವುದು ಸರಿಯಾಗಿಲ್ಲ.

ಅಧ್ಯಕ್ಷರು.—ಈಗ ಎಲ್ಲರೂ ಮಾತನಾಡಬೇಕೆಂದು ಅಭಿಲಾಷೆಯುಳ್ಳವರಾಗಿದ್ದಾರೆ. ಎಲ್ಲರಿಗೂ ಅವಕಾಶ ಕೊಡಬೇಕಾಗಿದೆ. ತಾವೆಲ್ಲರೂ ಹೇಳಬೇಕಾದುದು ಎಷ್ಟೋ ಇದೆಯೆಂದು ಕಾಣುತ್ತದೆ. ಕಾಲಾವಕಾಶವನ್ನು ಕಡಿಮೆಮಾಡಿ ಎಲ್ಲರಿಗೂ ಅವಕಾಶಕೊಡುತ್ತೇನೆ.

ಶ್ರೀ ಎಸ್. ಆರ್. ರಾಮಯ್ಯ.—ಇನ್ನು 15 ದಿವಸಗಳನಂತರ ಈ ಚರ್ಚೆಯನ್ನು ತೆಗೆದುಕೊಳ್ಳುತ್ತೇವೆಂಬ ವಿಚಾರ ಈ ಸಭೆಯಲ್ಲಿ ಚರ್ಚೆಯಾದ ಹಾಗೆ ಇದೆ. ಇವತ್ತಿನ ಪರಿಸ್ಥಿತಿ ಏನಿದೆ ಎಂಬುದನ್ನು ನೋಡಬೇಕು. ನಿನ್ನೆಯ ದಿವಸವೇ ಕ್ಲೋಷರ್ ಮೋಷನ್ ಷುರುಮಾಡಿದ್ದಾರೆ.

ಅಧ್ಯಕ್ಷರು.—ಇಂತಹ ಪ್ರಶ್ನೆಯನ್ನು ನಾನು ವಿಚಾರಮಾಡುವುದಕ್ಕಾಗುವುದಿಲ್ಲ. ತಾವೂ, ನಾನೂ, ಮಂತ್ರಿಗಳೂ ಒಟ್ಟು ಕಲೆತು ವಿಚಾರ ಮಾಡಬೇಕು. ಅನೇಕರಿಗೆ ಅವಕಾಶ ಸಿಕ್ಕಿದೆ. ಈಗ ನಮ್ಮ ಮುಂದಿರುವ ವಿಚಾರ ಏನೆಂದರೆ ಮುಂದಿನ ಸಲ ನಾವು ಯಾವಾಗ ಸೇರಬೇಕೆಂಬುದು ಮಾತ್ರ. ಮಂತ್ರಿಗಳು ಇದ್ದಾರೆ. ಅವರು ಹೇಳಲಿ.

ಶ್ರೀ ಎಚ್. ಎಸ್. ರುದ್ರಪ್ಪ (ವ್ಯವಸಾಯ ಇಲಾಖೆಯ ಮಂತ್ರಿಗಳು).—ಈ ತಿಂಗಳು 16ನೆಯ ತಾರೀಖು ಪುನಃ ಸಭೆ ಸೇರಬಹುದು.

ಅಧ್ಯಕ್ಷರು.—ಈ ಸಭೆ ಮತ್ತೆ ಇದೇ ತಿಂಗಳು 16ನೆಯ: ತಾರೀಖು ಕೂಡಬೇಕೆಂಬ ಒಂದು ಆಲೋಚನೆ ಸಹ ಇವೆ.

Sri V. P. DEENADAYALU NAIDU (Cubbonpet).—The motion before the House and the manner in which it had been presented in this House indicates that it is a matter of public importance for which immediate relief is needed. If it is put off for fifteen days, we cannot know of the measures Government would be taking just now.

Sri M. P. PATIL (Minister for Revenue).—I can assure the Hon'ble Members that, as a matter of fact, Government has already taken action, even before the House decided to take up this matter for discussion. Government is paying attention to this problem and would continue to pay full attention to solve this problem.

Sri G. ANNA RAO (Afzalpur).—In his preliminary remarks, the Minister had hinted about certain steps to be taken by the Government. In view of the views expressed by Hon'ble Members, the Minister might indicate the steps being taken by the Government.